ತಿರುಮಲೆ ತಿರುಪತಿ ದೇವಸ್ಥಾನಗಳು


# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಏಪ್ರಿಲ್ 2019 ಬೆಲೆ ರೂ.5/-




ರಥಸಪ್ತಮಿ (12-02-2019) ಪರ್ವದಿನದಂದು
ತಿರುಮಲೆ ಸ್ವಾಮಿಯವರು
'ಸಪ್ತವಾಹನಗಳ' ಮೇಲೆ
ಮೆರೆಯುತ್ತಿರುವ ದೃಶ್ಯಗಳು
ಗರುಡವಾಹನ
ಸೂರ್ಯಪ್ರಭವಾಹನ
ಕಲ್ಪವೃಕ್ಷವಾಹನ
ಸರ್ವಭೂಪಾಲವಾಹನ
ಹನುಮದ್ವಾಹನ
ಚಂದ್ರಪ್ರಭವಾಹನ
ಚಿಕ್ಕಶೇಷವಾಹನ



ಕಲಿಯುಗದೊಳು ಹರಿನಾಮವ ನೆನೆದರೆ।
ಕುಲ ಕೋಟಿಗಳುದ್ಧರಿಸುವುವು
ದುರ್ಲಭ ಭಕ್ತಿಗೆ ಸುಲಭನೆಂದೆನಿಸುವ
ಜಲರುಹ ನಾಭನ ನೆನೆಮನವೆ
ಸ್ನಾನವನರಿಯೆನು ಮೌನವನರಿಯನು।
ಧ್ಯಾನವನರಿಯೆನೆಂದೆನ ಬೇಡ
ಜಾನಕಿ ವಲ್ಲಭ ದಶರಥ ನಂದನ
ಗಾನ ವಿನೋದನ ನೆನೆಮನವೆ
ಅರ್ಚಿಸಲರಿಯೆನು ಮೆಚ್ಚಿಸಲರಿಯೆನು।
ತುಚ್ಛನು ನಾನೆಂದೆನಬೇಡ
ಅಚ್ಯುತಾನಂತ ಗೋವಿಂದ ಮುಕುಂದನ
ಇಚ್ಛೆಯಿಂದ ನೀ ನೆನೆಮನವೇ
ಜಪವೊಂದರಿಯೆನುತ ಪವೊಂದರಿಯೆನು।
ಉಪದೇಶವಿಲ್ಲೆಂದೆನ ಬೇಡ
ಅಪಾರ ಮಹಿಮ ಶ್ರೀ ಪುರಂದರ ವಿಠಲನ
ಉಪಾಯದಿಂದಲಿ ನೆನೆಮನವೇ

- ಶ್ರೀ ಪುರಂದರದಾಸರು



ಯೇನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ।
ಶುಭಾಶುಭಪರಿತ್ಯಾಗೀ  ಭಕ್ತಿಮಾನ್ ಯಃ ಸ ಮೇ ಪ್ರಿಯಃ॥

- (ಶ್ರೀ ಮದ್ಭಗವದ್ಗೀತೆ ಅಧ್ಯಾಯ - 12, ಶ್ಲೋಕ -17)

ಯಾವನು ಹಿಗ್ಗದೆ ಹೇಸದೆ ದುಃಖಿಸದೆ ಕರ್ಮದ ಶುಭಾಶುಭ ಫಲಗಳಲ್ಲಿ ನಿರ್ವಿಕಾರನಾಗಿರುವನೋ, ನನ್ನಲ್ಲಿ ಭಕ್ತಿಯುಳ್ಳ ಅವನು ನನಗೆ ಪ್ರಿಯನು.

(ನಾಲ್ಕನೆಯ ದಶಕವು)

# ದಯಾ ಶತಕಮ್

- ಎನ್. ನರಸಿಂಹಾಚಾರ್ಯ



ಅಶಿಥಿಲಕರಣೇಸ್ಮಿನ್ನಕ್ಷತಶ್ವಾಸವೃತ್ತಾ ವಪುಷಿ ಗಮನಯೋಗ್ಯೇ ವಾಸಮಾಸಾದಯೇಯಂ ।
ವೃಷಗಿರಿಕಟಕೇಷು ವ್ಯಂಜಯತ್ಸು ಪ್ರತೀತ್ಯೈಃ ಮಧುಮಥನದಯೇ ತ್ವಂ ವಾರಿಧಾರಾ ವಿಶೇಷೈಃ ॥ 31 ॥

ಹಿಂದಿನ ದಶಕಗಳಲ್ಲಿ ಭಗವಂತನ ಗುಣಗಳಲ್ಲಿ ದಯೆಯೇ ಅತ್ಯುತ್ತಮವಾದ ಗುಣವೆಂದೂ, ಆ ದಯಾದೇವಿಗೆ ಈಶ್ವರನು ಯಾವಾಗಲೂ ಪರತಂತ್ರನೆಂದೂ, ಆದ್ದರಿಂದ ಅತ್ಯಂತ ಪಾಪಿಯಾದ ತಮ್ಮನ್ನು ಅವಳು ಜಯಿಸಿ ತಿರುಮಲೆಯರಸನ ತಿರುವಡಿಗಳಲ್ಲಿ ಸೇರಿಸಬೇಕೆಂದು ಆಚಾರ್ಯರು ಪ್ರಾರ್ಥಿಸಿದರು. ಹೀಗೆ ಪ್ರಾರ್ಥಿಸುವಾಗ ಹಿಂದಿನ ದಶಕದ ಕೊನೆಯ ಪದ್ಯದಲ್ಲಿ ತಿರುಮಲೆಯ ತಪ್ಪಲು ಪ್ರದೇಶದಲ್ಲಿ ತಮಗೆ ವಾಸವು ದೊರಕಬೇಕೆಂಬುದನ್ನು ಸೂಚಿಸಿರುತ್ತಾರೆ. ಈ ದಶಕದಲ್ಲಿ - ಈ ಶರೀರವು ಹೋದಮೇಲೆ ಭಗವಂತನ ತಿರುವಡಿಗಳಲ್ಲಿನ ಕೈಂಕರ್ಯವು ತಮಗೆ ಹೇಗೆ ಅತ್ಯಂತ ಇಷ್ಟವಾದುದೋ, ಹಾಗೆಯೇ ಈ ಶರೀರ ವಿರುವವರೆಗೂ ಅತ್ಯಂತ ಪವಿತ್ರವೂ ದಿವ್ಯದೇಶವೂ ಆದ ತಿರುಮಲೆಯ ತಪ್ಪಲಿನಲ್ಲಿ ವಾಸವೂ ಇಷ್ಟವಾದುದರಿಂದ ಆದ ದಯಾದೇವಿಯೇ ಅನುಗ್ರಹಿಸಬೇಕೆಂದು ಪ್ರಾರ್ಥಿಸಿ, ಆ ತಿರುಮಲೆಯ ಸಮೀಪ ಪ್ರದೇಶಗಳಿಗಿರುವ ಹಿರಿಮೆಯನ್ನು ಅರುಹಿ, ಹಿಂದಿನ ದಶಕದಂತೆ ತನ್ನನ್ನು ಜಯಿಸಿಕೊಂಡು ಬಂದ ದಯಾದೇವಿಯು ತಮ್ಮಲ್ಲಿರುವ ಇತರ ಪಾಪಗಳನ್ನು ಹೋಗಲಾಡಿಸುವು ದಕ್ಕಾಗಿ ಭಗವಂತನ ನ್ಯಾಯಾಲಯದಲ್ಲಿ ವಾದಿಸಬೇಕೆಂದು ಒಂದು ವಿಲಕ್ಷಣವಾದ ರೀತಿಯಿಂದ ಚಿತ್ರಿಸುತ್ತಾರೆ. ಅದರಲ್ಲಿ ಈ ಮೊದಲನೆಯ ಪದ್ಯದಲ್ಲಿ ತಿರುಮಲೆಯ ವಾಸವನ್ನು ಪ್ರಾರ್ಥಿಸುತ್ತಾರೆ.

ವೇಂಕಟಾಚಲದಲ್ಲಿ ಅನೇಕವಾಗಿ ಗಿರಿನದಿಗಳು ಪ್ರವಹಿಸುತ್ತಿವೆ. ಅವುಗಳ ಹಿರಿಮೆಯು ಪುರಾಣಗಳಲ್ಲಿ ಅನೇಕ ವಿಧವಾಗಿ ವರ್ಣಿಸಲ್ಪಟ್ಟಿದೆ. ಆ ವಾರಿಧಾರೆಗಳು ತಮ್ಮನ್ನು ಸೇವಿಸುವವರಿಗೆ ತಮ್ಮಲ್ಲಿರುವ ಮಾಧುರ್ಯ,, ಶೈತ್ಯ, ತಾಪಹರತ್ವ (ತಾಪವನ್ನು ಹೋಗಲಾಡಿಸುವಿಕೆ,) ಪಾಪ ಹರತ್ವ (ಪಾಪವನ್ನು ಹೋಗಲಾಡಿಸುವಿಕೆ) ಇವೇ ಮೊದಲಾದ ಗುಣಗಳಿಂದ ತಮಗೆ ಸಮಾನವಾದ ಭಗವಂತನ ದಯೆಯನ್ನು ಜ್ಞಾಪಕಪಡಿಸುತ್ತವೆ. ಭಗವಂತನ ದಯೆಯೇ ಈ ವಾರಿಧಾರೆಗಳಾಗಿ ಪ್ರವಹಿಸುತ್ತಿವೆಯೋ - ಎಂಬಂತೆ ಕಾಣುತ್ತಿವೆ. ಅಂತಹ ಜಲರಮಣೀಯ ಕತೆಯನ್ನೂ ಸ್ಥಲರಮಣೀಯ ಕತೆಯನ್ನೂ ಹೊಂದಿರುವ ಉತ್ತಮ ದಿವ್ಯದೇಶವಾದ ತಿರುಮಲೆಯ ತಪ್ಪಲು ಪ್ರದೇಶಗಳಲ್ಲಿ, ಈ ಶರೀರಕ್ಕೆ ಇಂದ್ರಿಯಗಳ ಮೂಲಕವಾಗಿಯೋ ಪ್ರಾಣವಾಯುವಿನ ಮೂಲಕವಾಗಿಯೋ ಯಾವುದೊಂದು ವಿಧವಾದ ನ್ಯೂನತೆಯಾದರೂ ಉಂಟಾಗುವುದಕ್ಕೆ ಮೊದಲೇ, ಗಟ್ಟಿ ಮುಟ್ಟಾಗಿರುವಾಗಲೇ - ನಾನು ವಾಸವನ್ನು ಬಯಸುವೆನು. ಶರೀರೇಂದ್ರಿಯಗಳು ದಳಿತವಾಗಿಬಿಟ್ಟರೆ ಅಂತಹ ಮನೋಹರವಾದ ದೇಶವನ್ನು ಹೊಂದಲು ಸಾಧ್ಯವಿಲ್ಲ. ಒಂದು ವೇಳೆ ಹೇಗಾದರೂ ಅಲ್ಲಿಗೆ ಹೋದರೂ ನಿತ್ಯಕರ್ಮಾನುಷ್ಠಾನಗಳನ್ನು ಸರಿಯಾಗಿ ಅನುಷ್ಠಿಸಲು ಸಾಧ್ಯವಾಗುವುದಿಲ್ಲವಾದುದರಿಂದ ಪ್ರಯೋಜನವಿಲ್ಲ. ಆದ್ದರಿಂದ ಅನುಕೂಲವಾದ ಸ್ಥಿತಿಯಲ್ಲಿಯೇ ಅಲ್ಲಿನ ವಾಸವನ್ನು ಪ್ರಾರ್ಥಿಸುತ್ತಾರೆ.

ನಮ್ಮಾಳ್ವಾರವರು "ತಿರುವಾಯ್ಮೊಳಿ"ಯಲ್ಲಿ ಯಾವ ದಿವ್ಯದೇಶದ ವಾಸವನ್ನು ಬಯಸಿರುವರೋ ಅದೇ ಇಲ್ಲಿಯೂ ಆಚಾರ್ಯರ ಅಭಿಮತವಾಗಿರುತ್ತದೆ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 49 ಸಂಚಿಕೆ -11

ಶ್ರೀ ವಿಳಂಬಿ - ವಿಕಾರಿನಾಮ ಸಂವತ್ಸರ ಫಾಲ್ಗುಣ - ಚೈತ್ರ ಮಾಸ ಸಂಚಿಕೆ

## ಏಪ್ರಿಲ್ 2019





## ವಿಷಯಸೂಚಿಕೆ

ಸಂಪಾದಕೀಯ 6

ಹಸಿರುತೋರಣ

ನವಚೈತನ್ಯ ಮಾಸ ಚೈತ್ರ 7
- ಕೆ. ನರಸಿಂಹಮೂರ್ತಿ

ನಗರಗಳಲ್ಲಿ ಸಾಂಸ್ಕೃತಿಕ ಪರಿಸರದ ಪುನಶ್ಚೇತನ 15
- ಶ್ರೀಮತಿ.ನಂ. ನಾಗಲಕ್ಷ್ಮಿ

ಗುಲಿಸಾಧನೆಗೆ ಆರು ಪ್ರತಿರೋಧಗಳು 19
- ಡಿ.ಎಸ್.ಭೂಮಿಕ

ಬೇವಿನ ಶಕ್ತಿಯಿಂದ ರೋಗಗಳಿಗೆ ಮುಕ್ತಿ 21
- ಶ್ರೀಮತಿ

ಲೋಕಹಿತ ಮತ್ಸ್ಯಾವತಾರ 24
- ಶ್ರೀಮತಿ.ಸುಮಚಂದ್ರಶೇಖರ್

ಓಂ ಶ್ರೀ ರಾಮ ಜಯರಾಮ ಜಯ ಜಯ ರಾಮ 31
- ಎಸ್.ಗೋಪಾಲ್

ಪುರಂದರ ದಾಸರ ರಚನೆಗಳಲ್ಲಿ ಬರುವ ಆತ್ಮನಿವೇದನ ಭಕ್ತಿ 33
- ಶ್ರೀಮತಿ.ಸುಧಾಮಧುಸೂದನ್

ಶ್ರೀ ರಾಮ ವೈಭವ 36
- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

ಚಿಗುರಿ ಅರಳಿ ಮರಳಿ ಯುಗಾದಿ 41
- ಶ್ರೀಮತಿ.ಕೆ.ವಿ. ಪದ್ಮಾವತಿ

ದೇವಹೂತಿ ಕರ್ದಮರ ಕಥೆ 44
- ಡಿ.ಎಸ್.ಬದ್ರಿನಾಥ್

ಪಂಚಾಂಗ ಸಂಕ್ಷಿಪ್ತ ವಿವರಣೆ 47
- ಬಿ.ಆರ್.ಶ್ರೀಕಂಠಯ್ಯ

ಒಂಟಿಮಿಟ್ಟದಲ್ಲಿ ಕೋದಂಡರಾಮ 52
- ಶ್ರೀಮತಿ. ಆರ್. ಕೃಷ್ಣವೇಣಿ

ಮುಖಚಿತ್ರ - ಶ್ರೀ ಸೀತಾಸಮೇತ ಕಲ್ಯಾಣ ರಾಮಯ್ಯ, ಒಂಟಿಮಿಟ್ಟ
ಹಿಂಬದಿಚಿತ್ರ - ಶ್ರೀ ಸೀತಾರಾಮಲಕ್ಷ್ಮಣ ಮೂರ್ತಿಗಳು, ತಿರುಮಲೆ

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**
ಡಿ.ಟಿ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777,
2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು **www.tirumala.org** ಮೂಲಕ ವೀಕ್ಷಿಸಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

# ಸಂಪಾದಕೀಯ

# ಧರ್ಮ ವಸಂತ ಯುಗಾದಿ

ಪ್ರಾಚೀನ ಕಾಲದಲ್ಲಿ ದೇವಾಲಯಗಳು ಸನಾತನ ಧರ್ಮಾಚರಣೆಯ ಕುರುಹುಗಳಾಗಿದ್ದವು.ದೇವಾಲಯಗಳ ಮೂಲಕ ಧಾರ್ಮಿಕ, ಭಕ್ತಿ, ವೈಜ್ಞಾನಿಕ, ಆಧ್ಯಾತ್ಮಿಕ, ಸಂಗೀತಾದಿ ಕಾರ್ಯಕ್ರಮಗಳನ್ನು ಹಾಗೂ ಎಷ್ಟೋ ಲಲಿತ ಕಲೆಗಳನ್ನು ಅಭಿವೃದ್ಧಿ ಮಾಡುವುದು ಸುಲಭವಾಗುತ್ತದೆ. ಎಲ್ಲರನ್ನೂ ಒಂದು ಗೂಡಿಸಿ ಆ ಗ್ರಾಮವನ್ನು ಸನ್ಮಾರ್ಗದಲ್ಲಿ ನಡೆಸಲು,ಪ್ರಜೆಗಳಲ್ಲಿ ಭಕ್ತಿ ಚೈತನ್ಯವನ್ನು ತುಂಬುವಲ್ಲಿ ದೇವಾಲಯಗಳು ಪ್ರಮುಖ ಪಾತ್ರವಹಿಸುತ್ತವೆ. ವೈದ್ಯಾಲಯಗಳಾಗಿ, ನ್ಯಾಯಸ್ಥಾನಗಳಾಗಿ, ಧರ್ಮಾಧರ್ಮ ವಿವೇಚನಾ ಸ್ಥಾನಗಳಾಗಿ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಲು ದೇವಾಲಯಗಳಿಗಿಂತಲೂ ಮಿಗಿಲಾದ ಶಕ್ತಿಯುವಾದ ಸಾಧನವಿಲ್ಲ.

ಪ್ರಸ್ತುತ ಕಾಲಪರಿಸ್ಥಿತಿಯಲ್ಲಿ ನಮ್ಮ ಸನಾತನಧರ್ಮವು, ಹಿಂದೂ ಸಾಂಪ್ರದಾಯಗಳು ಮಿಂಚುಹುಳುವಿನ ದೀಪದಂತೆ ಮಿನುಗುತ್ತಿದೆ.ಈ ಪರಿಸ್ಥಿತಿಯಲ್ಲಿ ತಿ.ತಿ.ದೇವಸ್ಥಾನದವರು ಅನೇಕ ದಶಕಗಳಿಂದ ಧರ್ಮ ಚೈತನ್ಯ ಸ್ಫೂರ್ತಿಯನ್ನು, ಸತ್ಸಂಪ್ರದಾಯಗಳನ್ನು ಪ್ರಚಾರ ಮಾಡುವ ಸಲುವಾಗಿ ಬಹುಮುಖಿಯಾಗಿ ಪ್ರಯತ್ನಿಸುತ್ತಿದ್ದಾರೆ.ಹಾಗೆಯೇ ನಮ್ಮ ಸಮಾಜದಲ್ಲಿ ಬಡತನದಲ್ಲಿ ಜೀವಿಸುತ್ತಿರುವ ಕೆಳವರ್ಗದವರಿಗೆ ಸಮಾಜದಲ್ಲಿ ಸಮುಚಿತ ಸ್ಥಾನವನ್ನು ಕಲ್ಪಿಸುವ ಸಲುವಾಗಿ ಅವರಲ್ಲಿ ಧಾರ್ಮಿಕ ಚೈತನ್ಯವನ್ನು ತುಂಬಿ, ಆತ್ಮನ್ಯೂನತೆ ಭಾವನೆಯನ್ನು ಹೋಗಲಾಡಿಸಲು ತಿರುಮಲೆ ತಿರುಪತಿ ದೇವಸ್ಥಾನವು ಕಂಕಣ ಕಟ್ಟಿಕೊಂಡು ಮುಂದೆ ಸಾಗುತ್ತಿದೆ.

ಈ ಮಹತ್ತರ ಆಶಯದೊಂದಿಗೆ ಸಿಂಹಭಾಗವಾಗಿ ಎಸ್.ಸಿ.,ಎಸ್.ಟಿ,ಬಡತನ ರೇಖೆಯಿಂದ ಕೆಳಗಿರುವ ಸಾಮಾಜಿಕ ವರ್ಗಗಳು  ಹೆಚ್ಚಾಗಿರುವ ಗ್ರಾಮಗಳಲ್ಲಿ ಅವರು ಕೋರಿದ ದೇವರ ಆಲಯಗಳನ್ನು ನಿರ್ಮಿಸಿ, ಅವರನ್ನೇ ಅಲ್ಲಿ ಅರ್ಚಕರಾಗಿ ನೇಮಕ ಮಾಡಿ ಅವರಿಗೆ ಸಂಪ್ರದಾಯ ಬದ್ಧವಾದ ಪೂಜಾ ವಿಧಾನವನ್ನೂ, ಆಲಯಜ್ಞಾನವನ್ನು ಹಾಗೂ ಹಿಂದೂ ಸಂಸ್ಕೃತಿಯನ್ನು ಮನನ ಮಾಡಿಸಲು ಮೇ, 2017 ರಿಂದ ತಿ.ತಿ.ದೇವಸ್ಥಾನದ ಯಾಜಮಾನ್ಯ ಪೂಜಾ ಶಿಕ್ಷಣ ಕಾರ್ಯಕ್ರಮವನ್ನು ನಿರ್ವಹಿಸುತ್ತಿದೆ. ಇಲ್ಲಿಯವರೆಗೂ ಸುಮಾರು ಆರುನೂರು  ಮಂದಿ ಶಿಕ್ಷಣ ಪಡೆದಿರುತ್ತಾರೆ. ಅದಲ್ಲದೇ ಪಾಠ್ಯಪ್ರಣಾಳಿಕೆ, ಆಲಯ ವಿಜ್ಞಾನ ಗ್ರಂಥಗಳನ್ನು ಸರಳ ಭಾಷೆಯಲ್ಲಿ ಮುದ್ರಿಸಿ ಪೂಜಾ ಶಿಕ್ಷಣ ಪಡೆದ ಅಧ್ಯಾಪಕರ ಮೂಲಕ ತಿರುಮಲೆ ತಿರುಪತಿ ದೇವಸ್ಥಾನದವರ ಸನಾತನ ಹಿಂದೂ ಧರ್ಮ ಸಂಚಾರ ಪರಿಷತ್ತಿನ ಮೂಲಕ ಶಿಕ್ಷಣ ನೀಡುತ್ತಿದೆ. ಪದಕವಿತಪಿತಾಮಹನಾದ ಅನ್ನಮಯ್ಯನು "ಬ್ರಹ್ಮನೊಂದೇ ಪರಬ್ರಹ್ಮನೊಂದೇ" ಎಂದು ಮಾನವರಲ್ಲಿ ಉಚ್ಛನೀಚಳು ಇರುವುದಿಲ್ಲವೆಂದು ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಸಮಾನರೆಂದು ಬೋಧಿಸಿದ ಬೋಧನೆಯಂತೆ ಈ ಸಮಾಜದಲ್ಲಿ  ಸ್ಥಿರವಾಗಿ ಈ ಭಾವನೆಯು ನೆಲೆಸುವಂತೆ ಮಾಡಲು ಈ ನೂತನ ಸಂವತ್ಸರ ವಿಕಾರಿ ಯುಗಾದಿಯು ವಿಶೇಷ ಧರ್ಮಕಾರ್ಯಗಳನ್ನು ನಡೆಸಲು ಸನಾತನ ಧರ್ಮಪ್ರಚಾರವನ್ನು ವಿಸ್ತೃತವಾಗಿ ಜರುಗುವಂತೆ ಮಾಡಲು ಸ್ವಾಮಿಯವರ ಕೃಪೆಯಿಂದ ಮುನ್ನಡೆಸುತ್ತದೆಂದು ಆಶಿಸೋಣ.

ಯುಗಾದಿಯ ಶುಭ ಸಂದರ್ಭದಲ್ಲಿ ಸಮಾಜವನ್ನು ಉದ್ಧರಿಸಲು ಅನ್ನಮಯ್ಯರವರ ಆಶಯವನ್ನು ಸಕ್ರಿಯವಾಗಿ ಸಫಲಗೊಳಿಸುತ್ತದೆಂದು, ಶ್ರೀ ವೆಂಕಟೇಶ್ವರನು ಎಲ್ಲರನ್ನೂ ರಕ್ಷಿಸಲೆಂದೂ,ಸಮಾಜವು ಸುಖಶಾಂತಿಯಿಂದ ವೃದ್ಧಿಸುವುದೆಂದೂ ಕೋರಿಕೊಳ್ಳೋಣ.



**ಹಸಿರು ತೋರಣ**

# ನವಚೈತನ್ಯ ಮಾಸ - ಚೈತ್ರ

- ತೆಲುಗು ಮೂಲ: ಡಾ|| ಕೆ. ರಾಮಕೃಷ್ಣ

- ಅನುವಾದ: ಕೆ. ನರಸಿಂಹಮೂರ್ತಿ

ಪ್ರತಿಯೊಬ್ಬ ಮನುಷ್ಯನಲ್ಲೂ ಶಬ್ಧ ಸ್ಪರ್ಶ, ರೂಪ, ರಸ,ಗಂಧಗಳೆಂಬ ತನ್ಮಾತ್ರಗಳು, ಪಂಚಭೂತಗಳು ಅಂತ ರ್ಲೀನವಾಗಿರುತ್ತವೆ ಇವೇ ಪಂಚಭೂತಗಳು. ಭೂಮಿ, ನೀರು, ಅಗ್ನಿ,ವಾಯು,ಆಕಾಶವೆನ್ನುವ ರೂಪಗಳಲ್ಲಿ ಬಾಹ್ಯದಲ್ಲಿ ಪ್ರಕಟಿತಗೊಂಡಿದೆ. ಹೀಗೆ ಅಂತರ್ಬಾಹಿ ರೂಪಗಳಲ್ಲಿರುವ ಪಂಚಭೂತಗಳನ್ನು ಮನಸ್ಸಿನ ಕಣ್ಣುಗಳಿಂದ ನೋಡಿ, ಲೌಕಿಕ ಜೀವನವನ್ನು ಸಫಲವಾಗಿಸಿ, ಕೈವಲ್ಯಕ್ಕೆ ಸೋಪಾನ ವನ್ನು ನಿರ್ಮಿಸಿಕೊಳ್ಳುವ ಜವಾಬ್ದಾರಿ ಮನುಷ್ಯನಿಗಿದೆ. ದೈನಂದಿನ ಜೀವನದಲ್ಲಿ ಪ್ರತಿ ಹೆಜ್ಜೆಗೂ ಪ್ರಕೃತಿಯನ್ನು ಅನು ಸರಿಸುತ್ತಾ 'ಪ್ರಕೃತಿ','ಶಕ್ತಿ'ಗಳನ್ನು ಮೇಳೈಸಿಕೊಂಡು ಜೀವನ ಲಕ್ಷ್ಯವನ್ನು ತಲುಪಬೇಕೆಂಬುದೇ ನಮ್ಮ ಪ್ರಾಚೀನರ ಮಾರ್ಗ ದರ್ಶನ ಈ ಬಾಧ್ಯತೆಯ ನಿರ್ವಹಣೆಯಲ್ಲಿ ಮನುಷ್ಯನಿಗೆ ಸಹಕರಿಸಲು, ಸಹಾಯಹಸ್ತ ನೀಡಲು ಸರ್ವ ಸಾಧ್ಯಶರಾದ ನಮ್ಮ ಹಿರಿಯರು ಕಾಲವನ್ನು ವಿಭಜನೆ ಮಾಡಿದ್ದಾರೆ. ಈ ಕ್ರಮದಲ್ಲಿ ಭಾರತೀಯ ಜೀವನದ ಅತ್ಯುನ್ನತ ವೈಜ್ಞಾನಿಕ ದೃಷ್ಟಿಯನ್ನು ಸಮನ್ವಯವಾಗಿ ಅವಿಷ್ಕರಿಸುವ ಮಾಸವೆಂದರೆ ಅದು-ಚೈತ್ರ. ಕಮರಿದ ಭಾವನೆಗಳೊಂದಿಗೆ ಮಾನವನ ಜೀವನಕ್ಕೆ ಸಹಾ ಚೈತನ್ಯಯುತವಾಗಿ ಮಾಡುವ ಮಾಸ ವಿದು. ಈ ಮಾಸವು ಬರುವುದರಿಂದ ತರುಲತೆಗಳು ಚಿಗುರು ವಂತೆ ಮಾನವನ ಹೃದಯದಲ್ಲಿ ದ್ವೇಷ,ವೈಷಮ್ಯ ವೈಮನಸ್ಯ ಗಳು ತೊಲಗಿ ನವಜೀವನ ಕಾಂತಿಯು ಪಸರಿಸುತ್ತದೆ.

ವಸಂತ ಮಾಸದಲ್ಲಿ ಪ್ರಕೃತಿಯೆಲ್ಲಾ ಹಸಿರಿನಿಂದ ತುಂಬಿರುತ್ತದೆ.ಮಲ್ಲಿಗೆಯ ಪರಿಮಳ ಪ್ರತಿಯೊಂದು ಮನ ಸ್ಸನ್ನು ಮದವೇರಿಸುತ್ತದೆ. ಕೋಗಿಲೆಯ ಮಧುರಗಾನ ಅಲೌ ಕಿಕ ಆನಂದವನ್ನೀಯುತ್ತವೆ. ವಸಂತಕಾಲದಲ್ಲಿ ಪುಷ್ಪಗಳಲ್ಲಿ ಮಕರಂದವು (ಜೇನು) ಹೆಚ್ಚಾಗಿರುತ್ತದೆ.ಅದಕ್ಕೇ ಇದನ್ನು 'ಮಧುಮಾಸ'ವೆನ್ನುತ್ತಾರೆ. ಕಾಳಿದಾಸ ರಚಿಸಿದ 'ಋತು ಸಂಹಾರ' ಕಾವ್ಯದಲ್ಲಿ ಮಧುಮಾಸದ ಶೋಭೆ ಅನಂತವಾಗಿ ಕಂಡು ಬರುತ್ತದೆ.ವಸಂತಮಾಸಕ್ಕೆ 'ಸುರಭಿ'ಯೆಂಬ ಮತ್ತೊಂದು ಹೆಸರು ಸಹಾ ಇದೆಯೆಂದು ಅಮರಕೋಶವು ಹೇಳುತ್ತದೆ. 'ಸುರಭಿ' ಎಂದರೆ ಕೋರಿಕೆಗಳನ್ನು ತೀರಿಸುವು ದೆಂದು ಅರ್ಥ.ಅಂದರೆ ವಸಂತಮಾಸವು ಕೋರಿಕೆಗಳನ್ನು ತೀರಿಸುತ್ತದೆಂದು ಭಾವ.'ಋತೂನಾಂ ಮುಖೋ ವಸಂತಃ ಎಂದು ತೈತ್ತರೀಯ ಬ್ರಾಹ್ಮಣಕದಲ್ಲಿ ಹೇಳಿದೆ.ಅಂದರೆ ಋತು ಗಳೆಲ್ಲದರಲ್ಲಿ ವಸಂತ ಋತುವಿನದೇ ಅಗ್ರಸ್ಥಾನ ಎಂದರ್ಥ 'ವಸತಿ ಕಾಮೋಸ್ಮಿನಿತಿ'ಅಂದರೆ ವಸಂತ ಮಾಸದಲ್ಲಿ ಕಾಮ ಪ್ರಕೋಪವಿರುತ್ತದೆಂದು ಭಾವನೆ. ದಾಂಪತ್ಯ ಸುಖಕ್ಕೆ ಈ ಮಾಸವು ಅನುಕೂಲ ಹೀಗೆ ಮಾನವ ಜೀವನಗಮ್ಯದಲ್ಲಿ ವಸಂತವು ಒಂದು ಅವಿಭಾಜ್ಯ ಅಂಗವಾಗಿ ನಿಂತುಬಿಟ್ಟಿದೆ.

ಚೈತ್ರಮಾಸ ಎನ್ನುತ್ತಲೇ ಎಲ್ಲರಿಗೂ ನೆನಪು ಬರುವುದು ಯುಗಾದಿಹಬ್ಬ.ನವವರ್ಷದ ಆರಂಭಕ್ಕೆ ಯುಗಾದಿಯೇ ಸಂಕೇತ. ಯುಗಾದಿ, ಎನ್ನುವ ಹೆಸರು ಹೇಗೆ ಬಂತು? ಅದಕ್ಕೆ ಆಧಾರಗಳಾದರೂ ಏನು? ಸೌರಮಾನ - ಚಂದ್ರಮಾನಗಳ ನಡುವೆಯಿರುವ ವ್ಯತ್ಯಾಸವಾದರೂ ಏನು? ಎಂಬ ಹಲವು

ಚರ್ಚೆಗಳನ್ನು ಬದಿಗಿರಿಸಿದರೆ,ಯುಗಾದಿ ದಿನ ತಪ್ಪದೇ ಮಾಡಬೇಕಾದ ಕರ್ಮವಿಧಿಗಳನ್ನು ಶಾಸ್ತ್ರಗಳು ನಿರ್ದೇಶಿಸುತ್ತವೆ. ಅವಾವುವೆಂದರೆ

**1. ಪ್ರತಿಗೃಹ ಧ್ವಜಾರೋಹಣ:** ಅಂದರೆ ಪ್ರತಿ ಮನೆಯಲ್ಲೂ ಭಗವಧ್ವಜವನ್ನು (ಝಂಡಾ) ಏರಿಸಬೇಕು. ಧ್ವಜವು ಸಾರ್ವಭೌಮತ್ವದ, ಸ್ವೇಚ್ಛಾಸ್ವಾತಂತ್ರ್ಯದ ವಿಜಯದ ಚಿಹ್ನೆಯಾಗಿದೆ.ಧ್ವಜವು ಸಾಹಸ ಕಾರ್ಯಗಳ ಸ್ಫೂರ್ತಿಯಾಗಿದೆ. ಮೂಗು ಹಿಡಿದು ತಪಸ್ಸುಗೈಯುವುದೊಂದೇ ಅಲ್ಲ - ಅವಶ್ಯಕತೆ ಬಿದ್ದಲ್ಲಿ ವೀರಖಡ್ಗವನ್ನು ಧರಿಸಬೇಕಾದ ಅವಸರವನ್ನು ಧ್ವಜವು ನಮಗೆ ನೆನಪಿಸುತ್ತದೆ.ನೂತನ ಸಂವತ್ಸರದಲ್ಲಿ ಮತ್ತಷ್ಟು ವಿಜಯಪತಾಕೆಗಳನ್ನು ಆರೋಹಿಸಬೇಕಾದ ಗುರಿಯನ್ನು ನಮಗೆ ತೋರಿಸುತ್ತದೆ. ಪ್ರತಿಯೊಬ್ಬ ಭಾರತೀಯನ ಎದೆಯಲ್ಲಿ ಪುಟಿದೇಳುವ ಸಾಂಸ್ಕೃತಿಕ ಆಧ್ಯಾತ್ಮಿಕ ಸಮನ್ವಯಕ್ಕೆ ಕುರುಹಾಗಿ ಈ ಧ್ವಜವು ನೆಲೆನಿಂತಿದೆಯಾದ್ದರಿಂದ ಯುಗಾದಿ ದಿನ ಪ್ರತಿ ಮನೆಯಲ್ಲೂ ತಪ್ಪದೇ ಭಗವಧ್ವಜವನ್ನು ಹಾರಿಸಬೇಕು.



**2. ತೈಲಾಭ್ಯಂಜನ:** ಅಪಾದ ಮಸ್ತಕ ಎಳ್ಳೆಣ್ಣೆಯನ್ನು ಹಚ್ಚಿಕೊಂಡು, ಅಂಟೋಳ ಕಾಯಿಯ ರಸದಿಂದ ಯುಗಾದಿ ದಿನ ಅಭ್ಯಂಜನ (ತಲೆಸ್ನಾನ) ಮಾಡಬೇಕು. ಎಣ್ಣೆ ಹಾಗೂ ಅಂಟೋಳಕಾಯಿಯ ರಸದಲ್ಲಿರುವ ಔಷಧೀಯ ಗುಣಗಳು ಮನುಷ್ಯನಿಗೆ ಆರೋಗ್ಯವನ್ನು ಒದಗಿಸುತ್ತವೆ. ಅಭ್ಯಂಜನ ಶರೀರಕ್ಕೆ ಆವರಿಸಿರುವ ಜಡತ್ವವನ್ನು ತೊಲಗಿಸಿ, ಶರೀರದೊಂದಿಗೆ ಮನಸ್ಸನ್ನು ಚೈತನ್ಯಯುತವಾಗಿ ಮಾಡುತ್ತದೆ. ಹೀಗೆ ಚೈತನ್ಯಯುತವಾದ ಮನಸ್ಸು ಧರ್ಮ ಕಾರ್ಯಗಳ ಮೇಲಷ್ಟೇ ನಮ್ಮ ಲಕ್ಷ್ಯವನ್ನಿರಿಸುತ್ತದೆ. ಯಾವ ಮನುಷ್ಯನು ಸದಾ ಧರ್ಮ ಕಾರ್ಯಗಳನ್ನು ಮಾಡುತ್ತಲೇ ಇರುತ್ತಾನೋ ಅವನಿಗೆ ಭಗವಂತನ ಕೃಪಾಕಟಾಕ್ಷ ಕೂಡಲೇ ಒದಗಿ ಬರುತ್ತದೆ. ಕೊನೆಯಲ್ಲಿ ಮನುಷ್ಯ ಕೈವಲ್ಯವನ್ನು ಸೇರಿಕೊಳ್ಳುತ್ತಾನೆ ಆದ್ದರಿಂದ ಎಣ್ಣೆಯನ್ನು ಜಿಡ್ಡೆಂದು ಭಾವಿಸದೇ ಯುಗಾದಿ ದಿನ ಪ್ರತಿಯೊಬ್ಬರೂ ತೈಲಾಭ್ಯಂಜನ ಮಾಡಬೇಕು.

**3. ಛತ್ರಚಾಮರ ಸ್ವೀಕಾರ :** ಅಂದರೆ ಹೊಸ ಕೊಡೆ, ಬೀಸಣಿಕೆಗಳನ್ನು ಖರೀದಿಸುವುದು. ವಸಂತಮಾಸದ ನಂತರ ಬರುವ ಬಿಸಿಲುಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಪೂರ್ವಿಕರು ಈ ಪದ್ಧತಿಯನ್ನು ಹಾಕಿರುವರು.ಭೌತಿಕ ಆರೋಗ್ಯದ ಸಂರಕ್ಷಣೆಯೂ ಕೂಡ ನಮ್ಮ ಪ್ರಾಚೀನರ ಕಾಲ ವಿಭಜನೆಯ ಅವಿಭಾಜ್ಯ ಅಂಗವಾಗಿ ಸಾಗುತ್ತದೆ.ಈ ನಿಟ್ಟಿನಲ್ಲಿ ಪ್ರಕೃತಿಯಲ್ಲಿ ಸಹಜವಾಗೇ ದೊರಕುವ ತಾಳೆಗರಿ, ಮೇದಾರರು ತಯಾರು ಮಾಡುವ ಬೀಸಣಿಕೆ-ಛತ್ರಿಗಳನ್ನು ಯುಗಾದಿ ದಿನ ಪ್ರತಿ ಮನುಷ್ಯ ಸ್ವೀಕರಿಸಬೇಕು.

**4. ದವನ - ಬ್ರಹ್ಮ ಪೂಜೆ :** ಅಂದರೆ ಪರಿಮಳೆಯುತ ಪುಷ್ಪಗಳಿಂದ ದೇವತೆಗಳನ್ನು ಅರ್ಚಿಸುವುದು.ಚೈತ್ರಶುದ್ಧ ಪಾಡ್ಯದಿಂದ ಹುಣ್ಣಿಮೆವರೆಗೆ ಹದಿನೈದು ದಿನಗಳು ಹದಿನೈದು ದೇವತೆಗಳನ್ನು ಪೂಜಿಸಬೇಕು.ತಿಥಿಗನುಗುಣವಾಗಿ ಕ್ರಮ ವಾಗಿ ಪಾಡ್ಯ - ಬ್ರಹ್ಮ;ಬಿದಿಗೆ - ಉಮಾದೇವಿ; ಶಿವ, ಅಗ್ನಿ; ತದಿಗೆ-ಗೌರಿಶಂಕರರು; ಚೌತಿ-ಗಣೇಶ; ಪಂಚಮಿ - ನಾಗದೇವತೆಗಳು; ಷಷ್ಠಿ - ಕುಮಾರಸ್ವಾಮಿ; ಸಪ್ತಮಿ - ಸೂರ್ಯ; ಅಷ್ಟಮಿ-ಮಾತೃದೇವತೆಯರು; ನವಮಿ - ದುರ್ಗಾದೇವಿ; ದಶಮಿ - ಧರ್ಮರಾಜ; ಏಕಾದಶಿ - ಮುನಿಗಳು; ದ್ವಾದಶಿ - ಮಹಾವಿಷ್ಣು; ತ್ರಯೋದಶಿ-ಮನ್ಮಥ;ಚತುರ್ದಶಿ-ಶಿವ; ಹುಣ್ಣಿಮೆ-ಇಂದ್ರ ದೇವತೆಗಳನ್ನು ಪೂಜಿಸಬೇಕು.

**5. ಮಹಾಶಾಂತಿ ಪೂಜೆಗಳು:** ಮುಂಬರುವ ದಿನಗಳಲ್ಲಿ ಉಂಟಾಗಬಹುದಾದ ವಿಘ್ನಗಳನ್ನು ನಿವಾರಿಸಲು ಯುಗಾದಿ ದಿನ ಪ್ರತಿಯೊಬ್ಬರೂ ತಪ್ಪದೇ ಗಣಪತಿಯನ್ನು ಪೂಜಿಸಬೇಕು.ಇದರೊಂದಿಗೆ ಗ್ರಹಸಂಬಂಧಿ ದೋಷಗಳು ತೊಲ

ಗಳು ಕೋರುತ್ತಾ ನವಗ್ರಹಗಳನ್ನು ಪೂಜಿಸಬೇಕು. ಮನೋ ನಿಗ್ರಹ.ಕಾರ್ಯಸಾಧನೆಯಂತಹ ದೀಕ್ಷೆಗಳು ಈ ಪೂಜೆ ಗಳಲ್ಲಿ ಅಂತರ್ಗತವಾಗಿರುತ್ತವೆ. ಸಾಮಾನ್ಯ ದಿನಗಳಲ್ಲಿ ಈ ಪೂಜೆಗಳನ್ನು ಮಾಡುವುದು ಪ್ರಸ್ತುತ ರೂಢಿಯಲ್ಲಿದೆ.ಆದರೆ ಶಾಸ್ತ್ರಾನುಸಾರ ಯುಗಾದಿ ದಿನ ಈ ಮಹಾಶಾಂತಿ ಪೂಜೆ ಯನ್ನು ಪ್ರತಿಯೊಬ್ಬರೂ ತಪ್ಪದೇ ನಿರ್ವಹಿಸಬೇಕು.

**6. ಪಂಚಾಂಗ ಪೂಜೆ, ಶ್ರವಣ:** ತಿಥಿ, ವಾರ, ನಕ್ಷತ್ರ, ಯೋಗ,ಕರ್ಣ ಎಂಬ ಐದು ಬಗೆಯ ಅಂಗಗಳನ್ನು ಹೊಂದಿ ರುವುದೇ ಪಂಚಾಂಗ. ಶಾಸ್ತ್ರವಿಧಿಗಳ ಪ್ರಕಾರ ಯುಗಾದಿ ದಿನ ಬಂಧು-ಮಿತ್ರರಿಂದೊಡಗೂಡಿ ಬೆಳಗ್ಗೆ ದೇವತಾಪೂಜೆ, ಪಂಚಾಂಗ ಪೂಜೆ ಮಾಡಿ, ಹಿಟ್ಟಿನಡಿಗೆಗಳನ್ನು ಸಮರ್ಪಿಸ ಬೇಕು. ಸಂಜೆ ದೇವಾಲಯಕ್ಕೆ ತೆರಳಿ,ಧರ್ಮಾಧಿಕಾರಿಗಳಾದ ಪಂಡಿತರು ಮಾಡುವ ಪಂಚಾಂಗ ಶ್ರವಣವನ್ನು ಕೇಳಬೇಕು.

ಶ್ರೀ ಕಲ್ಯಾಣ ಗುಣಾವಹಂ ರಿಪುಹರಂ ದುಃಸ್ವಪ್ನದೋಷಾಪಹಾಂ
ಗಂಗಾಸ್ನಾನ ವಿಶೇಷ ಪುಣ್ಯಫಲದಂ ಗೋದಾನಂ ತುಲ್ಯ ನೃಣಾಂ।
ಆಯುರ್ವೃದ್ಧಿತಮುತ್ತಮಂ ಶುಭಕರಂ ಸರ್ವಾರ್ಥ ಸಂಪತ್ಪ್ರದಂ
ನಾನಾಕರ್ಮ ಸುಸಾಧನಂ ಸಮುಚಿತಂ ಪಂಚಾಂಗ ಮಾಕರ್ಣ್ಯತಾಂ॥

ಯುಗಾದಿಯ ನದಿ ಪಂಚಾಂಗ ಶ್ರವಣದಿಂದ ಕೆಟ್ಟ ಕನಸುಗಳು ಬರುವುದಿಲ್ಲ.ಶತ್ರುನಾಶ ಉಂಟಾಗುತ್ತದೆ. ಗೋ ದಾನಂ ಮಾಡಿದ ಫಲವುಂಟಾಗುತ್ತದೆ.ಆಯುಷ್ಯವರ್ಧಿಗೊಳ್ಳು ತ್ತದೆ.ಸಕಲ ಕಾರ್ಯಗಳು ಸಿದ್ಧಿಸುತ್ತವೆ.ಅಷ್ಟೇ ಅಲ್ಲ ಸರ್ವ ಸಂಪನ್ನಗಳನ್ನು ಕೋರುವವರು.ತಿಥಿಯನು ಗುಣವಾಗಿ, ದೀರ್ಘಾಯುಷ್ಯ ಕೋರುವವರು 'ವಾರ' ಕ್ಕನುಗುಣವಾಗಿ, ಪಾಪವಿಮೋಚನೆ ಕೋರುವವರು ನಕ್ಷತ್ರಕ್ಕನುಗುಣವಾಗಿ, ಆರೋಗ್ಯವನ್ನು ಬಯಸುವವರು ಯೋಗಕ್ಕನುಗುಣ ವಾಗಿ,ಕಾರ್ಯಜಯವನ್ನು ಕೋರುವವರು 'ಕರಣ' ಕ್ಕನು ಸಾರವಾಗಿ ಜಾಗರೂಕತೆವಹಿಸಬೇಕೆಂದು ಶಾಸ್ತ್ರವು ಹೇಳು ತ್ತದೆ.

ಇಲ್ಲಿ ಸ್ವಲ್ಪ ವಿವರಣೆಯ ಅಗತ್ಯವಿದೆ.ಈ ಪಂಚಾಂ ಗದ ಕುರಿತಾಗಿ ಈ ದಿನಗಳಲ್ಲಿ ಹಲವು ಪ್ರತಿರೋಧಿ ಮಾತು ಗಳು ಕೇಳಿಬರುತ್ತಿವೆ.ಇಲ್ಲೊಂದು ಉದಾಹರಣೆಯನ್ನು ನಾವು ಗಮನಿಸಬೇಕು. ನಮ್ಮ ಸರಕಾರ ನಮಗೆ ಆಗಾಗ ಹಲವು ಸೂಚನೆಗಳನ್ನು ನೀಡುತ್ತಿರುತ್ತದೆ.ಈ ದಾರಿಯಲ್ಲಿ ಹೋಗ ಬೇಡಿ.ಅವಘಡದ ಸಂಭವವಿದೆ.ಪ್ರಮಾದಕಾರಿ ತಿರುವು... ನೆಮ್ಮದಿಯಿಂದ ತೆರಳಲಾಗುವುದಿಲ್ಲ' ಹೀಗೆ ಹಲವು ಸೂಚನೆ ಗಳು ನಮಗೆ ರಸ್ತೆಬದಿಯ ಫಲಕಗಳಲ್ಲಿ ಕಾಣ ಸಿಗುತ್ತಿರು ತ್ತದೆ.ಹಾಗಾದರೆ 'ಸರಕಾರವು ನಮಗೆ ಹೇಳುವುದೇನು. ನಾವು ಕೇಳುವುದೇನು' ಎಂದು ಭಂಡತನದಿಂದ ಆ ದಾರಿ ಯಲ್ಲಿ ಪ್ರಯಾಣ ಬೆಳಸಿದ್ದೇವೆಂದು ಭಾವಿಸಿ ಪ್ರಮಾದವು ಕಟ್ಟಿಟ್ಟ ಬುತ್ತಿ. ಪ್ರಜೆಗಳನ್ನು ಎಚ್ಚರಿಸಿ, ಜಾಗರೂಕರನ್ನಾಗಿ ಮಾಡುವುದೇ ಸರಕಾರದ ಕರ್ತವ್ಯ ಪಾಲಿಸಬೇಕೆಂಬುದು ಜನರ ಕರ್ತವ್ಯ.ಪಂಚಾಂಗವೆನ್ನುವುದೂ ಸಹಾ ಸರಕಾರ ದಂಥದ್ದು. ವೈಜ್ಞಾನಿಕ ಕೋನದಲ್ಲಿ ಗ್ರಹಗಳ ಚಲನವಲನ ಗಳನ್ನು ಪರಿಶೀಲಿಸಿ,ಖಗೋಳ ಭೌತಿಕ ಮಾರ್ಪಾಟುಗಳನ್ನು ಅಂದಾಜು ಮಾಡಿ ಪ್ರಜೆಗಳಿಗೆ ಹಲವು ಸೂಚನೆಗಳನ್ನೀ ಯುತ್ತದೆ.ಅವುಗಳನ್ನು ಅನುಸರಿಸಬೇಕಾ?ಬೇಡವಾ? ಎಂಬುದು ಪ್ರಜೆಗಳ ನಿಲುವಿನ ಮೇಲೆ ಆಧಾರಿತಗೊಂಡಿರು ತ್ತದೆ.ಪರಿಪಾಲಿಸಿದರೂ ಪರಿಪಾಲನೆ ಮಾಡದಿದ್ದರೂ ಪಂಚಾಂಗ ಕರ್ತಾರಿಗುಂಟಾಗುವ ಲಾಭ-ನಷ್ಟಗಳೇನೂ ಇರು ವುದಿಲ್ಲ. ಒಂದು ವೇಳೆ ಉಪಯುಕ್ತಗೊಂಡರೆ ಅದರ ಪ್ರಯೋ ಜನೆ ನಮಗೆ ಉಂಟಾಗುತ್ತದೆ.

**7. ನಿಂಬಿಕುಸುಮ ಭಕ್ಷಣೆ:** ನಿಂಬಿಕುಸುಮವೆಂದರೆ ಬೇವಿನ ಹೂವು. ಯುಗಾದಿ ದಿನ ಅಬಾಲವೃದ್ಧರು ಇಷ್ಟಪಟ್ಟು ತಿನ್ನುವ ಬೇವುಬೆಲ್ಲ ಇದೇ. ಯುಗಾದಿ ದಿನ ನಸುಕಿನಲ್ಲೇ ಎದ್ದು ದೈನಂದಿನ ಕಾರ್ಯಗಳನ್ನು ನಿರ್ವಹಿಸಿ,ನಂತರ ಅಭ್ಯಂಜನ ಗಳನ್ನು ಮಾಡಿ. ದೇವತಾರಾಧನೆಯನ್ನು ಮಾಡಿ, ಶುಚಿಯಾಗಿ ನೇಮ ಪ್ರಕಾರ ಸಿದ್ಧಪಡಿಸಿದ ಬೇವು ಬೆಲ್ಲವನ್ನು ದೇವರಿಗೆ ನಿವೇದಿಸಿ ಅನಂತರ ಕುಟುಂಬ ಸದಸ್ಯರೆಲ್ಲರೂ ಈ ಶ್ಲೋಕ ವನ್ನು ಹೇಳುತ್ತಾ ಈ ಬೇವು ಬೆಲ್ಲವನ್ನು ಭಕ್ಷಿಸಬೇಕು.

ಶತಾಯುರ್ವಜ್ರದೇಹಾಯ ಸರ್ವ ಸಂಪತ್ಕರಾಯಚ
ಸರ್ವಾರಿಷ್ಟ ವಿನಾಶಯ ನಿಂಬಕದಳಂ ಭಕ್ಷಣಂ॥

ಬೇವಿನ ವೃಕ್ಷಗಳನ್ನು ಸಸ್ಯಶಾಸ್ತ್ರದ ಭಾಷೆಯಲ್ಲಿ 'ಮೆಲಿಯಾ ಅಜಾದಿರಿಕ್ಟಾ' ಅಥವಾ ಅಜಾದಿರಿಕ್ಟಾ ಇಂಡಿಕಾ' ಎಂದು ಕರೆಯುತ್ತಾರೆ ಇದರಲ್ಲಿ 'ಅಜಾದಿರಿಕ್ಟಾ' ಎಂಬ ಆಂಗ್ಲ ಪದಕ್ಕೆ ಅರ್ಥ'ಉತ್ತಮ ವೃಕ್ಷ' ಆಯುರ್ವೇದದ ಪ್ರಕಾರ ಬೇವನ್ನು ಉಪಯೋಗಿಸಿ 35 ಬಗೆಯ ಶಾರೀರಿಕ ವ್ಯಾಧಿ ಗಳನ್ನು ನಿವಾರಿಸಬಹುದು ಬೆಳಗಿನ ಜಾವ ಬರುವ ಕೆಟ್ಟಕನಸು ಗಳಿಗಿದು ದಿವ್ಯೌಷಧಿ. ಗಂಡ ಹೆಂಡಿರ ಮಧ್ಯೆ ಬರುವ ಮನ ಸ್ತಾಪಗಳು ಇದರಿಂದ ತೊಲಗಿ ಹೋಗುತ್ತವೆ. ನಿದ್ರಾಹೀನತೆ ಯಿಂದ ಬಳಲುವವರು ಸ್ವಲ್ಪ ಬೇವಿನೆಲೆಗಳನ್ನು ಅಗೆದರೂ, ಅಂಗೈ ಮಧ್ಯದಲ್ಲಿ ತಿಕ್ಕಿ ವಾಸನೆ ನೋಡಿದರೂ,ಉತ್ತಮ ಫಲಿತಾಂಶವಿರುತ್ತದೆ. ಯುಗಾದಿಯಲ್ಲಿ ಮಾಡುವ ಬೇವುಬೆಲ್ಲಕ್ಕೆ ಬಳಸುವ ಮಾವಿನ ಚಿಗುರು ಜೀರ್ಣಾಶಯದ ಹುಣ್ಣುಗಳಿಗೆ, ರಕ್ತಸ್ರಾವಕ್ಕೆ ಔಷಧಿಯಾಗಿ ಕೆಲಸ ಮಾಡುತ್ತವೆ.ಬೇವಿನ ದಳ ಗಳು ಆಯಾಸ ನಿವಾರಕವಾಗಿ ಕೆಲಸ ಮಾಡುತ್ತವೆ.ಉಪ್ಪು ವಾತರೋಗಕ್ಕೆ, ಜಡತ್ವವನ್ನು ನಿವಾರಿಸುತ್ತದೆ.ಜೀರಿಗೆ

ಅಜೀರ್ಣವನ್ನು ದೂರ ಮಾಡುತ್ತದೆ. ಬೆಲ್ಲ ರಕ್ಷಣಕಾರಕ. ಹುಣಸೇ ಹಣ್ಣು ನೂರು ರೋಗಗಳನ್ನು ನಾಶಗೊಳಿಸುತ್ತವೆಂದು ಆಯುರ್ವೇದವು ಸಾರುತ್ತದೆ.

**8. ಪ್ರಪಾದಾನದ ಆರಂಭ :** ಅಂದರೆ ನೀರಿನ ಅರವಟಿಗೆಗಳನ್ನು ಏರ್ಪಾಟು ಮಾಡುವುದು. ಯುಗಾದಿ ಪ್ರಕೃತಿಯ ಬದಲಾವಣೆಯ ಸಂಕೇತ.ಬರುವ ಗ್ರೀಷ್ಮದ ತಾಪವನ್ನು ತಡೆದುಕೊಳ್ಳಲು,ದಾಹವನ್ನು ತೀರಿಸಿಕೊಳ್ಳಲು ಮುಂಚಿತವಾಗಿಯೇ ಪ್ರಜೆಗಳನ್ನು ಸಮರ್ಥರನ್ನಾಗಿ ಮಾಡುವುದೇ ಈ ಪದ್ಧತಿಯ ಹಿಂದಿರುವ ಸದುದ್ದೇಶ. ಇದರಿಂದ ಪ್ರಜೆಗಳಲ್ಲಿ 'ಭೂತದಯ' ವೃದ್ಧಿಯಾಗುತ್ತದೆ.'ಮಾನವ ಸೇವೆಯೇ ಮಾಧವಸೇವೆ' ಯೆಂಬ ನಾಣ್ಣುಡಿ ಈ ಆಚಾರದ ದ್ವಾರ ನಮ್ಮ ಹಿರಿಯರು ನಮ್ಮ ಅರಿವಿಗೆ ತಂದಿದ್ದಾರೆ.

**9. ರಾಜ - ಮಿತ್ರ ಸಂದರ್ಶನ:** ಯುಗಾದಿ ದಿನ ಸ್ನೇಹಿತರನ್ನು ಬಂಧುಗಳನ್ನು ಭೇಟಿಮಾಡಿ ಒಬ್ಬರಿಗೊಬ್ಬರು ಯೋಗ ಕ್ಷೇಮಗಳನ್ನು ವಿಚಾರಿಸತಕ್ಕದ್ದು. ಶುಭಾಷಯಗಳನ್ನು ಕೋರತಕ್ಕದ್ದು. ಇದರಿಂದ ಮನುಷ್ಯರ ಮಧ್ಯೆ ಆತ್ಮೀಯತೆ - ಅನುರಾಗಗಳು ಶಾಶ್ವತವಾಗಿ ನೆಲೆಯೂರುತ್ತವೆ.ರಕ್ತಸಂಬಂಧಗಳು ಕಡಿದು ಹೋಗದಂತೆ ಈ ಪದ್ಧತಿಯು ಕಾಪಾಡುತ್ತದೆ.



**10.ವಸಂತ ನವರಾತ್ರಿ ಕಲಶ ಪೂಜಾ:** ಯುಗಾದಿಯಿಂದ ಒಂಬತ್ತು ದಿನಗಳ ಕಾಲವನ್ನು ವಸಂತ ನವರಾತ್ರಿ ಎನ್ನುತ್ತಾರೆ. ಈ ಕಾಲದಲ್ಲಿ ಭಗವಂತನನ್ನು ಆರಾಧಿಸುವ ರೀತಿ - ನಿಯಮಗಳನ್ನು ಶಾಸ್ತ್ರವು ಸವಿಸ್ತಾರವಾಗಿ ಹೇಳಿದೆ. ಅದಕ್ಕನು ಸಾರವಾಗಿ ಯುಗಾದಿಯ ದಿನ ದೇವತಾ ಮಂದಿರದಲ್ಲಿ ಕಲಸ ವನ್ನಿಟ್ಟು ಪೂಜಿಸಬೇಕು. ಮನೆತನದ ಆಚಾರದಂತೆ, ಗುರುಗಳ ಮಾರ್ಗದರ್ಶನದಂತೆ ಇತರೆ ಅರ್ಚನೆ-ಪೂಜಾ ಕೈಂಕರ್ಯಗಳನ್ನು ಮಾಡಬೇಕು. ದೇವಿ ಭಾಗವತ, ಧರ್ಮ ಸಿಂಧು ಮುಂತಾದ ಗ್ರಂಥಗಳಲ್ಲಿ ವಸಂತ ನವರಾತ್ರಿಯ ವರ್ಣನೆ, ಪ್ರಾಮುಖ್ಯತೆ ವಿಸ್ತಾರವಾಗಿ ರೂಪುಗೊಂಡಿದೆ. ಭಗವತತ್ವಕ್ಕೆ 'ಪರ'-'ಅಪರ'ಎಂಬ ಎರಡು ಪ್ರಕೃತಿಗಳು ಇರುತ್ತವೆ. ಒಂದು ಚೇತನವಾದರೆ ಮತ್ತೊಂದು 'ಜಡ' ಭೌತಿಕವಾಗಿ ಕಂಡು ಬರುವ ಪಂಚಭೂತಗಳು, ಅಹಂಕಾರ, ಬುದ್ಧಿ, ವ್ಯಕ್ತ ಎಂಬ ಎಂಟು ಪ್ರಬೇಧ (ಅಪರಾಪ್ರಕೃತಿ)ಗಳಿಗೆ ಪ್ರಕೃತಿಯನ್ನು ಸೇರಿಸಿದರೆ ಒಟ್ಟು ಒಂಬತ್ತಾಗುತ್ತವೆ.ಈ ಒಂಬತ್ತು ಪ್ರಕೃತಿಗಳ ಸಂಕೇತವಾಗಿ ಆಚರಿಸುವಂಥವುಗಳೇ ಈ ವಸಂತ ನವರಾತ್ರಿಗಳು ಇದೇ ಆಧ್ಯಾತ್ಮಿಕ ರಹಸ್ಯ.

## ಕವಿಗಳ ಕಲ್ಪವಲ್ಲಿ - ಯುಗಾದಿ

ಮತ್ತಿತ್ತರ ಹಬ್ಬ/ಮಾಸಕ್ಕಿರದ ವಿಶೇಷತೆ ಯುಗಾದಿಗೆ, ಚೈತ್ರಮಾಸಕ್ಕುಂಟು.ಅದೇ ಕವಿ ಸಮ್ಮೇಳನ ಸಾಮಾನ್ಯ ದಿನಗಳಲ್ಲಿ ಕವಿ ಸಮ್ಮೇಳನಗಳು ಜರಗುತ್ತವೆಯಾದರೂ. ಒಂದು ಹಬ್ಬದಮಾಸದ,ಋತುವಿನ ಸಂಕೇತವಾಗಿ ಸಮ್ಮೇಳನಗಳು ಜರುಗುವುದು.ಯುಗಾದಿ/ಚೈತ್ರಕ್ಕೆ/ವಸಂತ ಋತುವಿಗೆ ಮಾತ್ರವೇ ಒದಗಿರುವ ಪ್ರತ್ಯೇಕತೆ.ಯುಗಾದಿಯು ಪ್ರಕೃತಿಯ ಬದಲಾವಣೆಯ ಸಂಕೇತವು.ಕವಿತ್ವವು ಮನೋವಿಕಾರದ ಭಂಗವು.ಮನೋವಿಕಾಸದ ಚಿನ್ಹೆ. ಅಂದರೆ ಪ್ರಕೃತಿಯ ಬದಲಾವಣೆಯೊಂದಿಗೆ ಮಾನವ ವಿಕಾಸವುಂಟಾಗುತ್ತದೆಂಬ ಕುರುಹಾಗಿ ಯುಗಾದಿ ಕವಿ ಸಮ್ಮೇಳನಗಳು ಜರಗುತ್ತವೆಂದು ಹೇಳಬಹುದು.ಕವಿತ್ವಕ್ಕೆ ಪ್ರಕೃತಿಯೆಂಬುದು ಆತ್ಮವಿದ್ದಂತೆ ಪ್ರಕೃತಿ ವಿಕಾಸಗೊಂಡರೇ ಆತ್ಮಜ್ಞಾನಂದವುಂಟಾಗುತ್ತದೆ.ಮಾನವನ ಸಂಕ್ಷೇಮವೇ ಪ್ರಕೃತಿಯ ಧರ್ಮ ವಿಶ್ವಕ್ಕೆ ಶ್ರೇಯಸ್ಸನ್ನುಂಟು ಮಾಡುವುದೇ ಕವಿತ್ವದ ಪಾರಮಾರ್ಥ. ಈ ನಿಟ್ಟಿನಲ್ಲಿ 'ಪ್ರಕೃತಿ' ಹಾಗೂ 'ಕವಿತ್ವದ' ಸಮ್ಮಿಳಿತ ಲಕ್ಷ್ಯವು ಸಕಲ ಲೋಕಕ್ಕೇ ಸೌಭಾಗ್ಯ. ಯುಗಾದಿಯ ಕವಿ ಸಮ್ಮೇಳನದ ಪದ್ಧತಿಯ ನಿಜವಾದ ಉದ್ದೇಶವಿದೆ.

## ಯುಗಾದಿ ಆಚರಣೆಯ ಸಂಪ್ರದಾಯಗಳು

ಶುಭನಿರೀಕ್ಷಣೆಯೇ ಯುಗಾದಿಯ ಹೆಗ್ಗುರುತು. ತೆಲುಗಿನವರಿಗೆ ಯುಗಾದಿ ನೂತನ ಸಂವತ್ಸರದ ಮೊದಲ ದಿನವೊಂದೇ ಅಲ್ಲ - ಪ್ರಕೃತಿಯಿಂದ ಮೊದಲುಗೊಂಡು ಪ್ರಜೆಗಳವರೆಗೆ ಎಲ್ಲೆಲ್ಲೂ ಹೊಸತನ ಕಾಣುವ ಸದವಕಾಶವು. ಹೊಸ ಬೆಳೆ ಕೈ ಸೇರುತ್ತದೆ. ಗಿಡಗಳು ಚಿಗುರುತ್ತವೆ. ಪಕ್ಷಿಗಳು ರಾಗಗಳನ್ನು ಧ್ವನಿಸುತ್ತವೆ. ಗ್ರಹಗಳು ತಮ್ಮ ಚಲನವನ್ನು ಹೊಸ ದಿಶೆಗೆ ತಿರುಗಿಸುತ್ತವೆ. ಹೀಗೆ ಎಷ್ಟೋ ತನ್ನಲ್ಲಿಟ್ಟು ಕೊಂಡಿರುವ ಯುಗಾದಿ ಹಬ್ಬದ ಆಚರಣೆ

ಯಲ್ಲಿಯೂ ಎಷ್ಟೋ ವೈವಿಧ್ಯಗಳು.ನಮಗೆ ಕಾಣಸಿಗುತ್ತವೆ.ಪ್ರಾಂತ್ಯ, ಆಚಾರಗಳಿಗನು ಗುಣವಾಗಿ ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿ ಯಲ್ಲಿ ಯುಗಾದಿಯನ್ನು ಆಚರಿಸುತ್ತಾರೆ. ಆ ಭೇದಗಳಾವುವುವೆಂದರೆ...

-ಪಾಡ್ಯದಿಂದ ರಾಮಾಯಣ ಪಾರಾಯಣ ಪ್ರಾರಂಭಿಸಿ ನವಮಿಗೆ ಪೂರ್ತಿಗೊಳಿಸಿ ಸೀತಾರಾಮರ ಕಲ್ಯಾಣವನ್ನು ನಿರ್ವಹಿಸುತ್ತಾರೆ.

- ರೈತರು ನೇಗಿಲ ಪೂಜೆ ಮಾಡಿ, ಅವರವರ ಹೊಲಗಳಲ್ಲಿ ಪೂರ್ವದಿಕ್ಕಿಗೆ ಐದು ಅಥವಾ ಒಂಬತ್ತು ಕುಣಿಗಳನ್ನು ತೋಡುತ್ತಾರೆ.

- ವೈಷ್ಣವ ಮತಾನುಯಾಯಿಗಳು ಎತ್ತುಗಳಿಗೆ ಅರಿಶಿನ-ಕುಂಕುಮಗಳಿಂದ ಅಲಂಕರಿಸುತ್ತಾರೆ.

- ಶೈವರು ಅರಶಿನ ಕುಂಕುಮಗಳೊಂದಿಗೆ ವಿಭೂತಿ, ಹೂಗಳಿಂದ ಅಲಂಕರಿಸುತ್ತಾರೆ.

- ದಕ್ಷಿಣದೇಶಗಳಲ್ಲಿ ಈ ದಿನ ಗ್ರಾಮದೇವತೆಗಳಿಗೆ, ಕ್ಷುದ್ರ ದೇವತೆಗಳಿಗೆ ಪ್ರಾಣಿಬಲಿಯನ್ನು ಕೊಡದೇ,ಕೇವಲ ತೆಂಗಿನ ಕಾಯಿಯ ನಿವೇದನೆ ಮಾಡುತ್ತಾರೆ.

- ಹೆಂಗಳೆಯರನ್ನು,ಮುತ್ತೈದೆಯರನ್ನು ಪೂಜಿಸಿ ನೂತನವಸ್ತ್ರ, ಅರಶಿನ - ಕುಂಕುಮ ನೀಡುತ್ತಾರೆ.

**ಯುಗಾದಿ - ಪುರಾಣ, ಚಾರಿತ್ರಿಕ ಕಥೆಗಳು:**

ಮೊದಲ ಋತುವು ವಸಂತ ಋತು, ಮೊದಲ ಮಾಸ ಚೈತ್ರಮಾಸ. ಮೊದಲ ದಿನ ಪಾಡ್ಯ, ಮೊದಲ ಪಕ್ಷ ಶುಕ್ಲಪಕ್ಷ..ಇವೆಲ್ಲಾ ಕಲಿತು ಬರು ವುದೇ ಯುಗಾದಿ ಹಬ್ಬ. ಇವುಗಳೊಂದಿಗೆ ಯುಗಾದಿ ಆಚರಣೆಗೆ ಅದೆಷ್ಟೋ ಚಾರಿತ್ರಿಕ,ಪುರಾಣದ ಹಿನ್ನೆಲೆಗಳು ಪ್ರಾಪ್ತವಾಗಿವೆ. ಅವಾವುವೆಂದರೆ...

- ಸೃಷ್ಟಿಕರ್ತನಾದ ಬ್ರಹ್ಮ ಚೈತ್ರ ಶುದ್ಧ ಪಾಡ್ಯದದಿನ ಅರುಣೋ ದಯದ ವೇಳೆ ಸಕಲ ಜಗತ್ತನ್ನು ಸೃಷ್ಟಿಸಿದ್ದಾನೆಂದು ಬ್ರಹ್ಮಾಂಡ ಪುರಾಣ ಹೇಳುತ್ತದೆ.

- ಪುರುವಂಶಕ್ಕೆಸೇರಿದ ವಸುರಾಜ ಇಂದ್ರನ ಅನುಗ್ರಹದಿಂದಾಗಿ ಮಹಿಮಾನ್ವಿತ ವಸ್ತುಗಳನ್ನು ತನ್ನ ಸ್ವಂತ ಮಾಡಿ ಕೊಂಡು ಚೈತ್ರ ಶುದ್ಧ ಪಾಡ್ಯದಂದು ಪಟ್ಟಾಭಿಷೇಕ ಮಾಡಿಕೊಂಡಿದ್ದಾನೆ.

-ಶಕಾಪುರುಷನಾದ ಶಾಲಿವಾಹನನು ಕೂಡಾ ಇದೇ ದಿನ ಪಟ್ಟಾಭಿಷೇಕ ಮಾಡಿಕೊಂಡಿದ್ದಾನೆ.

- ವನವಾಸಾನಂತರ ಶ್ರೀರಾಮಚಂದ್ರ ಸೀತಾ ಸಮೇತನಾಗಿ ಚೈತ್ರ ಶುದ್ಧ ಪಾಡ್ಯದ ದಿನದಂದು ಅಯೋಧ್ಯೆಗೆ ಪ್ರಯಾಣ ಬೆಳೆಸಿದ್ದಾನೆ.



**ಚೈತ್ರಮಾಸದಲ್ಲಿ ಮಾಡಬೇಕಾದ ಪೂಜಾ ಕೈಂಕರ್ಯಗಳು:**

**ಶುಕ್ಲ ಪುಕ್ಷ:**

**ಪಾಡ್ಯ:** ನೂತನ ಸಂವತ್ಸರದ ಆರಂಭ. ಸೂರ್ಯೋದಯಕ್ಕೆ ಮುನ್ನವೇ ಎದ್ದು ಸಂಕಲ್ಪ ದೊಂದಿಗೆ ಅಭ್ಯಂಜನವನ್ನು ಮಾಡಬೇಕು.ಈ ರೀತಿಯಲ್ಲಿ ಅಭ್ಯಂಜನ ಸ್ನಾನ ಮಾಡದಿರುವುದು ದೋಷವೆಂದು ಶಾಸ್ತ್ರಗಳು ಹೇಳುತ್ತವೆ. ಅನಂತರ ಯುಗಾದಿ ಬೇವುಬೆಲ್ಲದ ರಸಾಯನವನ್ನು ದೇವ ರಿಗೆ ನಿವೇದಿಸಿ ನಂತರ ನಾವು ಭುಜಿಸಬೇಕು. ಮೇಲೆ ಹೇಳಿದ ನಿಯಮಾವಳಿಗಳನ್ನು ಕಾರ್ಯ ಪೂಜಾದಿಗಳನ್ನು ವಿಧಿಪೂರ್ವಕವಾಗಿ ನಿರ್ವಹಿಸ ಬೇಕು. ಪಂಚಾಂಗಶ್ರವಣ ತಪ್ಪಿದರೂ ಸರಿ-ವಸ್ತ್ರ ದಾನವನ್ನು ಮಾಡುವುದರಿಂದ ಉತ್ತಮ ಗತಿಗಳು ಪ್ರಾಪ್ತವಾಗುತ್ತವೆಂದು ನಂಬಿಕೆ ಆ ದಿನದಿಂದ ಶ್ವೇತವರಾಹ ಕಲ್ಪವು ಆರಂಭವಾಗುತ್ತವೆ. ಚೈತ್ರ ಶುದ್ಧ ಪಾಡ್ಯ ಸೂರ್ಯೋದಯ ಸಮಯದಲ್ಲಿ ಯಾವ ವಾರ ಇರುತ್ತದೋ ಆ ವಾರಾಧಿಪತಿಯೇ ಇಡೀ ಸಂವತ್ಸರದ ಅಧಿಪತಿಯಾಗಿರುತ್ತಾನೆ. ಆ ಗ್ರಹದೇವತೆಯನ್ನು ಆರಾಧಿಸಿದಲ್ಲಿ ವರ್ಷವೆಲ್ಲಾ ಆ ಗ್ರಹದೇವತೆಯ ಅನುಗ್ರಹದಿಂದಾಗಿ ಬಳಿತೇ ಉಂಟಾಗುತ್ತದೆ.

ಶಿಶಿರ - ವಸಂತ ಋತುಗಳ ಸಂಗಮಕಾಲ ಈ ಚೈತ್ರಮಾಸ. ಈ ಕಾರಣದಿಂದಾಗಿ ಶರೀರದಲ್ಲಿ ಧಾತುಲೋಪವುಂಟಾಗುವ ಸಾಧ್ಯತೆಯಿರುತ್ತದೆ.

ಈ ಕೊರತೆಯನ್ನು ನೀಗಿಸಲು ಬೇವಿನ ಚಿಗುರನ್ನು ತಿನ್ನಬೇಕೆಂದು ಆಯುರ್ವೇದವು ಸಾರುತ್ತದೆ. ಬೇವಿನ ಹೂಗಳಿಂದ ಮಾಡಿದ ಯುಗಾದಿಯ ರಸಾಯನ ತಿನ್ನುವುದರ ರಹಸ್ಯ ಇದೇ. ಯುಗಾದಿಯ ದಿನ ಉಪವಾಸವಿದ್ದು ಬ್ರಹ್ಮ ದೇವನನ್ನು ಪೂಜಿಸುವುದರಿಂದ ವರ್ಷವಿಡೀ ಸುಖ ಸಂಪತ್ತುಗಳು ಉಂಟಾಗುತ್ತವೆಯೆಂದು ವಿಷ್ಣುಪುರಾಣ ಹೇಳುತ್ತದೆ. ಈ ದಿನದ ಪಂಚಾಂಗ ಶ್ರವಣ। ಪಠನದಿಂದ ಭವಿಷ್ಯದ ಮಾರ್ಗದರ್ಶನ ವುಂಟಾಗುತ್ತದೆ. ಮತ್ಸ್ಯಜಯಂತಿಯೂ ಸಹಾ ಇದೇ ದಿನವೇ ಶ್ರೀವಿಷ್ಣು ಮೂರ್ತಿಯನ್ನು ಮತ್ಸ್ಯಮೂರ್ತಿಯಾಗಿ ಭಾವಿಸಿ ಅರ್ಚಿಸಬೇಕು.

'ಶರದ್ವಸನ್ತನಾಮಾನೌ ದುರ್ಗಮೌ ಪ್ರಾಣಿನಾಮಿಹ ತಯಾರ್ನಿತ್ಯಂ ವಿಶೇಷಣ ಕರ್ತವ್ಯಂ ದೈವ ಪೂಜನಂ'- ಅಂದರೆ ಶರದ್-ವಸಂತ ಮಾಸಗಳು ಪ್ರಾಣಿಗಳಿಗೆ ಯಮ ಬಾಧೆಯನ್ನುಂಟು ಮಾಡಬಲ್ಲ ಕಾಲ. ಈ ಪೀಡಾ ಕಾಲದಿಂದ ವಿಮುಕ್ತಿ ಹೊಂದಲು ವಸಂತದ ನವರಾತ್ರಿಗಳನ್ನು ಜರುಗಿಸಿ, ದೇವತೆಗಳನ್ನು ಆರಾಧಿಸಿ, ದೇವಾತಾನುಗ್ರಹದಿಂದ ಸಕಲ ದೈಹಿಕ ಬಾಧೆಗಳಿಂದ ವಿಮುಕ್ತರಾಗಬಹುದೆಂದು ದೇವಿ ಭಾಗವತ ಹೇಳುತ್ತದೆ.

**ಬಿದಿಗೆ :** ಆರಂಧತಿ ವ್ರತ-ಸೌಭಗ್ಯ ಗೌರಿವ್ರತವನ್ನು ಮಾಡಬೇಕು. ಶಿವಪಾರ್ವತಿಯರನ್ನು ದವನದಿಂದ ಅರ್ಚಿಸಬೇಕು. ಸೂರ್ಯಾಸ್ತಾನಂತರ ಬಾಲಚಂದ್ರನನ್ನು ಧ್ಯಾನಿಸುತ್ತಾ ಚಂದ್ರವ್ರತವನ್ನು ಮಾಡಬೇಕು ಇದನ್ನು ಬಾಲೇಂದು ವ್ರತ ಎನ್ನುತ್ತಾರೆಂದು ಸ್ಮೃತಿ ಕೌಸ್ತುಭ ಹೇಳುತ್ತವೆ. ಪ್ರತಿ ತಿಂಗಳು ಬಿದಿಗೆ (ಶುದ್ಧ) ದಿನ ಚಂದ್ರಪೂಜೆಯಿಂದ ಚಂದ್ರಗ್ರಹದ ಅನುಗ್ರಹವುಂಟಾಗುತ್ತದೆ ಆಳ್ವಾರರ ಚರಿತ್ರೆಯ ಪ್ರಕಾರ ಈ ದಿನವು ಹಿರಿಯ ಪೆರುಮಾಳ್ ಉದಯಿಸಿ ಪುಣ್ಯ ನಕ್ಷತ್ರ ಸ್ಕಂದ ಪುರಾಣದಲ್ಲಿ ಈ ದಿನ ಅರಂಧತಿ ವ್ರತ ಮಾಡಬೇಕೆಂದು ತಿಳಿಸಿದೆ. ಈ ವ್ರತದ ಫಲವಾಗಿ ಸ್ತ್ರೀಯರಿಗೆ ಮಾಂಗಲ್ಯ ಸೌಭಾಗ್ಯವುಂಟಾಗುತ್ತದೆ. ಚರ್ತುವರ್ಗ ಚಿಂತಾಮಣಿ ಪ್ರಕಾರ ಈ ವ್ರತವನ್ನು ಧ್ರುವ ಎಂಬ ಮೂರು ವಿಗ್ರಹಗಳನ್ನು ಪ್ರತಿಷ್ಠಾಪಿಸಬೇಕು.ಶ್ರೀರಾಮಚಂದ್ರ ರಾವಣನ ಮರಣಾ ನಂತರ ವಿಭೀಷಣನನ್ನು ಲಂಕಾ ಪಟ್ಟಾಭಿಷಕ್ತನನ್ನಾಗಿ ಮಾಡಿದ್ದು ಇದೇ ದಿನ.

**ತದಿಗೆ:** ಶಿವ ಡೋಲೋತ್ಸವ ಅಥವಾ ಆಂಥೋಳಿನಿ ವ್ರತ. ಉಮಾಮಹೇಶ್ವರರನ್ನು ಪೂಜಿಸಿ ಅರ್ಚನಾ ಮೂರ್ತಿಗಳನ್ನು ಜೋಕಾಲಿಯಲ್ಲಿಟ್ಟು ಪೂಜಿಸಬೇಕು. ಇದರಿಂದ ದಾಂಪತ್ಯ ಸುಖವುಂಟಾಗುತ್ತದೆ. ಈ ದಿನ ಗೌರಿಗೆ ಮಾಡುವ ಪೂಜೆಯಲ್ಲಿ ಕುಂಕುಮ,ಅಗರು, ಕರ್ಪೂರ ಹೆಚ್ಚಾಗಿ ಬಳಸಬೇಕು. ಪಂಚಾಂಗದಲ್ಲಿ ಈ ದಿನವನ್ನು ಸೌಭಾಗ್ಯ ಶಯನ ವ್ರತ,ಮಾಸ ಗೌರಿ ವ್ರತ,ಉತ್ತಮ ಮನ್ವಾದಿ (ಹದಿನಾಲ್ಕು ಮನುಗಳಲ್ಲಿ 'ಉತ್ತಮ ಮನು' ಮೂರನೇಯವನು) ಎಂದು ಬರೆಯುತ್ತಾರೆ. ಸೌಭಾಗ್ಯ ಶಯನವ್ರತದ ಕುರಿತು ಮತ್ಸ್ಯಪುರಾಣದಲ್ಲಿದೆ. ಇದರ ಪ್ರಕಾರ ಉಮಾಮಹೇಶ್ವರ ಉತ್ಸವ ಮೂರ್ತಿಗಳಿಗೆ ಕಲ್ಯಾಣೋತ್ಸವ ನಡೆಸಬೇಕು. ಇದರಿಂದ ಶಿವಲೋಕ ಪ್ರಾಪ್ತಿಯಾಗುತ್ತದೆ. ಮಹಾರಾಷ್ಟ್ರ ಸಂಪ್ರದಾಯಗಳಲ್ಲಿ ಈ ದಿನವನ್ನು ಗೌರಿ ತೃತೀಯವೆಂದು ಆಚರಿಸುತ್ತಾರೆ. ಕೆಲವರು ಮತ್ಸ್ಯಜಯಂತಿಯೆಂದೂ ಆಚರಿಸುತ್ತಾರೆ.

**ಚೌತಿ :** ಗಣಪತಿಯನ್ನು ದವನದಿಂದ ಪೂಜಿಸಬೇಕು. ಚರ್ತುವರ್ಗ ಚಿಂತಾಮಣಿಯ ಪ್ರಕಾರ ಈ ದಿನ ಚತುಮೂರ್ತಿ ವ್ರತವನ್ನು ಮಾಡಬೇಕು.

**ಪಂಚಮಿ :** ವಸಂತ ಪಂಚಮಿ / ನಾಗಪಂಚಮಿ ಈ ದಿನ ಅನಂತ, ವಾಸುಕಿ, ತಕ್ಷಕ, ಕಾರ್ಕೋಟಕ, ಶಂಖ, ಕುಳಿಕ, ಪದ್ಮ, ಮಹಾಪದ್ಮ ಎಂಬ ನಾಗದೇವತೆಗಳನ್ನು ಸ್ಮರಿಸಿ, ಹಾಲು-ತುಪ್ಪ ನೈವೇದ್ಯ ಮಾಡಬೇಕು. ಶ್ರೀ ಮಹಾವಿಷ್ಣುವಿನ ಆಜ್ಞಾನುಸಾರ ಲಕ್ಷ್ಮಿದೇವಿ ಈ ದಿನ ಭೂಲೋಕಕ್ಕೆ ಬಂದಿದ್ದಾಳೆ ಆದ್ದರಿಂದ ಲಕ್ಷ್ಮೀದೇವಿಯನ್ನು ಸಹಾ ವಿಶೇಷವಾಗಿ ಪೂಜಿಸಬೇಕು.

ಸ್ಮೃತಿ ಕೌಸ್ತುಭದಲ್ಲಿ ಈ ದಿನ ಶಾಲಿ ಹೋತ್ರ ಮಾಯ ಪಂಚಮಿ ಎಂದು ಉಲ್ಲೇಖಿಸಿದೆ. ಶಾಲಿಹೋತ್ರ 'ಅಶ್ವಶಾಸ್ತ್ರವನ್ನು ರಚಿಸಿದ ಋಷಿ ಆತನ ಪ್ರಕಾರ ಶಾಲಿಹೋತ್ರ ಮಾಯಾ ಪಂಚಮಿ? ಆಚರಣೆಗೆ ಬಂದಿದೆ. ಆದರೆ ಈಗಿದು ಆಚರಣೆಯಲ್ಲಿಲ್ಲ. ಹಾಗೆಯೇ ಈ ಪಂಚಮಿಯನ್ನು ಶ್ರೀಪಂಚಮಿಯೆಂದೂ ಪಂಚಾಂಗದಲ್ಲಿ ಸಂಭೋದಿಸುತ್ತಾರೆ. ಈ ತಿಥಿಗಿಂತಲೂ ಮಾಘಮಾಸದಲ್ಲಿ ಬರುವ ಶ್ರೀ ಪಂಚಮಿ ದಿನ. ಆದ್ದರಿಂದಲೇ ಈ ದಿನವನ್ನು ಶ್ರೀರಾಮ ರಾಜ್ಯೋತ್ಸವದ ಪರ್ವ ದಿನವಾಗಿ ಆಚರಿಸಬೇಕು. ಸ್ಮುತಿ ಕೌಸ್ತುಭದ ಪ್ರಕಾರ ನಾಗ ಪೂಜೆಯನ್ನು ಮಾಡಬೇಕು.

**ಷಷ್ಠಿ :** ಸ್ಕಂದನನ್ನು ದವನದಿಂದ ಅರ್ಚಿಸಬೇಕು.

(ಇಷ್ಟಕ್ಕೂ ಮುಂಚೆ ಹೇಳಿದ ಹಾಗೆ ಪಾಡ್ಯದಿಂದ ಹುಣ್ಣಿಮೆವರೆಗೆ ಸಂಬಂಧಿಸಿದ ದೇವತೆಗಳನ್ನು ಕ್ರಮವಾಗಿ ಪೂಜಿಸತಕ್ಕದ್ದು)

**ಸಪ್ತಮಿ :** ಈ ದಿನ ಭಾನುಸಪ್ತಮಿ ಸೂರ್ಯ ಭಗವಂತನನ್ನು ಕೆಂಪು ಹೂಗಳಿಂದ ಪೂಜಿಸಬೇಕು. ಆದಿತ್ಯ ಹೃದಯ ಪಾರಾಯಣ ಮಾಡಬೇಕು. ಆರ್ಕವ್ರತವನ್ನು ಮಾಡುವವರು ರಾತ್ರಿ ಊಟ ಮಾಡಬಾರದು.

**ಅಷ್ಟಮಿ :** ಈ ದಿನದ ಬೆಳಗಿನ ಜಾವದ ಭಗವನ್ನಾಮ ಸ್ಮರಣೆಯಿಂದ ಮಾಡುವ ಸ್ನಾನ ವಾಜಪೇಯ ಯಾಗದ ಫಲವನ್ನೀಯುತ್ತದೆಂದು ಶಾಸ್ತ್ರೋಕ್ತಿ ಈ ದಿನ ಭವಾನಿದೇವಿ ಹುಟ್ಟಿದ ದಿನ. ಭವಾನಿ ಮಾತೆಯನ್ನು ಪ್ರತ್ಯೇಕವಾಗಿ ಅರ್ಚಿಸ ಬೇಕು. ಸಂಜೆ 108 ಅಶೋಕ ಪುಷ್ಪಗಳಿಂದ ಪಾರ್ವತಿ- ಪರಮೇಶ್ವರ ರನ್ನು ಅರ್ಚಿಸಿ. ಆಕಳ ತುಪ್ಪದಿಂದ ತಯಾರಿಸಿದ ಪಾಯಸವನ್ನು ನಿವೇದಿಸ ಬೇಕು. ಈ ದಿನ ಅಶೋಕ ಮರದೆಲೆಗಳನ್ನು ಭುಜಿಸಬೇಕೆಂದೂ, ಅಶೋಕ ಪುಷ್ಪದಿಂದ ಶರೀರದ ಅಲಂಕಾರವನ್ನು ಮಾಡಿಕೊಳ್ಳಬೇಕೆಂದು ಶಾಸ್ತ್ರಗಳು ಹೇಳುತ್ತವೆ. ಪುನರ್ವಸು ನಕ್ಷತ್ರವನ್ನು ಹೊಂದಿದ ಈ ದಿನ ಎಂಟು ಅಶೋಕ ಚಿಗುರುಗಳನ್ನು ತಿನ್ನ ಬೇಕೆಂದು ಲಿಂಗಪುರಾಣವು ತಿಳಿಸುತ್ತದೆ. ಇದರಿಂದ ದುಃಖ ನಾಶವಾಗುತ್ತದೆ. ಸ್ತ್ರೀಯರ ಗರ್ಭಾಶಯದ ಮೇಲೆ ಅಶೋಕ ಮೂಲಿಕೆಯು ಅತ್ಯಂತ ಪರಿಣಾಮ ವನ್ನು ಬೀರುತ್ತದೆ. ಋತುಚಕ್ರದ ದೋಷಗಳನ್ನು ಹೋಗ ಲಾಡಿಸಿ, ಸ್ತ್ರೀಯರನ್ನು ಸಂತಾನವತಿಯರನ್ನಾಗಿ ಮಾಡುತ್ತದೆ. ವ್ರತದ ನಿಯಮದ ಹೆಸರಿನಲ್ಲಿ ಸ್ತ್ರೀಯರು ಅಶೋಕ ಚಿಗುರನ್ನು ಭುಜಿಸುವುದರಿಂದ ಅವರ ಆರೋಗ್ಯ ವೃದ್ಧಿಗೊಂಡು, ಸ್ತ್ರೀ ಸಂಬಂಧಿ ಅನಾರೋಗ್ಯಗಳು ದೂರ ಗೊಳ್ಳುತ್ತವೆ.

ಪುನರ್ವಸು, ಬುಧವಾರ, ಅಷ್ಟಮಿ ಕೂಡಿ ಬಂದ ದಿನ ವಿಧಿಯುಕ್ತವಾಗಿ ಸ್ನಾನವನ್ನು ಮಾಡಬೇಕು. ಇದರಿಂದ ಯಾಗಗಳನ್ನು ಮಾಡಿದ ಫಲವುಂಟಾ ಗುತ್ತದೆ. ಈ ದಿನ ಬ್ರಹ್ಮಪುತ್ರ ನದಿಯಲ್ಲಿ ಸ್ನಾನ ಮಾಡುವವರಿಗೆ ಬ್ರಹ್ಮ ಲೋಕ ಪ್ರಾಪ್ತಿಯಾಗುತ್ತದೆ.

**ನವಮಿ :** ಶ್ರೀರಾಮನವಮಿ ಅಂದು ಏಕಭುಕ್ತವ್ರತ. (ಅಂದರೆ ಒಂದೇ ಹೊತ್ತು ಊಟವನ್ನು ಮಾಡಬೇಕು) ರಾಮಾಯಣಪಾರಾಯಣ, ಸೀತಾರಾಮರ ಕಲ್ಯಾಣೋತ್ಸವವನ್ನು ನಿರ್ವಹಿಸಬೇಕು. ಈ ದಿನ ಉಪವಾಸ ಮಾಡಿ, ರಾಮಾ ರ್ಚನೆಯನ್ನು, ಮಾಡಿ, ಜಾಗರಣೆಯನ್ನು ಮಾಡುವ ಭಕ್ತರು ಲೋಕ ಪೂಜ್ಯ ರಾಗುತ್ತಾರೆಂದು ಅಗಸ್ತ್ಯ ಸಂಹಿತಿ ಹೇಳುತ್ತಿದೆ.

**ದಶಮಿ :** ಈ ದಿನಕ್ಕೆ ಧರ್ಮರಾಯ ದಶಮಿ ಎನ್ನುತ್ತಾರೆ. ಧರ್ಮ ದೇವತೆಯ ಪೂಜೆಯನ್ನು ಮಾಡಬೇಕು.

**ಏಕಾದಶಿ :** ಕಾಮೋಕಾದಶಿ ಎಂದು ಕರೆಯಲ್ಪಡುವ ಏಕಾದಶಿ ಇದು. ರುಕ್ಮಿಣಿದೇವಿಯನ್ನು ಆರಾಧಿಸಬೇಕು. ಶ್ರೀಕೃಷ್ಣನ ವಿಗ್ರಹವನ್ನು ಉಯ್ಯಾಲೆಯಲ್ಲಿ ಕೂರಿಸಿ ಸಕ್ರಮವಾಗಿ ಪೂಜೆಯನ್ನು ಮಾಡಬೇಕು. ಹೀಗೆ ಮಾಡುವುದರಿಂದ ಕಲಿದೋಷಗಳು ನಿವಾರಣೆಯಾಗುತ್ತವೆ. ಅಪರಾಧಗಳು ತೊಲಗಿ ವಿಷ್ಣು ಸಾಯುಜ್ಯ ಒದಗುತ್ತದೆ. ಧಾರ್ಮಿಕ ಮನೋಭಿಷ್ಟೆಗಳು ಪೂರೈಸುತ್ತವೆ.

**ದ್ವಾದಶಿ :** ಸ್ಮೃತಿ ಕೌಸ್ತುಭದ ಪ್ರಕಾರ ಈ ದಿನ ವಿಷ್ಣುದಮನೋತ್ಸವವನ್ನು ನಿರ್ವಹಿಸಬಹುದು. ನೀಲಮತ ಪುರಾಣವು ಇಂದು ವಾಸುದೇವಾರ್ಚನೆ ಮಾಡಬೇಕೆಂದು ಸೂಚಿಸುತ್ತದೆ. ಪ್ರಸ್ತುತ ಪಂಚಾಂಗಗಳಲ್ಲಿ ವಾಮನ ದ್ವಾದಶಿ ಯಂದು ಉಲ್ಲೇಖಿಸಿರುತ್ತಾರೆ. ಭ್ರಾತೃಪ್ರಾಪ್ತಿ ವ್ರತವನ್ನು ಸಹಾ ಮಾಡುವ ವಾಡಿಕೆ ಯಲ್ಲಿದೆ.

**ತ್ರಯೋದಶಿ :** ಮದನ ತ್ರಯೋದಶಿ/ ಅನಂಗ ತ್ರಯೋದಶಿ ವ್ರತ. ಇಂದು ಮನ್ಮಥ ನನ್ನು ವಿಧಿಪೂರ್ವಕವಾಗಿ ಪೂಜಿಸಿ, ಅನಂಗ ವ್ರತವನ್ನು ಮಾಡಿದಲ್ಲಿ ಸತಿಪತಿ ಯರ ನಡುವೆ ಅನುರಾಗ ವೃದ್ಧಿಗೊಳ್ಳುತ್ತದೆ. ದಾಂಪತ್ಯ ಜೀವನಕ್ಕೆ ಯಾವುದೇ ಧಕ್ಕೆ ಯುಂಟಾಗಲಾರದು. ಈ ದಿನ ಮಾಡುವ ಶಿವಾರಾಧನೆ ಪುನರ್ಜನ್ಮವಿಲ್ಲದೇ ಮಾಡುತ್ತ ದೆಂದು ಶಾಸ್ತ್ರಗಳು ಹೇಳುತ್ತದೆ.

**ಚತುರ್ದಶಿ :** ಪಂಚಾಂಗಗಳಲ್ಲಿ ಇದನ್ನು ಶೈವ ಚತುರ್ದಶಿಯೆಂದು ಉಲ್ಲೇಖಿ ಸಿರುತ್ತಾರೆ. ಈ ದಿನ ಶಿವಸನ್ನಿಧಿಯಲ್ಲಿರುವ ತೀರ್ಥಗಳಲ್ಲಿ ಸ್ನಾನ ಮಾಡಬೇಕು. ಸ್ಮೃತಿ ಕೌಸ್ತುಭದ ಪ್ರಕಾರ ಈ ದಿನ ನೃಸಿಂಹ ಡೋಲೋತ್ಸವವನ್ನು ಆಚರಿಸಬೇಕು. ಈಶ್ವರನನ್ನು ಪೂಜಿಸಬೇಕು. ವೀರಾದೇವಿ- ಭೈರವರನ್ನು ಪೂಜಿಸಬೇಕು.

**ಹುಣ್ಣಿಮೆ :** ಈ ದಿನ ಮಾಡಲ್ಪಡುವ ಧ್ಯಾನ, ಜಪ, ಅರ್ಚನೆಗಳು ವಿಶೇಷ ಫಲ ಗಳನ್ನೀಯುತ್ತವೆ. ಈ ದಿನ ಚಿತ್ರವರ್ಣದ (ಕೆಂಪು ಬಟ್ಟೆ) ಯನ್ನು ದಾನ ಮಾಡಬೇಕು. ಈ ದಿನ ಚಿತ್ರಗುಪ್ತ ವ್ರತವನ್ನಾಚರಿಸಿದ ವರಿಗೆ ಯಮದಂಡನವಿರುವುದಿಲ್ಲವೆಂದು ಶಾಸ್ತ್ರಗಳು ಹೇಳುತ್ತವೆ. ಆಂಧ್ರಪ್ರದೇಶಗಳಲ್ಲಿ ಚಿತ್ರಗುಪ್ತ ವ್ರತವನ್ನು ತಿಥಿಯ ನಿರ್ಬಂಧ ವಿಲ್ಲದೇ ಆಚರಣೆಗೈದರೂ ತಮಿಳುನಾಡಿನ ಪ್ರಾಂತ್ಯಗಳಲ್ಲಿ ಇವತ್ತಿಗೂ ಈ ವ್ರತವನ್ನು ಪೂರ್ಣಿಮದ ದಿನದಂದೇ ಆಚರಿಸುವುದೇ ಕಂಡು ಬರುತ್ತದೆ. ಈ ದಿನ ವಿಶೇಷವಾಗಿ ಶಿವಪಾರ್ವತಿಯರ ಕಲ್ಯಾಣದಿಂದ ಸತ್ಪು ತ್ರರು ಜನಿಸುತ್ತಾರೆ ಪ್ರಾಂತ್ಯದ ಆಚರಣೆಗಳ ಪ್ರಕಾರ ಈ ದಿನವನ್ನು ಹನುಮ ಜಯಂತಿ ಯಾಗಿ ಆಚರಿಸುತ್ತಾರೆ. ತಿರುಮಲೆಯ ಆಕಾಶಗಂಗಾ ಸ್ನಾನದಿಂದ ಉತ್ತಮ ಫಲ ಗಳು ಉಂಟಾಗುತ್ತವೆ. ಗುರು ಶನಿ, ಆದಿತ್ಯ ವಾರಗಳು,ಹುಣ್ಣಿಮೆಯಾಗಿ ಬಂದರೆ ಆ ದಿನ ಶ್ರಾದ್ಧಾದಿ ಕಾರ್ಯಗಳನ್ನು ಮಾಡಿದರೆ ಅಶ್ವ ಮೇಧಯಾಗದ ಫಲಲಭಿಸುತ್ತದೆ. ಗೋ

**ತಿರುಮಲೆಯ ಆಕಾಶಗಂಗಾ ಸ್ನಾನದಿಂದ ಉತ್ತಮ ಫಲ ಗಳು ಉಂಟಾಗುತ್ತವೆ.ಗುರು ಶನಿ, ಆದಿತ್ಯ ವಾರಗಳು,ಹುಣ್ಣಿಮೆಯಾಗಿ ಬಂದರೆ ಆ ದಿನ ಶ್ರಾದ್ಧಾದಿ ಕಾರ್ಯಗಳನ್ನು ಮಾಡಿದರೆ ಅಶ್ವ ಮೇಧ ಯಾಗದ ಫಲಲಭಿಸುತ್ತದೆ.**

ದಾನವನ್ನು ಮಾಡಬೇಕು. ಈ ದಿನ ಮಧುರಕವಿ ಆಳ್ವಾರರ ತಿರುನಕ್ಷತ್ರದ ದಿನ.

**ಕೃಷ್ಣ ಪಕ್ಷ :**

**ಪಾಡ್ಯ :** ಈ ದಿನ ಪಾತಾಳವ್ರತವನ್ನು ಆರಂಭಿಸ ಬೇಕೆಂದು ಚತುರ್ವರ್ಗ ಚಿಂತಾಮಣಿ ಸಾರುತ್ತದೆ.

**ಪಂಚಮಿ :** ಹಲವು ಗ್ರಂಥಗಳು ಇಂದು ಮತ್ಸ್ಯಜಯಂತಿ ಯೆಂದೂ ಪರಿಗಣಿಸುತ್ತವೆ.

ಧರ್ಮಸಿಂಧು, ಸ್ಮೃತಿ ಕೌಸ್ತುಭವು ಶುದ್ಧ ಪಾಡ್ಯವನ್ನು ಮತ್ಸ್ಯಜಯಂತಿಯೆಂದೂ ಹೇಳುತ್ತಿದ್ದರೆ ಮತ್ತೆ ಹಲವು ಗ್ರಂಥ ಗಳು ಶುದ್ಧ ತದಿಗೆಯನ್ನು ಮತ್ಸ್ಯ ಜಯಂತಿ ಎಂದು ಹೇಳುತ್ತವೆ.

**ಏಕಾದಶಿ :** ವರೂಥಿನ್ಯೇಕಾದಶಿ ಎಂದೂ ಕರೆಯುತ್ತಾರೆ. ನಮ್ಮ ಪಂಚಾಂಗಗಳಲ್ಲಿ ವರೂಥಿನಿ ಏಕಾದಶಿ ಎಂದಿರುತ್ತದೆ. ಈ ದಿನ ಉಪವಾಸವನ್ನು ಮಾಡಿ, ವ್ರತವನ್ನು ಆಚರಿಸಿದ ವರಿಗೆ ಸಾವಿರ ಗೋದಾನ ಫಲ ಮಾಡಿದ ಪುಣ್ಯವುಂಟಾಗುತ್ತ ದೆಂದು ಶಾಸ್ತ್ರವಚನ.

**ತ್ರಯೋದಶಿ :** ವರಾಹ ಜಯಂತಿ. ಈ ವಿಷಯದಲ್ಲೂ ಹಲವು ತಿಥಿ ಬೇಧಗಳು ಕಂಡು ಬರುತ್ತದಾದರೂ ತೆಲುಗು ಪಂಚಾಂಗದಲ್ಲಿ ಹೆಚ್ಚಾಗಿ ಬಹುಳ ತ್ರಯೋದಶಿ ವರಾಹ ಜಯಂತಿಯೆಂದು ಬರೆದಿರುತ್ತಾರೆ. ಹೆಚ್ಚಾಗಿ ಜನರು ವಾಡಿಕೆ ಯಲ್ಲಿರುವುದು ಇದೇ ಆದ್ದರಿಂದ ಈ ದಿನವೇ ವರಾಹ ಜಯಂತಿ ಆಚರಿಸುವುದು ಉತ್ತಮ.


**ಚತುರ್ದಶಿ :** ಈ ದಿನ ಗಂಗಾಸ್ನಾನ ಮಾಡುವುದರಿಂದ ಪಿಶಾಚತ್ವ ಬರೆದಿರುತ್ತದೆ ಈತಿಥಿ ಮಂಗಳವಾರದೊಂದಿಗೆ ಕಲಿತು ಬಂದರೆ ಮತ್ತಷ್ಟು ಫಲಿತವು ಹೆಚ್ಚಾಗಿರುತ್ತದೆ.

**ಅಮಾವಾಸ್ಯೆ :** ಈ ದಿನ ವಹ್ನಿವ್ರತ ಮಾಡಬೇಕೆಂದು ಸ್ಮೃತಿ ಕೌಸ್ತುಭ, ಪಿತೃವ್ರತ ಮಾಡಬೇಕೆಂದು ಚತುರ್ವರ್ಗ ಚಿಂತಾಮಣಿ ಹೇಳುತ್ತವೆ.



**ಸಪ್ತಗಿರಿಯ ಓದುಗರಿಗೆ, ಏಜಂಟರಿಗೆ, ಹಿತೈಷಿಗಳಿಗೆ, ಭಕ್ತ ಬಾಂಧವರಿಗೆ..... ವಿಕಾರಿನಾಮ ಸಂವತ್ಸರ ಯುಗಾದಿಯ ಹಾರ್ದಿಕ ಶುಭಕಾಮನೆಗಳು ಶ್ರೀ ವೆಂಕಟೇಶ್ವರಸ್ವಾಮಿ ಅನುಗ್ರಹವು ಸಂಪೂರ್ಣವಾಗಿ ಸರ್ವರಿಗೂ ದೊರೆಯಲೆಂದು ಹೃತ್ಪೂರ್ವಕ ಹಾರೈಕೆ.**

**- ಪ್ರಧಾನ ಸಂಪಾದಕರು**



# ನಗರಗಳಲ್ಲಿ ಸಾಂಸ್ಕೃತಿಕ ಪರಿಸರದ ಪುನಶ್ಚೇತನ

-ಶ್ರೀಮತಿ. ನಂ. ನಾಗಲಕ್ಷ್ಮಿ



ಒಂದು ಸಾಂಸ್ಕೃತಿಕ ನಗರಿಯಾದರೆ ಮತ್ತೊಂದು ಉದ್ಯಾನನಗರಿ, ಜೊತೆಗೆ ರಾಜಧಾನಿ. ಮೈಸೂರು, ಬೆಂಗಳೂರು ಎರಡೂ ಒಂದು ಕಾಲದಲ್ಲಿ ತಮ್ಮ ಈ ವೈಶಿಷ್ಟ್ಯಗಳಿಂದ ವಿಭಿನ್ನ, ವಿಶೇಷನಗರಗಳೆನಿಸಿದ್ದುವು. ಬದಲಾವಣೆ ಪ್ರಗತಿಯ ಸಂಕೇತ-ಎನ್ನುತ್ತಾರೆ. ಅದೇ ರೀತಿ, ಕಾಲ ಬದಲಾಯಿತು. ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ ಆಧ್ಯಾತ್ಮಿಕ ಎಂಬ ಎಲ್ಲ ಕೋನಗಳಿಂದ, ಎಲ್ಲ ಕಡೆಗಳಲ್ಲಿ ಬದಲಾವಣೆಗಳಾಗತೊಡಗಿದವು. ಹತ್ತು ಹಲವು ವೈಜ್ಞಾನಿಕ ಸಂಶೋಧನೆಗಳ ಫಲವಾಗಿ ಜನರ ಜೀವನ ಶೈಲಿಯೂ ಬದಲಾಗತೊಡಗಿತು. ಪ್ರಗತಿಯ ದಾರಿಯಲ್ಲಿ ಸಾಧಕ ಬಾಧಕಗಳೆಂಬ ಎರಡೂ ದೃಷ್ಟಿಗಳಿಂದ ಪರಿಣಾಮಗಳನ್ನು ಸ್ವೀಕರಿಸುವಂತಾಯಿತು. ನಾಗರೀಕತೆಯ ಹೊಸಹೊಸ ಆಯಾಮಗಳು ಹುಟ್ಟಿಕೊಂಡವು. ಮಾನವನ ಆಸೆ, ಆಕಾಂಕ್ಷೆಗಳು ಎಲ್ಲ ದಿಕ್ಕುಗಳಿಗೆ ಮುಕ್ತವಾಗಿ ತೆರೆದುಕೊಂಡವು. ಇದಕ್ಕೆ ಪೂರಕವಾಗಿ ಜಗತ್ತಿನ ಎಲ್ಲೆಡೆ ಉಂಟಾದ ಜಾಗತೀಕರಣದ ಪ್ರಭಾವದಿಂದ ಪರಸ್ಪರ ಸಂಪರ್ಕಸೌಲಭ್ಯಗಳೂ ಹೆಚ್ಚಿದುವು. ವಾಣಿಜ್ಯ ವ್ಯವಹಾರಗಳ ವಿನಿಮಯದೊಂದಿಗೆ ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಳೂ ನಡೆಯತೊಡಗಿದುವು ಅನಿವಾರ್ಯವಾಗಿ ನಕಾರಾತ್ಮಕವಾದ ಕೆಲವು ವಿಪರೀತ ಪರಿಣಾಮಗಳು ಉಂಟಾದುವು-ಯಾಂತ್ರೀಕೃತ ಜೀವನ ವಿಧಾನದ ಕಾರಣದಿಂದ ಭೌಗೋಳಿಕ ಪರಿಸರದಲ್ಲಿ ಕೂಡ ಬದಲಾವಣೆಯೊಂದಿಗೆ ಮಾಲಿನ್ಯವು ಕಾಲಿಟ್ಟಿತು. ಜೊತೆಯಲ್ಲಿ ಸಾಂಸ್ಕೃತಿಕ ಪರಿಸರದಲ್ಲಿಯೂ ಮಾಲಿನ್ಯವು ಕಂಡು ಬರತೊಡಗಿ ಕ್ರಮೇಣ ಆ ಮಾಲಿನ್ಯವೇ ಸಂಪೂರ್ಣವಾದ ಆಧಿಪತ್ಯವನ್ನೇ ತಳೆಯುವಂತಾಯಿತು. ಜನರಿಗೆ ನಾಡಿನ, ದೇಶದ ಸಂಸ್ಕೃತಿಗಿಂತ ಹೊರಗಿನ ಸಂಸ್ಕೃತಿಯ ಆಕರ್ಷಣೆ ಹೆಚ್ಚಾಗತೊಡಗಿತು. ಪರಂಪರಾಗತವಾಗಿ ಬೆಳೆದು ಬಂದ ಸಾಂಪ್ರದಾಯಿಕ ಆಚರಣೆಗಳ ಹಿಂದಿನ ಮೌಲ್ಯಗಳತ್ತ, ಸಂಸ್ಕೃತಿಗೆ ಸಂಬಂಧಿಸಿದ ವಿಚಾರಗಳತ್ತ ಅಲಕ್ಷ್ಯ, ಉದಾಸೀನದ ಧೋರಣೆಗಳು ಹೆಚ್ಚಾಗಿ ವಿದೇಶೀ ಸಂಸ್ಕೃತಿಯ ಆಚರಣೆಗಳತ್ತ ಜನತೆ ಬಾಗತೊಡಗಿತು. ನಮ್ಮದೇ

ನೆಲದ ವಿಚಾರಗಳ ಮಹತ್ತ್ವವನ್ನು ತಿಳಿಯುವತ್ತ ಜನರ ಆಸಕ್ತಿ ಕಡಿಮೆಯಾಗತೊಡಗಿತು.

ಒಂದು ಕಾಲವಿತ್ತು. ಜನರಲ್ಲಿ ಧರ್ಮ ಜಾಗೃತಿಯನ್ನು ಮೂಡಿಸುತ್ತ ಸುಸಂಸ್ಕೃತ ಸಮಾಜ ನಿರ್ಮಾಣ, ಆರೋಗ್ಯಕರ ಬೆಳವಣಿಗೆಯತ್ತ ಹಲವಾರು ಚಟುವಟಿಕೆಗಳು ನಡೆಯುತ್ತಿದ್ದವು ಜನರಿಗೆ ಅವುಗಳಿಂದ ರಂಜನೆ ಕೂಡ ಲಭಿಸುತ್ತಿತ್ತು. ನಗರ, ಗ್ರಾಮವೆಂಬ ಭೇದವಿಲ್ಲದೆ. ಶಿಕ್ಷಿತ, ಅಶಿಕ್ಷಿತರೆಂಬ ವರ್ಗೀಕರಣವಿಲ್ಲದೆ ಹಳ್ಳಿ ಹಳ್ಳಿಗಳಲ್ಲಿ ಎಲ್ಲರಿಗೂ ಅಗತ್ಯವಾದ ಜೀವನ ಮೌಲ್ಯಗಳ ಪಾಠಗಳು, ನಾನಾ ರೀತಿಗಳಲ್ಲಿ, ಆದರೆ ಎಲ್ಲರಿಗೂ ಅರ್ಥವಾಗುವಂತಹ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದುವು. ಅವುಗಳಲ್ಲಿ ಸಾಮಾನ್ಯವಾಗಿ ಹರಿಕಥೆ ಅಥವಾ ಕಥಾಕಾಲಕ್ಷೇಪ,ಪುರಾಣಶ್ರವಣ,ಪೌರಾಣಿಕ ನಾಟಕಗಳು ಪ್ರಮುಖವಾಗಿದ್ದು ಜನರಲ್ಲಿ ಧರ್ಮಪರವಾದ ಚಿಂತನೆಗಳನ್ನು ಮೂಡಿಸುತ್ತ ಅವರ ವ್ಯಕ್ತಿತ್ವಗಳನ್ನು ಸಂಸ್ಕರಿಸುತ್ತ ಜನಪ್ರಿಯವೆನಿಸಿಕೊಂಡಿದ್ದುವು. ಜನರಲ್ಲಿ ನ್ಯಾಯಾನ್ಯಾಯ ವಿಚಾರಗಳ,ವಿವೇಕಯುಕ್ತ, ವಿವೇಚನಾಶಕ್ತಿ ಕೂಡ ಅದರಿಂದ ಮೂಡುವಂತಾಗುತ್ತಿತ್ತು.

ಕ್ರಮೇಣ ವಿದೇಶೀ ಸಂಸ್ಕೃತಿಯ ಪ್ರಭಾವದಿಂದ ಜನರ ವಿಚಾರಧಾರೆ ಕೂಡ ಬದಲಾಗತೊಡಗಿತು. ಮನರಂಜನೆಯ ಬೇರೆ ಬೇರೆ ಸಾಧನಗಳ ಆವಿಷ್ಕಾರದಿಂದ ಹಳೆಯ ಮಾಧ್ಯಮಗಳ ಆಕರ್ಷಣೆ ಮರೆಯಾಯಿತು. ಮುದ್ರಣ, ವಿದ್ಯುನ್ಮಾನ ಮಾಧ್ಯಮಗಳ ಹತ್ತಾರು ಪ್ರಕಾರಗಳು ಜನರನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡವು.ಸಾಂಸ್ಕೃತಿಕನಗರ ತನ್ನ ಮೂಲ ಚೈತನ್ಯವನ್ನು ಕಳೆದುಕೊಳ್ಳತೊಡಗಿತು.ಉದ್ಯಾನ ನಗರ ಕಾಂಕ್ರೀಟ್ ನಗರವೆನಿಸಿತು.ಐಟಿ.ಬಿಟಿ ನಗರಗಳಾಗಿ ಜನರು ನೈತಿಕತೆಗಿಂತಲೂ ಕೇವಲ ಲೌಕಿಕ, ವ್ಯಾವಹಾರಿಕ ವಿಚಾರಗಳತ್ತ ಆಸಕ್ತಿ ಹೊಂದಿ, ಕೌಟುಂಬಿಕ ಮೌಲ್ಯಗಳನ್ನು ಮರೆಯುತ್ತಾ ವಿಭಕ್ತ ಕುಟುಂಬಗಳನ್ನು ಒಪ್ಪಿಕೊಳ್ಳುತ್ತಾ ಸದ್ದುಗದ್ದಲಗಳ ವೇಗದ ಜೀವನಶೈಲಿಯಿಂದ ಜನರ ಪರಸ್ಪರ ಸೌಹಾರ್ದದ ಸಂಬಂಧವೇರ್ಪಡುವ ಸಮಯವೇ ಇಲ್ಲವಾಗತೊಡಗಿತು.ಹೊಸ ಪರಿಸರ,ವಾತಾವರಣ ತನ್ನ ತುರೀಯಾವಸ್ಥೆ ಮುಟ್ಟಿತು.

ಮತ್ತೆ ಬದಲಾವಣೆಯ ಅಗತ್ಯ ಉಂಟಾಯಿತು. ಏಕೆಂದರೆ,ಯಾವುದೇ ಸ್ಥಿತಿಯು ಚಲನಶೀಲವಾಗಿದ್ದಲ್ಲಿ ದೀರ್ಘಕಾಲ ಒಂದೇ ರೀತಿಯಲ್ಲಿರುವುದಿಲ್ಲ. ಅದು ತನ್ನ ಪರಮಾವಧಿಯನ್ನು ತಲುಪಿದ ನಂತರ ಅದಕ್ಕೊಂದು 'ತಿರುವು' ಎಂಬುದು ಇದೇ ಇರುತ್ತದೆ. ಏರಿದ್ದು ಕೆಳಗೆ ಇಳಿಯಲೇ ಬೇಕಲ್ಲವೆ? ಹಾಗೆಯೇ ಈ ಬದಲಾವಣೆ ಕೂಡ ಅಗತ್ಯವಾಯಿತು.

ಇತ್ತೀಚಿನ ಕೆಲವು ದಶಕಗಳಲ್ಲಿ ನಗರಗಳಲ್ಲಿ ಹೆಚ್ಚುತ್ತಿರುವ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳು ಆಧುನಿಕತೆಯ, ಬದಲಾವಣೆಯ ಬೆನ್ನು ಹತ್ತಿದ್ದ, ಏನನ್ನೋ ಅರಸುತ್ತಿದ್ದ ಜೀವಗಳಿಗೆ ತಂಪೆರೆಯುವಂತಹ ಚಟುವಟಿಕೆಗಳಾದುವು. ಇವುಗಳನ್ನು ನಡೆಸುವುದರಲ್ಲಿ, ಪಾಲ್ಗೊಳ್ಳುವುದರಲ್ಲಿ ಸಂಘ ಸಂಸ್ಥೆಗಳು ಮಾತ್ರವಲ್ಲದೆ ಜನಸಾಮಾನ್ಯರ ಪಾತ್ರವೂ ಹೆಚ್ಚುತ್ತ ಬಂದಿತು.

ಜನರಲ್ಲಿ ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಪುನಶ್ಚೇತನಗೊಳಿಸುವ ಹಲವಾರು ವೈವಿಧ್ಯಮಯವಾದ ಚಟುವಟಿಕೆಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಅಂಶಗಳೆಲ್ಲವೂ ಸೇರಿದವು.ಕನ್ನಡ ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲವ್ಯಕ್ತಿಗಳಿಂದ ಪ್ರವಚನಗಳನ್ನು ಸಂಘ ಸಂಸ್ಥೆಗಳು ಏರ್ಪಡಿಸುವುದರಲ್ಲಿ ತೊಡಗಿದವು. (ಬೆಂಗಳೂರು ನಗರವನ್ನು ಗಮನಿಸಿದರೆ ಭಾರತೀಯ ವಿದ್ಯಾಭವನ,ಗೋಖಲೆವಿಚಾರಸಂಸ್ಥೆ,ವರ್ಲ್ಡ್‌ಕಲ್ಚರ್, ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘ ಮುಂತಾದುವು) ಮನೆಯಂಗಳದಲ್ಲಿ ಸತ್ಸಂಗದ ಕಾರ್ಯಕ್ರಮಗಳು ನಡೆಯ ತೊಡಗಿದುವು.ಪ್ರವಚನಗಳು,ದೇವತಾ ಸ್ತೋತ್ರಗಳ ಪಠನ, ಗಾಯನ, ಪುರಾಣಶ್ರವಣಾದಿ ಕಾರ್ಯಗಳು ಮಹಿಳಾ ಮಂಡಲಿಗಳ ಸಭೆಗಳಲ್ಲಿ ನಡೆಯತೊಡಗಿವು.ಹೀಗೆ ಸಾಹಿತ್ಯ, ಸಂಗೀತ, ನಾಟಕ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವಾರು ಚರ್ಚಾಗೋಷ್ಠಿಗಳು,ವ್ಯಾಸಂಗ ಗೋಷ್ಠಿಗಳು, ವಿಚಾರಸಂಕಿರಣಗಳು ನಡೆಯುವ ಫಲವಾಗಿ ಜನರಲ್ಲಿ ನಾಡಿನ ಪ್ರತಿಭಾವಂತ ವ್ಯಕ್ತಿಗಳ, ಸಾಧಕರ ಸಾಧನೆಯ ಪರಿಚಯವಾಗುವುದರೊಂದಿಗೆ ಯುವಜನಾಂಗಕ್ಕೆ ನವ ಸ್ಫೂರ್ತಿಯ ಸೆಲೆಗಳಾಗತೊಡಗಿದುವು.

ವೇಗದ ಜೀವನದ ಒತ್ತಡದಲ್ಲಿ ಸಿಲುಕುವ ಉದ್ಯೋಗಿಗಳಿಗೆ ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದರಿಂದ ಒಂದು ರೀತಿಯಲ್ಲಿ ಅವರು ಕೇವಲ ಬೌದ್ಧಿಕ ಕಸರತ್ತಿನ ಕಾರ್ಯಭಾರದಿಂದ ಛಿನ್ನವಾದ ಮನಸ್ಸಿಗೆ ಚೇತೋಹಾರಿಯಾಗುವಂತಹ ಪರಿಸರಕ್ಕೆ ತೆರೆದುಕೊಳ್ಳುವ ಅವಕಾಶವು ದೊರೆಯುವಂತಾಯಿತು. ನಮ್ಮ ಸಾಂಸ್ಕೃತಿಕ ಹಿರಿಮೆಯನ್ನೂ ತಿಳಿಯುವಂತಾಯಿತು.

ಬೆಂಗಳೂರಿನ ಕೆಲವು ಬಡಾವಣೆಗಳಲ್ಲಿನ ಪ್ರಮುಖ ದೇವಾಲಯಗಳು ವರ್ಷವಿಡೀ ಇಂತಹ ಸರ್ಜನಶೀಲ ಕಾರ್ಯಕ್ರಮಗಳನ್ನು ನಡೆಸುತ್ತವೆ.

ಜಯನಗರ ಬಡಾವಣೆಯಲ್ಲಿರುವ ರಾಗೀಗುಡ್ಡದ ವೀರಾಂಜನೇಯ ದೇವಸ್ಥಾನದಲ್ಲಿ ಇಡೀ ವರ್ಷ ಪ್ರತಿ ಗುರುವಾರ ಪ್ರವಚನ, ಸಂಗೀತ, ನೃತ್ಯ, ಯೋಗ,ಸಾಹಿತ್ಯ ಮಂಥನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಹನುಮ ಜಯಂತಿಯ ಸಂದರ್ಭದಲ್ಲಿ ಹದಿನೈದು ದಿನಗಳ ಪರ್ಯಂತ ವಿಶೇಷ ಧಾರ್ಮಿಕ ವಿಧಿಗಳನ್ನು ನಡೆಸುತ್ತಾ ಸಂಧ್ಯಾ ಕಾಲದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಸಾವಿರಾರು ಜನರನ್ನು ಆಕರ್ಷಿಸುತ್ತ ತನ್ನಲ್ಲಿಗೆ ಬರಮಾಡಿಕೊಳ್ಳುವುದಲ್ಲದೆ ಒಂದು ಪರಿಶುದ್ಧ,ಸುಸಂಸ್ಕೃತಿಯ ಪರಿಸರವನ್ನು ನಿರ್ಮಿಸುತ್ತದೆ. ಅದಕ್ಕೆ ಸಮೀಪದಲ್ಲಿ ಸುತ್ತಮುತ್ತ ಇರುವ ರಾಘವೇಂದ್ರಸ್ವಾಮಿ ಮಠಗಳಲ್ಲಿ,ಸ್ವಲ್ಪದೂರದಲ್ಲಿರುವ ಬಡಾವಣೆಗಳ ದತ್ತಾತ್ರೇಯ, ಸಾಯಿಬಾಬಾ ಮಂದಿರಗಳು ಕೂಡ ಇಂತಹ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ. ಮಲ್ಲೇಶ್ವರದ ಶ್ರೀ ವೇಣುಗೋಪಾಲಸ್ವಾಮಿ ಮಂದಿರ, ಬಸವೇಶ್ವರ ನಗರದ ವಿನಾಯಕ ಮಂದಿರ ಹಾಗೂ ಇತರ ಬಡಾವಣೆಗಳಲ್ಲಿನ ಶಂಕರಮಠವೂ ಸೇರಿದಂತೆ ವೀರಶೈವ ಮಠಗಳಲ್ಲಿ,ಕೆಲವು ಶಿಕ್ಷಣಸಂಸ್ಥೆಗಳಲ್ಲಿ, ರಾಮಮಂದಿರಗಳಲ್ಲಿ ಇಂತಹ ಸಂಸ್ಕೃತಿ ಉತ್ಸವಗಳು ನಡೆಯುತ್ತಲೇ ಇವೆ. ಮಲ್ಲೇಶ್ವರದ ಗಾಂಧಿಸಾಹಿತ್ಯ ಸಂಘವೂ ಇದಕ್ಕೆ ಹೊರತಾಗಿಲ್ಲ.

ಇವೆಲ್ಲ ಸಾರ್ವಜನಿಕವಾಗಿ ಪ್ರಮುಖ ಕೇಂದ್ರಗಳಾದರೆ, ಬಡಾವಣೆಗಳ ಜನರು ತಮ್ಮದೇ ಮನೆಗಳಲ್ಲಿ ಸಣ್ಣ ಪುಟ್ಟ ಸಂಖ್ಯೆಯಲ್ಲಿಯೇ ಸಮಾನಮಸ್ಕರರನ್ನು ಒಂದೆಡೆ ಸೇರಿಸಿ ತಿಂಗಳಿಗೆ ಅಥವಾ ಎರಡು ತಿಂಗಳಿಗೆ ಅನುಕೂಲವಾದ ಆದರೆ ನಿಯತವಾದ ಕ್ರಮದೊಂದಿಗೆ ಇಂತಹ ಆಧ್ಯಾತ್ಮಿಕ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ವಿಷ್ಣುಸಹಸ್ರನಾಮ, ಸೌಂದರ್ಯಲಹರಿ, ಗೀತಾಶ್ಲೋಕಪಠನ, ಭಜನೆ ಅಥವಾ ನಿರ್ದಿಷ್ಟ ಸಾಹಿತ್ಯಕೃತಿಯ, ಧರ್ಮಗ್ರಂಥದ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ, ಚರ್ಚೆ, ಸಂವಾದ ಇತ್ಯಾದಿ ನಡೆಸಲಾಗುತ್ತದೆ. ಇದೆಲ್ಲಾ ಜನರಲ್ಲಿ ಸದಭಿರುಚಿಯ ಹವ್ಯಾಸಗಳನ್ನು ಬೆಳೆಸುವುದರೊಂದಿಗೆ ಭಾರತೀಯ ಅಥವಾ ನಾಡಿನ ನಿಜವಾದ ಶ್ರೀಮಂತಿಕೆಯ ಮೌಲ್ಯಗಳನ್ನು ಪರಿಚಯಿಸುವ ಕಾರ್ಯವನ್ನು ಮಾಡುತ್ತದೆ. ಯುವಜನಾಂಗವನ್ನು ಸನ್ಮಾರ್ಗದಲ್ಲಿ ಕರೆದೊಯ್ಯಲು ಈ ಬಗೆಯ ಪರೋಕ್ಷ ಶಿಕ್ಷಣ ನೆರವಾಗುವುದರಲ್ಲಿ ಸಂದೇಹವಿಲ್ಲ.

ನಾಡಿನ ಖ್ಯಾತ ವಿದ್ವಾಂಸರಾದ ಶತಾವಧಾನಿ ಡಾ. ರಾ. ಗಣೇಶ್ ತಿಂಗಳಿಗೊಮ್ಮೆ ನಡೆಸುವ ವ್ಯಾಸಂಗ ಗೋಷ್ಠಿಯಲ್ಲಿ ಇಂಜನಿಯರ್‌ಗಳು, ವೈದ್ಯರು, ವಾಣಿಜ್ಯಪದವೀಧರರು, ಉದ್ಯಮಿಗಳು ಎಲ್ಲರೂ ಪಾಲ್ಗೊಂಡು ಸಂಸ್ಕೃತದ ಪ್ರಸಿದ್ಧ ಕಾವ್ಯಗಳು,ವ್ಯಾಕರಣ,ಛಂದಸ್ಸು,ಅಲಂಕಾರ ಮುಂತಾದವುಗಳ ಅಭ್ಯಾಸದೊಂದಿಗೆ ಅವರ ವಿಶೇಷ ಬೋಧನೆಯ ಲಾಭವನ್ನು ಪಡೆದುಕೊಳ್ಳುತ್ತಾರೆ. ಜ್ಞಾನಾರ್ಜನೆಯ ಈ ದಾರಿಯಲ್ಲಿ ನಡೆಯಬಯಸುವ (ವಿದ್ಯಾರ್ಥಿಗಳ) ವಿದ್ಯಾಪಿಪಾಸುಗಳ ಸಂಖ್ಯೆ ಹೆಚ್ಚುತ್ತಲೇ ಇದೆ.

ಇಂದಿನ ಅಂಕಾಧಾರಿತ ಶಿಕ್ಷಣ ವ್ಯವಸ್ಥೆಯಿಂದ ಕಂಗೆಟ್ಟು ದೂರವಾಗಿ ಬದಲಿಗೆ ಮೌಲ್ಯಾಧಾರಿತವಾದ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕೆಂದು ಆಲೋಚಿಸಿ ನಗರದ ನಾನಾ ಬಡಾವಣೆಗಳಲ್ಲಿ ಪೋಷಕರ, ಸಮಾಜದ ಹಿತೈಷಿಗಳ ಸಂಘಟನೆಗಳು ಚಿಂತನೆ ನಡೆಸುವ ಕಾರ್ಯಕ್ರಮಗಳು ನಡೆಯುತ್ತಿವೆ. ಇದು ದೇಶದಾದ್ಯಂತ ಕಾರ್ಯಪ್ರವೃತ್ತವಾಗಿರುವ ಯೋಜನೆಯ ಅಂಗವೇ ಆಗಿದೆ.

ಈ ಎಲ್ಲ ಯೋಜನೆಗಳ ಜೊತೆಗೆ ಮೈಸೂರು, ಬೆಂಗಳೂರು ನಗರದಲ್ಲಿ ಪ್ರಾರಂಭವಾಗಿರುವ ಒಂದು ಹೊಸ ಕಾರ್ಯಕ್ರಮವೆಂದರೆ ನಗರಸಂಕೀರ್ತನೆ. ಕೆಲವು ಬಡಾವಣೆಗಳಲ್ಲಿ ಒಂದಷ್ಟು ಜನ ಸಂಗೀತಕಲಾವಿದರು ಬೆಳಗಿನ ಆರು ಗಂಟೆಯಿಂದ ಏಳುಗಂಟೆಯವರೆಗೆ ಒಂದು ಗಂಟೆಯ ಕಾಲ ರಸ್ತೆಗಳಲ್ಲಿ ಹರಿದಾಸರ ಕೃತಿಗಳನ್ನು ಹಾಡುತ್ತಾ ಕ್ರಮಿಸುವ ಪರಿಪಾಠವನ್ನು ಪ್ರಾರಂಭಿಸಿದ್ದಾರೆ. ಹದಿನೈದು, ಹದಿನಾರನೇ ಶತಮಾನದ ಹರಿದಾಸ ಸಾಹಿತ್ಯದ ಪ್ರಮುಖ ಲಕ್ಷಣವಾದ ಭಕ್ತಿ ಪ್ರಸಾರ ಮತ್ತು ಜೀವನ ಮೌಲ್ಯಗಳನ್ನು ಮತ್ತೆ ನೆನಪು ಮಾಡುವ ಮೂಲಕ ಒಂದು ಆರೋಗ್ಯಕರ ವಾತಾವರಣವನ್ನು ನಿರ್ಮಿಸುವ ಈ ಕಾರ್ಯಕ್ರಮ ದಿನೇ ದಿನೇ ಜನಪ್ರಿಯವಾಗುತ್ತಿದೆ. ಇವೆಲ್ಲದರೊಂದಿಗೆ ಸಾಹಿತ್ಯ ಸಮ್ಮೇಳನಗಳು,ಸಂಗೀತ ಸಮ್ಮೇಳನಗಳು ರಾಜ್ಯ, ಜಿಲ್ಲೆ, ಬಡಾವಣೆ ಮಟ್ಟದಲ್ಲಿಯೂ ನಡೆಯುತ್ತಿದ್ದು



**ಜನರಲ್ಲಿ ಕಡಿಮೆಯಾಗುತ್ತಿರುವ ಮಾನವಧರ್ಮದ ಅರಿವನ್ನು ಮತ್ತೆ ಪುನಶ್ಚೇತನಗೊಳಿಸಲು ಇವುಗಳ ಅಗತ್ಯವಿದೆ. ಅವುನಿತ್ಯ ಜೀವನದ ದಿನಚರಿಯಲ್ಲಿರಬಹುದು. ಶಿಕ್ಷಣವ್ಯವಸ್ಥೆಯಲ್ಲಿರಬಹುದು. ಪಾರಮಾರ್ಥಿಕ ದೃಷ್ಟಿಕೋನದಲ್ಲಿರಬಹುದು.**

ಧಾರ್ಮಿಕ ಉತ್ಸವಗಳು ಜನರ ಸಂಸ್ಕೃತಿ ವರ್ಧನೆಗೆ ನೆರವಾಗುತ್ತದೆ.

ಬೆಂಗಳೂರು, ಮೈಸೂರು ನಗರಗಳಂತೆಯೇ ರಾಜ್ಯದ ಇತರ ನಗರಗಳಾದ ಮಂಗಳೂರು, ಹಾಸನ, ಶಿವಮೊಗ್ಗ, ತುಮಕೂರು, ಗದಗ, ಉಡುಪಿ ಮುಂತಾದ ಸ್ಥಳಗಳಲ್ಲಿ ಸಹ ಇಂತಹ ಸಮಾಜಮುಖೀ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ಆಯಾ ಪ್ರಾದೇಶಿಕ ಸಂಸ್ಕೃತಿಯನ್ನು ಬಿಂಬಿಸುವ ಇಂತಹ ಆಯೋಜನೆಗಳು ಇಂದಿನ ಸಾಂಸ್ಕೃತಿಕ ಮಾಲಿನ್ಯದ ಪರಿಸ್ಥಿತಿಯಲ್ಲಿ ಅವಶ್ಯಕವಾಗಿವೆ.ಜನರಲ್ಲಿ ಕಡಿಮೆಯಾಗುತ್ತಿರುವ ಮಾನವಧರ್ಮದ ಅರಿವನ್ನು ಮತ್ತೆ ಪುನಶ್ಚೇತನಗೊಳಿಸಲು ಇವುಗಳ ಅಗತ್ಯವಿದೆ. ಅವುನಿತ್ಯ ಜೀವನದ ದಿನಚರಿಯಲ್ಲಿರಬಹುದು. ಶಿಕ್ಷಣ ವ್ಯವಸ್ಥೆಯಲ್ಲಿರಬಹುದು. ಪಾರಮಾರ್ಥಿಕ ದೃಷ್ಟಿಕೋನದಲ್ಲಿರಬಹುದು. ನಮ್ಮ ಭಾರತೀಯ ಸಂಸ್ಕೃತಿಯ ಆಧ್ಯಾತ್ಮದ ನೆಲೆಗಟ್ಟಿನ ಮೇಲೆ ನಿಂತಿರುವಂತಹುದು. ಧರ್ಮಗ್ರಂಥಗಳು,ಪುರಾಣಗಳು, ಮಂದಿರಗಳು ಜನರನ್ನು ಸನ್ಮಾರ್ಗದಲ್ಲಿ ಕರೆದೊಯ್ಯುವಲ್ಲಿ ಮೊದಲಿನಿಂದಲೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅಂತೆಯೇ ದೇವಾಲಯಗಳು ಅತ್ಯುತ್ತಮ ಶಿಕ್ಷಣ ಕೇಂದ್ರಗಳಂತೆ ಕಾರ್ಯನಿರ್ವಹಿಸಿಕೊಂಡು ಬಂದಿರುವ ಉದಾಹರಣೆಗಳನ್ನು ನಮ್ಮ ಇತಿಹಾಸದಲ್ಲಿ ಕಾಣುತ್ತೇವೆ. ಅಂತೆಯೇ ಬದಲಾದ ಕಾಲ ಘಟ್ಟದಲ್ಲಿ ಕೂಡ ದೇವಾಲಯಗಳು ನಾಡಿನ ಬಹುತೇಕ ಸ್ಥಳಗಳಲ್ಲಿ ಇಂತಹ ಮಹತ್ತ್ವದ ಕಾರ್ಯವನ್ನು ನಿರ್ವಹಿಸುತ್ತಾ ದಿನೇ ದಿನೇ ಜನಪ್ರಿಯವಾಗುತ್ತ ಸಮಾಜದ ಸುಸ್ಥಿತಿಗೆ ತಮ್ಮ ಕೊಡುಗೆಯನ್ನು ನೀಡುತ್ತಿವೆ. ಈ ಕಾರ್ಯದಲ್ಲಿ ಎಲ್ಲ ಪಂಗಡಗಳ ಧಾರ್ಮಿಕ ಕೇಂದ್ರಗಳು ಜನರಲ್ಲಿ ಜ್ಞಾನಾರ್ಜನೆಯನ್ನು ಒದಗಿಸುವುದರೊಂದಿಗೆ ಅವರ ವ್ಯಕ್ತಿತ್ವದ ಸರ್ವತೋಮುಖವಾದ ವಿಕಾಸವನ್ನು ಬೆಳೆಸುತ್ತ ನೈತಿಕ ಮೌಲ್ಯಗಳ ಪಾಠವನ್ನು ಕಲಿಸುವ ಕಾರ್ಯದಲ್ಲಿ ತೊಡಗಿವೆಯೆನ್ನುವುದು ಮಹತ್ತ್ವದ ವಿಚಾರ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಾ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದಾಸೋಹದೊಂದಿಗೆ ಅನ್ನದಾಸೋಹವನ್ನು ನೀಡುತ್ತ ಸಾರ್ಥಕ ಜೀವನ ನಡೆಸಿದ,ನಡೆಸುತ್ತಿರುವ ಅದೆಷ್ಟೋಮಂದಿ ಮಠಾಧೀಶರ ಸಮಾಜಸೇವೆಯೂ ಕೂಡ ಈ ಅಮೂಲ್ಯ ಕೊಡುಗೆಗಳಲ್ಲಿ ಸೇರುತ್ತದೆ. ನಗರಗಳ ಈ ಸಾಂಸ್ಕೃತಿಕ ಪುನಶ್ಚೇತನವು ಯಶಸ್ವಿಯಾಗಿ ನಡೆಯುತ್ತಿರುವುದು ಸಂತಸದ ವಿಚಾರವಾಗಿದೆ.


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.


# ಗುರಿಸಾಧನೆಗೆ ಆರು ಪ್ರತಿರೋಧಗಳು

**ಡಾ|| ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ: ಡಿ.ಎಸ್. ಭೂಮಿಕ**

ಪ್ರತಿಯೊಬ್ಬರಿಗೆ,ಅದರಲ್ಲೂ ವಿದ್ಯಾರ್ಥಿಗಳಿಗೆ ಗುರಿಯೇ ಹೃದಯದ ಬಡಿತವಿದ್ದಂತೆ ಅಂದರೆ ಹೃದಯವು ಹೊಡೆದು ಕೊಳ್ಳುತ್ತಿದ್ದರೆ ಮಾತ್ರ ಜೀವನವು ಸಾಗುತ್ತದೆ ಗುರಿಯಿದ್ದರೇನೇ ಮಾನವನ ಜೀವನ ಸುಖಮಯವಾಗಿ ಸಾಗುತ್ತದೆ.'ಗುರಿ' ಎನ್ನುವುದು ಬುದ್ಧಿಗೆ ಸಂಬಂಧಿಸಿದ ವಿಷಯವು ಬಯಕೆಗಳೆಂಬವುವು ಎಲ್ಲರಲ್ಲೂ ಇರುತ್ತವೆ. ಆದರೆ ಬಯಕೆ ಎಂಬುದು ಮನಸ್ಸಿಗೆ ಸಂಬಂಧಿಸಿದ ವಿಷಯ ಬಯಕೆಗಳೆಂಬವುವು ಎಲ್ಲರಲ್ಲೂ ಇರುತ್ತವೆ. ಆದರೆ ಈ ಬಯಕೆಗಳನ್ನು ಗುರಿಗಳನ್ನಾಗಿ ಪರಿವರ್ತಿಸಿಕೊಳ್ಳುವವರು ವಿರಳವಾಗಿಯೇ ಇರುತ್ತಾರೆ. ದಿನಗಳು ಉರುಳುತ್ತಿರುತ್ತದೆ. ಕಾಲವು ಗತಿಸಿರುತ್ತದೆ.ಯಾವುದೇ ಒಬ್ಬ ಉಪಾಧ್ಯಾಯನ ಜೀವನವೂ ಒಂದೇ ಸಮನೇ ಸಾಗುತ್ತಿರುತ್ತದೆ. ಆದರೆ ಅಂತಹ ಜೀವನವನ್ನು ಯಾರೂ ಬಯಸುವುದಿಲ್ಲ.ಇನ್ನು ಗುರಿಯನ್ನಾಗಿಟ್ಟು ಕೊಳ್ಳುವುದಂತೂ ದೂರವೇ. ಒಂದು ವೇಳೆ ಗುರಿಯನ್ನು ಬಲವಂತವಾಗಿ ಇಟ್ಟುಕೊಂಡರೆ ಆ ಗುರಿಯ ಸಾಧನೆಯಲ್ಲಿ ಆರು ಪ್ರತಿರೋಧಕಗಳು ಇರುತ್ತವೆಂದು ನಾವು ತಿಳಿದುಕೊಳ್ಳಬೇಕು. ಅವಾವುವೆಂದರೆ, 1)ಅತ್ಯಾಹಾರ 2)ಅನಾವಶ್ಯಕವಾದ ಪ್ರಯತ್ನ 3)ವ್ಯರ್ಥ ಸಂಭಾಷಣೆ 4)ಕಾಟಚಾರದ ನಿಯಮಪಾಲನೆ 5)ದುಷ್ಟ ಜನ ಸಹವಾಸ 6)ಅತಿಯಾಸೆ ಈ ಆರು ಅಂಶಗಳು ಲಕ್ಷ್ಯ ಸಾಧನೆಯಲ್ಲಿ ಖಚಿತವಾಗಿ ಅಡೆತಡೆಗಳನ್ನುಂಟು ಮಾಡುವುದಲ್ಲದೆ. ದೊಡ್ಡ ಆಡಚಣೆಗಳಾಗಿ ನಿಲ್ಲುತ್ತವೆಂದು ಶಾಸ್ತ್ರಗಳು ಹೇಳುತ್ತವೆ.

ಇದರಲ್ಲಿ ಅತ್ಯಾಹಾರವೆಂಬ ಪ್ರತಿರೋಧಕವು ನಾಲಿಗೆ, ಹೊಟ್ಟೆಯಿಂದ ಉಂಟಾಗುವಂಥದ್ದು.ಇವುಗಳಲ್ಲಿ ಒಂದು ಜ್ಞಾನೇಂದ್ರಿಯ ಮತ್ತೊಂದು ಕರ್ಮೇಂದ್ರಿಯ.ಇನ್ನು ಪ್ರಯತ್ನದಲ್ಲಿ ಮನಸ್ಸು ಹಾಗೂ ಶರೀರಗಳು ಹೆಚ್ಚಾಗಿ ಕಷ್ಟವನ್ನನುಭವಿಸುತ್ತವೆ.ಈ ಎಲ್ಲಾ ಕಷ್ಟಗಳು ಯಾವುದೋ ತಾತ್ಕಾಲಿಕವಾದ ಪ್ರಖ್ಯಾತಿ-ಸಿದ್ಧಿಗಳಿಗಾಗಿಯೇ ಇರುತ್ತದೆ.ವ್ಯರ್ಥ ಸಂಭಾಷಣೆಯಲ್ಲಿ ಕಿವಿಗಳು (ಜ್ಞಾನೇಂದ್ರಿಯವು) ತೊಡಗಿಕೊಳ್ಳುತ್ತದೆ.ಇಬ್ಬರು ಮನುಷ್ಯರು ಭೇಟಿಯಾದರೆ ಒಂದು ಕ್ಷಣಕ್ಕಾದರೂ ಮೌನವಾಗಿರಲಾರರು. ಅಷ್ಟೇ ಏಕೆ ಹಾಸ್ಪಿಟಲ್‌ಗೆ ಹೋದರೂ,ಗುಡಿಗೆ ಹೋದರೂ,ಶಾಲೆಗೆ ಹೋದರೂ, ಮಾರ್ಕೆಟ್‌ಗೆ ಹೋದರೂ ಮನುಷ್ಯರು ಮಾತಿನಲ್ಲಿ ಮುಳುಗಿ ಹೋಗುತ್ತಾರೆ.ಈ ಮಾತುಗಳನ್ನು ಮಾತಾಡುವುದು ಅವಶ್ಯಕವೇ ಎನ್ನುವವರು ಆಲೋಚನೆಯನ್ನೆಂದೂ ಮಾಡುವುದಿಲ್ಲ. ಮಾತೆಂಬುದು ನಮ್ಮ ಮನೋಭಾವಗಳನ್ನು,ಆಲೋಚನೆಗಳನ್ನು ಎದುರಿನವರಿಗೆ ತಿಳಿಯಪಡಿಸಲು ಭಗವಂತನು ನಮಗೆ ಕೊಟ್ಟ ದಿಟ್ಟ ವರ. ಅದನ್ನು ಪ್ರಶ್ನೆಯ ರೂಪದಲ್ಲಿ ಬಳಸುತ್ತಾ ಜ್ಞಾನವನ್ನು ಸಂಪಾದಿಸುವುದೇ ವಿವೇಕಿಗಳ ಕೆಲಸ. ವಿದ್ಯಾರ್ಥಿಗಳು ಅನೇಕ ಬಗೆಯ ಉತ್ತಮ ಪ್ರಶ್ನೆಗಳ "ಮೂಲಕ ಪ್ರತಿದಿನ ಕನಿಷ್ಠ ಪಕ್ಷ ಐದು ಹೊಸ ವಿಷಯಗಳನ್ನು ತಿಳಿದುಕೊಳ್ಳಬೇಕು; ಕಲಿತುಕೊಳ್ಳಬೇಕು. ಇನ್ನು ಮೂಗುಹಿಡಿದು ಕೂರಿಸುವಂತಹ ನಿಯಮಗಳಲ್ಲಿ ಮನಸ್ಸು,ಇಂದ್ರಿಯಗಳನ್ನು ವಿನಿಯೋಗಿಸುವಂತೆ ಕಂಡರೂ ಅವುಗಳಲ್ಲಿ ಧ್ಯಾಸವಿರದು. ಬಲವಂತವಾಗಿ ಮಾಡುವ ಯಾವುದೇ ಕೆಲಸದಿಂದ ಲಾಭವುಂಟಾಗದು. ಮೇಲಾಗಿ ಕಾಲಹರಣವಾಗುತ್ತದೆ. ಸಾಧಾರಣವಾಗಿ ಹಿರಿಯರು, ಅನುಭವಿಗಳು ಹೇಳುವ ಮಾತುಗಳನ್ನು ವಿದ್ಯಾರ್ಥಿಗಳು ಚಾಚೂ ತಪ್ಪದೆ ಪರಿಪಾಲಿಸುತ್ತಾರಾದ್ದರಿಂದಲೇ ಉತ್ತಮ ಫಲಿಂತಾಶಗಳನ್ನು ಹೊಂದುತ್ತಾರೆ. ಇನ್ನು ಐದನೇಯದಾಗಿ ದುಷ್ಟಜನ ಸಹವಾಸ ಮನುಷ್ಯರನ್ನು ವಿಶೇಷವಾಗಿ ವಿದ್ಯಾರ್ಥಿಗಳನ್ನು ಹಾದಿಗೆಟಿಸಿ ಅವರನ್ನು ಅಧೋಗತಿಗೆಡಹುತ್ತಾರೆ. ಇಲ್ಲಿಯವರೆಗೂ ಹೇಳಿದ ಪ್ರತಿರೋಧಕಗಳಲ್ಲಿ

**ಹೆಲ್ಮೆಟ್ ತಪ್ಪದೇ ಧರಿಸಬೇಕು**



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

ಕೇವಲ ಕೆಲವೇ ಇಂದ್ರಿಯಗಳು ಪಾತ್ರವಹಿಸಿದರೂ ಈ ಐದನೇ ಪ್ರತಿರೋದಲ್ಲಿ ಮಾತ್ರ ಎಲ್ಲಾ ಇಂದ್ರಿಯಗಳ ಪಾಲೂ ಇರುತ್ತದೆ.ಬೆಂಕಿಯ ಬಳಿ ಹೋದರೆ ಶಾಖ ತಗಲುವಂತೆ ದುಷ್ಟರ ಹತ್ತಿರ ಹೋದರೆ ದುಷ್ಟಬುದ್ಧಿಯೇ ಬರುತ್ತದೆ. ಇನ್ನು ಆರನೇ ಪ್ರತಿರೋಧಕ ಅತಿಯಾಸೆ. ಇದು ಸಂಪೂರ್ಣವಾಗಿ ಮನಸ್ಸಿಗೆ ಸಂಬಂಧಿಸಿದ್ದು.ತನ್ನ ಗುರಿ ಸಾಧನೆಗೆ ಅತ್ಯಾವಶ್ಯಕವಾದ ವಿಷಯಗಳನ್ನು ಮಾತ್ರವೇ ತೆಗೆದುಕೊಳ್ಳುತ್ತಾ ನಿರೋಧಕವಾದವುಗಳನ್ನು ಬಿಟ್ಟು ಬಿಡುವುದೇ ವಿದ್ಯಾರ್ಥಿಗಳಿಗೆ ಎಷ್ಟೋ ಒಳಿತು.

ಈ ಆರು ಪ್ರತಿರೋಧಕಗಳನ್ನು ಅತಿಸರಾಗವಾಗಿ ದಾಟಬೇಕೆಂದರೆ ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ ಒಂದು ಮುಖ್ಯವಾದ ಮಾತನ್ನು ಯಾವೊತ್ತಿಗೂ ನೆನೆಪಿಸಿಕೊಳ್ಳಬೇಕು. ಅದೇ"ಪರಂ ದೃಷ್ಟ್ವಾನಿವರ್ತತೇ" ಈ ಮಾತನ್ನು ಗೀತೆಯ ಎರಡನೇ ಅಧ್ಯಾಯದ 59 ನೇ ಶ್ಲೋಕದಲ್ಲಿ ಹೇಳಲಾಗಿದೆ. ಯಾವಾಗ ಮನುಷ್ಯ ಉತ್ತಮ ವಿಷಯಗಳ ಅನುಭೂತಿಯನ್ನು ಹೊಂದುತ್ತಾನೋ ಆಗ ಅಲ್ಪೇತರ ವಿಷಯಗಳಿಂದ ಹೊರಬರುತ್ತಾನೆ.ಆದ್ದರಿಂದಲೇ ವಿದ್ಯಾರ್ಥಿಗಳು ಉನ್ನತವಾದ ಗುರಿಗಳನ್ನಿಟ್ಟುಕೊಂಡು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸ್ವಲ್ಪ ಸ್ವಲ್ಪವೇ ಜಯ ಸಾಧಿಸಲು ಮೊದಲುಗೊಂಡಾಗ ಅತಿ ಸುಲಭವಾಗಿ ಈ ಪ್ರತಿರೋಧಕಗಳಿಂದ ವಿಮುಕ್ತನಾಗುತ್ತಾನೆ.ಕತ್ತಿಯನ್ನು ಹಿಡಿದು ಆಟವಾಡುವ ಮಗುವಿನ ಕೈಯಿಂದ ಕತ್ತಿಯನ್ನು ಬಿಡಿಸಬೇಕೆಂದರೆ ಅದರ ಕೈಗೆ ಮುತ್ತ್ಯಾವುದೋ ವಸ್ತುವನ್ನು ಕೊಡಬೇಕು.ಆ ವಸ್ತು ಆ ಮಗುವಿಗೆ ಕತ್ತಿಗಿಂತಲೂ ಹೆಚ್ಚು ಪ್ರೀತಿಯುಳ್ಳದ್ದಾಗಿರಬೇಕು. ಹಾಗೆಯೇ ಒಣಗಿದ ಬ್ರೆಡ್ ತುಂಡೊಂದನ್ನು ತಿಂದು ಆನಂದಿಸುತ್ತಿರುವ ಮಗುವಿಗೆ ಎಷ್ಟೋ ರುಚಿಕರವಾದ ಗುಲಾಬ್ ಜಾಮೂನನ್ನು ಕೊಟ್ಟರೆ ಅಪ್ರಯತ್ನವಾಗಿ ಆ ಮಗು ಆ ಬ್ರೆಡ್ ತುಂಡನ್ನು ಬದಿಗಿರಿಸುತ್ತದೆ ಇದೇ "ಪರಂ ದೃಷ್ಟ್ವಾ ನಿವರ್ತತೇ" ಆದ್ದರಿಂದಲೇ ಈ ಮಾತನ್ನು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪದೇ ಪದೇ ಉಚ್ಚರಿಸುತ್ತಿರಬೇಕು. ಹಾಗೆಯೇ ಒಂದು ಕಾಗದದ ತುಂಡಿನಲ್ಲಿ ಅದನ್ನು ಬರೆದಿಟ್ಟುಕೊಂಡು ತಾನು ಓದುವ ಪ್ರದೇಶದಲ್ಲಿ ಗೋಡೆ ಮೇಲೆ ಅಂಟಿಸಿಕೊಳ್ಳಬೇಕು. ಎವರೆಸ್ಟನ್ನು ಪ್ರಪ್ರಥಮ ಬಾರಿಗೆ ಏರಿದ ಎಡ್ಮಂಡ್ ಹಿಲ್ಲೇರಿ ತನ್ನ ಮನೆಯ ಪ್ರತಿಕೋಣೆಯಲ್ಲೂ ಎವರೆಸ್ಟ್ ಪರ್ವತದ ಚಿತ್ರಗಳನ್ನು ಅಂಟಿಸಿಕೊಂಡಿದ್ದ ಎನ್ನುತ್ತಾರೆ.ಕಲೆಕ್ಟರ್, ಸೈಂಟಿಸ್ಟ್, ನೋಬಲ್ ಪುರಸ್ಕಾರ ಗ್ರಹಿತ,ಒಲಂಪಿಕ್ಸ್‌ನಲ್ಲಿ ಬಂಗಾರ ಪದಕ ಬಯಸುವವ ವಿದ್ಯಾರ್ಥಿ ಸಣ್ಣ ಪುಟ್ಟ ಬಯಕೆಗಳ ಬಲೆಗೆ ಬೀಳದಂತೆ ತನ್ನ ಗುರಿಯ ಮೇಲೆಯೇ ಮನಸ್ಸಿಟ್ಟು ಪ್ರಯತ್ನಿಸಿದ್ದಲ್ಲಿ ವಿಜಯವನ್ನು ಸಾಧಿಸಿಯೇ ತೀರುತ್ತಾನೆ. ಆತನು "ಪರಂ ದೃಷ್ಟ್ವಾನಿವರ್ತತೇ" ಎಂಬ ಮಾತನ್ನು ಚಾಚೂ ತಪ್ಪದೇ ಪಾಲಿಸುವುದೇ ಆತನ ವಿಜಯಕ್ಕೆ ಮುಖ್ಯ ಕಾರಣ.



## ಶ್ರೀನಿವಾಸ

ಶ್ರೀನಿವಾಸ, ಶ್ರೀನಿವಾಸ, ಶ್ರೀನಿವಾಸ
ಎಲ್ಲರ ಮನೆಯಲ್ಲಿರಲಿ ನಿನ್ನಯ ವಾಸ

ನಿನ್ನ ಭಕ್ತರ ನಿವಾಸ
ಮೊಳಗಲಿ ನಿನ್ನ ನಾಮ ಶ್ರೀನಿವಾಸ

ಶ್ರೀನಿವಾಸ, ಶ್ರೀನಿವಾಸ,
ಸದಾ ಎನಗಿರಲಿ ನಿನ್ನ ಸಹವಾಸ
ನಾ ತೋರುವೆ ನಿನಗೆ ಭಕ್ತಿ
ನಿನ್ನ ಸನ್ನಿಧಿಗೆ ಬರಲುಕೊಡು ಎನಗೆ ನೀ ಶಕ್ತಿ

ನಾ ಎಂದೂ ಬಡವನಲ್ಲ
ಏಕೆಂದರೆ ನೀನೇ ನನ್ನ ಬಳಿ ಇರುವೆಯಲ್ಲ

ಸಂಗೀತದಲಿ ಇರುವುದು ಸರಿಗಮಪದನಿಸ
ಭೂಲೋಕದಲಿ ಇರುವನೊಬ್ಬನೇ ಶ್ರೀನಿವಾಸ

ಬೇಗ ಕೊಡು ಎನಗೆ ಸುಮತಿ
ನೀನೇ ಅಲ್ಲವೇ ಲಕ್ಷ್ಮೀಪತಿ?

ತುಲಸಿದಾಸ, ರಾಮದಾಸ
ನಿನ್ನ ಶಿಷ್ಯರಲ್ಲವೇ ಶ್ರೀನಿವಾಸ?


ಅವರಿಗೆಲ್ಲ ನೀಡಿದೆ ಮುಕುತಿ
ನಾನೂ ತೋರುವೆನು ನಿನಗೆ ಭಕುತಿ

ಶ್ರೀನಿವಾಸ, ಶ್ರೀನಿವಾಸ
ನಾ ಎಂದೆಂದೂ ನಿನ್ನ ದಾಸ.

- ಕೆ.ವಿ. ಲಕ್ಷ್ಮಣಮೂರ್ತಿ



# ಬೇವಿನ ಶಕ್ತಿಯಿಂದ ರೋಗಗಳಿಗೆ ಮುಕ್ತಿ




ಮೂಲ. ಡಾ॥ ಸಿ. ಮಧುಸೂದನ ಶರ್ಮ

- ಅನುವಾದ : ಶ್ರೀಮತಿ.


ಬೇವಿನ ಮರ ಎಲ್ಲರಿಗೂ ಚಿರಪರಿಚಿತವಾದ ಮಹಾವೃಕ್ಷ.ದೇಶದುದ್ದಕ್ಕೂ ವರ್ಷಪೂರ್ತಿ ದರ್ಶನ ನೀಡುತ್ತದೆ.

ದೇವಾಲಯಗಳಲ್ಲಿ ಬೇವಿನ ಮರಗಳಿರುವುದು ಸರ್ವೇಸಾಮಾನ್ಯ.

ಶ್ರೀ ಶಿರಡಿ ಸಾಯಿಬಾಬಾ ತಮ್ಮ ಹದಿನಾರನೇ ವಯಸ್ಸಿನಲ್ಲಿ ಬೇವಿನ ಮರದ ಕೆಳಗೆ ಕುಳಿತು ಧ್ಯಾನ ಮಾಡುತ್ತಾ ಕುಳಿತು ಶಿರಿಡಿ ಪ್ರಜೆಗಳಿಗೆ ದರ್ಶನವಿತ್ತಿದ್ದು ಇಲ್ಲಿ ಗಮನಿಸಬೇಕಾದ ವಿಷಯ. ಇದರ ಮೂಲಕವೇ ಬೇವಿನ ಮರದ ಮಹತ್ವ ಕಂಡು ಬರುತ್ತದೆ.

ಯುಗಾದಿ ಹಬ್ಬದ ಸಂದರ್ಭದಲ್ಲಿ ಬೇವಿನ ಹೂಗಳ ಪಚ್ಚಡಿಯನ್ನು ಮಾಡಿ ಸೇವಿಸುವುದು ನಮ್ಮೆಲ್ಲರಿಗೂ ತಿಳಿದ ವಿಷಯವೇ.

ಸಂಸ್ಕೃತದಲ್ಲಿ ಇದನ್ನು " ನಿಂಬ ವೃಕ್ಷ" ಎನ್ನುತ್ತಾರೆ.'ನಿಂಬತಿ ಸ್ವಾಸ್ಥ್ಯಂದಧಾತಿ ನಿಂಬಃ' ಎಂಬ ಉಕ್ತಿಯ ಪ್ರಕಾರ ಸ್ವಾಸ್ಥ್ಯ ಅಥವಾ ಆರೋಗ್ಯವನ್ನು ಕೈಗೂಡಿಸುವುದರಿಂದ 'ನಿಂಬ' ಎಂದೂ ಸರ್ವ ವಿಧದಲ್ಲಿಯೂ ಶುಭಪ್ರದವಾಗಿಯೂ,ಮಂಗಳಪ್ರದವಾಗಿಯೂ ಇರುವುದರಿಂದ ಸರ್ವತೋಭದ್ರವೆಂದೂ,ವೃಕ್ಷದ ಸುತ್ತಮುತ್ತಲಿನ ಪರಿಸರವೆಲ್ಲಾ ಮಂಗಳಪ್ರದವಾಗುವುದರಿಂದ ಹರಿಭದ್ರಕ ಎಂದೂ ಕುಷ್ಠರೋಗವನ್ನು ನಿರ್ಮೂಲನೆ ಮಾಡುವುದರಿಂದ,ಉಪಶಮನಗೊಳಿಸುವುದರಿಂದ 'ಪಿಚುಮಂದೆ' ಅಥವಾ 'ಪಿಚುಮರ್ಧನ' (ಪಿಚು ಅಂದರೆ ಕುಷ್ಠ ಅಥವಾ ಚರ್ಮವ್ಯಾಧಿ) ವೆಂದೂ ಇದಕ್ಕೆ ಹೆಸರು.

ಆಂಗ್ಲದಲ್ಲಿ 'ನೀಮ್' 'ಮಾರ್ಗೋಸಾ' 'ಅಜಾಡಿರಕ್ಟ್' 'ಬೆಡ್‌ಟ್ರೀ' ಎಂಬ ಹಲವು ವಿಧವಾದ ಹೆಸರುಗಳಿಂದ ಕರೆಯಲ್ಪಡುವ ಈ ಬೇವಿನ ಶಾಸ್ತ್ರೀಯ ನಾಮಧೇಯ 'ಅಜಾಡಿರಕ್ಟಾ ಇಂಡಿಕಾ' ಪರ್ಷಿಯನ್ ಭಾಷೆಯಲ್ಲಿ ಅಜಾಡಿರಕ್ ಎಂದರೆ ಶ್ರೇಷ್ಠವಾದ, ಯೋಗ್ಯವಾದ, ವಿಶಾಲ ವಾದ ಎಂಬರ್ಥದಲ್ಲಿ ಇದರ ಹೆಸರು ಸ್ಥಿರವಾಗಿದೆ. ಈ ವೃಕ್ಷ 'ಮಿಲಿಯೇಸಿ ' ಎಂಬ ವೃಕ್ಷ ಕುಟುಂಬಕ್ಕೆ ಸೇರಿದುದು.

ದವಸ-ಧಾನ್ಯಗಳಲ್ಲಿ ಹುಳಗಳು ಬೀಳದಂತೆ ಮಾಡಲು ಧಾನ್ಯಗಳ ಮಧ್ಯದಲ್ಲಿ ಬೇವಿನೆಲೆಗಳನ್ನು ಇಡುತ್ತಾರೆ.

ಸಾಧಾರಣವಾಗಿ ಯಾರಿಗಾದರೂ ದಡಾರ, (ಮೀಸಲ್ಸ್) ಸೀತಾ ಸಿಡುಬು (ಚಿಕನ್‌ಪಾಕ್ಸ್) ನಂತಹ ಅನಾರೋಗ್ಯಗಳು ಉಂಟಾದಾಗ ಮನೆಯ ಮುಂಬಾಗಿಲಿಗೆ, ರೋಗಿಯ ಕೋಣೆಯ ಸುತ್ತಲೂ ಬೇವಿನೆಲೆಗಳನ್ನು ಹಾಕುವುದು ನಮ್ಮೆಲ್ಲರಿಗೂ ತಿಳಿದ ವಿಷಯವೇ.

ಶರೀರದ ಮೇಲೆಲ್ಲಾದರೂ ಗುಳ್ಳೆಗಳು ಕಂಡು ಬಂದರೆ ಬೇವಿನೆಲೆಗಳನ್ನು ಹಾಕಿ ಕಾಯಿಸಿದ ನೀರಿನಿಂದ ಸ್ನಾನವನ್ನು ಮಾಡಿಸುತ್ತಾರೆ.

ಹಲವು ಶತಕಗಳ ಹಿಂದೆ ಬೇವಿನ ಕಡ್ಡಿಯಿಂದ ದಂತಧಾವನ ಮಾಡುವುದು ಭಾರತೀಯರ ಜೀವನ ವಿಧಾನದ ಒಂದು ಭಾಗವೇ ಆಗಿ ಹೋಗಿದೆ. ಆದ್ದರಿಂದಲೇ ನಮ್ಮ ಭಾರತೀಯರಲ್ಲಿ ಮಧುಮೇಹದ ತೀವ್ರತೆ ಪ್ರಸ್ತುತ ವಿರುವಷ್ಟು ಹಿಂದೆ ಹೆಚ್ಚಾಗಿ ಕಂಡು ಬರುವುದಿಲ್ಲ.

ಬೇವಿನಿಂದ ದಂತಧಾವನ ಮಾಡುವುದರಿಂದ ಕಹಿ ರುಚಿಯ ಪ್ರಭಾವದಿಂದಾಗಿ ಬಾಯಲ್ಲಿ ಕಫ ದೋಷ ತೊಲಗಿ ನಾಲಿಗೆಗೆ ರುಚಿ ಬರುತ್ತದೆ ಶರೀರದಲ್ಲಿ ಪ್ರವೇಶಿಸಿದರೆ ವ್ಯಾಧಿಕಾರಕ ಕ್ರಿಮಿಗಳು ಇದರಿಂದ ನಶಿಸುತ್ತದೆ.

ಬೇವಿನೆಲೆಗಳು, ಚಿಗುರು, ಹೂವು, ಕಾಯಿಗಳು, ಹಣ್ಣು, ಬೀಜಗಳು, ಬೇರು, ಕಾಂಡ ಮೊದಲಾದವುಗಳೆಲ್ಲಾ ಔಷಧೀಯ ಗುಣಗಳನ್ನು ಹೊಂದಿವೆ.

**ದೀರ್ಘಕಾಲಿಕ ಹುಣ್ಣುಗಳಿಗೆ**

ಒಂದು ಪಾತ್ರೆಯಲ್ಲಿ 50 ಗ್ರಾಂ ಬೇವಿನೆಲೆಗಳು, 50 ಗ್ರಾಂ ತುಪ್ಪವನ್ನು ತೆಗೆದುಕೊಂಡು ಒಲೆಯ ಮೇಲಿಟ್ಟು ಬೇವಿನೆಲೆಗಳು ಕಪ್ಪಾಗುವವರೆಗೂ ಹುರಿದು, ಇಳಿಸಿ, ಬಿಸಿಯಾರಿದ ನಂತರ ಪುಡಿ ಮಾಡಿ ಸಂಗ್ರಹಿಸಿಟ್ಟುಕೊಂಡು ದಿನಂ ಪ್ರತಿ ಎರಡು ಬಾರಿ ಮೈಮೇಲೆ ಲೇಪನ ಮಾಡಿ ಕೊಳ್ಳತ್ತಿದ್ದರೆ ದೀರ್ಘಕಾಲಿಕ ಹುಣ್ಣುಗಳು, ಕಲೆಗಳು ನಶಿಸಿ ಹೋಗುತ್ತದೆ.

**ಡೆಂಗ್ಯೂ, ಚಿಕನ್‌ಗುನ್ಯಾ, ಸ್ವೈನ್‌ಫ್ಲೂ ನಂತಹ ವೈರಲ್ ವ್ಯಾಧಿಗಳು ಬಾರದಂತೆ**

ಒಂದು ವಾರದವರೆಗೆ ದಿನವೂ ಬೆಳಗ್ಗೆ ಖಾಲಿಹೊಟ್ಟೆಯಲ್ಲಿ ಐದಾರು ಬೇವಿನೆಲೆಗಳು, 5 ಕರಿಮೆಣಸಿನ ಕಾಳು, ಕಲಿಸಿ ನುಂಗಬೇಕು. ಇಲ್ಲವೇ ಉಂಡೆಯಾಕಾರವಾಗಿ ಮಾಡಿಕೊಂಡು ನುಂಗಬಹುದು. ಹೀಗೆ ಬಳಸುವುದರಿಂದ ಸಂವತ್ಸರದಾದ್ಯಂತ ಇಂತಹ ವ್ಯಾಧಿಗಳಿಂದ ರಕ್ಷಣೆಯನ್ನು ಪಡೆಯಬಹುದು.

**ತಲೆಹೊಟ್ಟುಗೆ**

ವಾರಕ್ಕೆರಡು ಬಾರಿ 250 ಮಿ.ಲೀ. ನೀರಿನಲ್ಲಿ 20-25 ಬೇವಿನ ಎಲೆಗಳನ್ನು ಒಂದು ಟೀ ಚಮಚ ಅರಿಶಿನನೊಂದಿಗೆ ಕಲಿಸಿ 50 ಮಿ.ಲಿ. ನೀರು ಉಳಿಯುವಂತೆ ನೀರಿನಲ್ಲಿ ಕುದಿಸಿ. ಕೆಳಗಿಳಿಸಿ ಬಿಸಿಯಾರಿದ ನಂತರ ಸೋಸಿ ತಲೆಕೂದಲಿನ ಬುಡಕ್ಕೆ ಹಚ್ಚಿ ತಾಸು ಎರಡು ತಾಸು ಬಿಟ್ಟು ತಲೆಸ್ನಾನ ಮಾಡುತ್ತಿರಬೇಕು.

**ನೆಗಡಿಗೆ**

30 ಗ್ರಾಂ ಬೇವಿನೆಲೆ, 15 ಗ್ರಾಂ ಕರಿಮೆಣಸಿನ ಕಾಳಿನ ಪುಡಿ, ಕಲಿಸಿ ತಕ್ಕಷ್ಟು ಶುದ್ಧವಾದ ನೀರಿನೊಂದಿಗೆ ಕಲಿಸಿ. ನಾದಿ ಚಿಟಿಕೆಗಳಷ್ಟು ಮಾತ್ರೆಗಳನ್ನು ಮಾಡಿ ಒಣಗಿಸಿ ಶೇಖರಿಸಿಟ್ಟುಕೊಂಡು ಬಾರಿಯೊಂದಕ್ಕೆ 1-2 ಮಾತ್ರೆಗಳನ್ನು 2 ಅಥವಾ 3 ಬಾರಿ ಉಗುರು ಬೆಚ್ಚಗಿನ ನೀರಿನೊಂದಿಗೆ ಸೇವಿಸುತ್ತಿರಬೇಕು.

**ಕಿವಿಬಾಧೆಗಳಿಗೆ**

50 ಗ್ರಾಂ ಬೇವಿನೆಲೆಗಳನ್ನು 100 ಮಿ.ಲಿ. ಒಳ್ಳೆಣ್ಣೆಯಲ್ಲಿ ಹಾಕಿ ಕಲಿಸಿ ಸಣ್ಣನುರಿಯಲ್ಲಿ ಎಲೆಗಳು ಕಪ್ಪಾಗುವವರೆಗೆ ಮರಳಿಸಿ 10 ಗ್ರಾಂ ಅರಶಿನ ಪುಡಿ ಹಾಕಿ ಕೆಳಗಿಳಿಸಿ 10 ಗ್ರಾಂ ಮಿ.ಲಿ. ಜೇನನ್ನು ಕಲಿಸಿಟ್ಟುಕೊಂಡು ದಿನವೂ ಎರಡು ಮೂರು ಬಾರಿ 2-3 ಹನಿಗಳು ಕಿವಿಯಲ್ಲಿ ಹಾಕುತ್ತಿದ್ದರೆ. ಕಿವಿನೋವು, ಪೋಟು,ಬಾಧೆ, ಕಿವಿಯಿಂದ ಕೀವು ಕಾರುವುದು, ಮೊದಲಾದ ಕಿವಿಗೆ ಸಂಬಂಧಿಸಿದ ತೊಂದರೆಗಳು ಶಮನಗೊಳ್ಳುತ್ತದೆ.

**ರಕ್ತ ಶುದ್ಧಿಗೆ**

ಬೇವಿನ ಚೆಕ್ಕೆಯ ಪುಡಿ ಲಾವಂಚದ ಪುಡಿ ಒಂದೊಂದನ್ನು 25 ಗ್ರಾಂ ನಂತೆ ಕಲಿಸಿಟ್ಟುಕೊಂಡು 2 ಗ್ರಾಂ ಪುಡಿಯನ್ನು ಒಂದು ಟೀ ಸ್ಪೂನ್ ಜೇನು ಅಥವಾ 50 ಮಿ.ಲಿ. ನೀರಿನಲ್ಲಿ ಕಲಿಸಿ ಸೇವಿಸುವುದರಿಂದ ರಕ್ತ ಶುದ್ಧಿಯಾಗಿ ವಿವಿಧ ಚರ್ಮರೋಗಗಳನ್ನು ತಡೆಗಟ್ಟುತ್ತದೆ.

**ಅತಿ ಮೂತ್ರ ವ್ಯಾಧಿಗೆ**

50 ಗ್ರಾಂ ಬೇವಿನ ಚಕ್ಕೆ ಚೂರ್ಣದಲ್ಲಿ 25 ಗ್ರಾಂ ಕಲ್ಲುಸಕ್ಕರೆ ಕಲಿಸಿಟ್ಟುಕೊಂಡು ದಿನವೂ ಮುಂಜಾನೆ ಸಂಜೆ ಬಾರಿಗೆ ಒಂದು ಗ್ರಾಂ ಔಷಧಿಯನ್ನು 50 ಮಿ.ಲೀ ನೀರಿನಲ್ಲಿ ಕಲಿಸಿ ಕುಡಿಯಬೇಕು.

ಇದರಿಂದ ಹೆಚ್ಚುಬಾರಿ ಮೂತ್ರ ಬರುವುದು, ಹೆಚ್ಚು ಪ್ರಮಾಣದಲ್ಲಿ ಮೂತ್ರ ಬರುವುದು. ಮೂತ್ರನಾಳದಲ್ಲಿ ನಂಜುಂಟಾಗುವುದು. ಮೂತ್ರದೊಂದಿಗೆ ಕೀವು ಮೊದಲಾದವು ಬರುವುದು ಸಹ ತಗ್ಗಿ ಹೋಗುತ್ತದೆ.

**ಸುದೀರ್ಘ ಜ್ವರಕ್ಕೆ**

ಪ್ರತಿದಿನ ಮುಂಜಾನೆ 1/2 ಲೀ ನೀರಿನಲ್ಲಿ 10 ಗ್ರಾಂ ಬೇವಿನ ಬೇರನ್ನು ತುಂಡುಗಳನ್ನಾಗಿ ಕತ್ತರಿಸಿ ಸ್ವಲ್ಪ ಹೊತ್ತು ನೆನೆಸಿ 50.ಮಿ.ಲಿ. ಕಷಾಯ ಮಿಗಿಲುವಂತೆ ಸಣ್ಣನುರಿಯಲ್ಲಿ ಮರಳಿಸಿ, ಕೆಳಗಿಳಿಸಿ, ಬಿಸಿಯಾರಿದ ನಂತರ ಸೋಸಿ ಒಂದು ಟೀ ಚಮಚ ಜೇನಿನೊಂದಿಗೆ ತೆಗೆದುಕೊಳ್ಳಬೇಕು.

**ಸೋರಿಯಾಸಿಸ್‌ಗೆ**

ಒಣಗಿದ ಬೇವಿನ ಎಲೆಗಳನ್ನು ಸುಟ್ಟು ಬೂದಿ ಮಾಡಿ ಬಿಸಿಯಾರಿದ ನಂತರ ಶೇಖರಿಸಿಟ್ಟುಕೊಂಡು ದಿನಕ್ಕೊಮ್ಮೆ ತಕ್ಕಷ್ಟು ಬೂದಿಯೊಂದಿಗೆ ತುಪ್ಪ ಕಲಿಸಿಟ್ಟುಕೊಂಡು ಹಚ್ಚಿ

ಕೊಳ್ಳಬೇಕು.ಇದನ್ನು ರಸಿಕೆಯಾರುವ ಗಾಯಗಳಿಗೂ ಹಚ್ಚಬಹುದು.

**ಕಾಮಾಲೆರೋಗ**

ವಾರಕ್ಕೊಂದೆರಡು ಬಾರಿ 2 ಗ್ರಾಂ ಬೇವಿನ ಚಿಗುರು, ನಾಲ್ಕು ಗ್ರಾಂ ಹುಣಸೇ ಚಿಗುರು ಕಲಿಸಿ ಮೆತ್ತಗೆ ನಾದಿ ಸೇವಿಸಿ ಒಂದು ಕಪ್ ಹಾಲಿನೊಂದಿಗೆ ಕುಡಿಯ ಬೇಕು.ಈ ಔಷಧಿಯನ್ನು ಸೇವಿಸುತ್ತಾ ಕೆಲದಿನ ಸಪ್ಪನೆಯ ಆಹಾರವನ್ನು ಸೇವಿಸುತ್ತಿದ್ದರೆ ಕಠಿಣವಾದ ಮೊಂಡುತನದ ಕಾಮಾಲೆ ವ್ಯಾಧಿಯನ್ನು ಶೀಘ್ರವಾಗಿ ಉಪ ಶಮನಗೊಳಿಸಬೇಕು.

**ದಂತಧಾವನ ಚೂರ್ಣ**

ಒಣಗಿಸಿದ ಬೇವಿನ ಹಣ್ಣಿನ ಚೂರ್ಣ ಉಕ್ಕಿಸಿದ ಸ್ಪಟಿಕ ಚೂರ್ಣ, ಉಪ್ಪು ಒಂದೊಂದು 25 ಗ್ರಾಂ ನಂತೆ ಕಲಿಸಿಟ್ಟು ಕೊಂಡು ದಿನವೂ ಒಂದು ಬಾರಿ ದಂತಧಾವನ ಚೂರ್ಣವನ್ನಾಗಿ ಬಳಸಿದಲ್ಲಿ ಹಲ್ಲು - ವಸಡಿನ ಬಾಧೆಗಳು ತೊಲಗುತ್ತವೆ. ಬೇವಿನ ಕಡ್ಡಿಯ ಒದಲು ಇದನ್ನು ಉಪ ಯೋಗಿಸಬಹುದು.

**ಮೂಲವ್ಯಾಧಿಗೆ**

ಬೇವಿನ ಬೀಜದೊಳಗಿನ ಪಪ್ಪನ್ನು 50 ಗ್ರಾಂ, ಹಳೆಯ ಬೆಲ್ಲ 20 ಗ್ರಾಂ ಕಲಿಸಿ ಮೆತ್ತಗೆ ಕುಟ್ಟಿಟ್ಟುಕೊಂಡು ನಿತ್ಯ ಎರಡು ಬಾರಿ, ಬಾರಿಯೊಂದಕ್ಕೆ ಒಂದು ಗ್ರಾಂ ಇಲ್ಲವೇ ಆಂಟೋಳ ಕಾಯಿ ಗಾತ್ರದಷ್ಟು ಔಷಧಿಯನ್ನು ಸೇವಿಸುತ್ತಿರ ಬೇಕು. ಅಥವಾ ದಿನವೂ ಮುಂಜಾನೆ 2-3 ಗ್ರಾಂ ಬೇವಿನ ಬೇರಿನ ಚೂರ್ಣವನ್ನು 5-6 ಗ್ರಾಂ ಬೆಲ್ಲದೊಂದಿಗೆ ಕಲಿಸಿ ತೆಗೆದುಕೊಳ್ಳುತ್ತಿದ್ದರೆ ಉತ್ತಮ ಫಲಿತಾಂಶವಿರುತ್ತದೆ.

**ಚರ್ಮವ್ಯಾಧಿಗಳ ಲೇಪನಕ್ಕೆ**

100 ಮಿ.ಲೀ. ಬೇವಿನ ಎಣ್ಣೆ, 100 ಮಿ.ಲೀ. ಚಾಲ್ ಮುಗರ ಎಣ್ಣೆ ಕಲಿಸಿ ಚೆನ್ನಾಗಿ ಕಾಯಿಸಿ ಕೆಳಗಿಳಿಸಿ 25 ಗ್ರಾಂ ನಷ್ಟು ಕರ್ಪೂರ ಪುಡಿ ಹಾಕಿ ಬಿಸಿಯಾರಿದ ಬಳಿಕ ಶೇಖರಿಸಿಟ್ಟುಕೊಂಡು ದಿನವೂ ಒಂದೆರಡು ಬಾರಿ ಮೈಯೆಲ್ಲಾ ಹೆಚ್ಚುತ್ತಿದ್ದರೆ ಕಜ್ಜಿ, ನವೆ, ತುರಿಕೆ, ಸೋರಿ ಯಾಸಿಸ್‌ನಂತಹ ವ್ಯಾಧಿಗಳಿಗೆ ಉತ್ತಮವಾದ ಪ್ರಯೋ ಜನವುಂಟಾಗುತ್ತದೆ.


ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು

ಟೋಲ್ ಫ್ರಿ ನಂಬರ್

18004254141

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!

ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.



# ಲೋಕಹಿತ ಮತ್ಸ್ಯಾವತಾರ

- ಶ್ರೀಮತಿ. ಸುಮಚಂದ್ರಶೇಖರ್

ಭಗವಂತನ ಶ್ರೀಮನ್ನಾರಾಯಣನ ಪ್ರಸಿದ್ಧವಾದ ದಶಾವತಾರಗಳಲ್ಲಿ ಮತ್ಸ್ಯಾವತಾರ ಮೊದಲನೆಯದು. ಶತಪಥ ಬ್ರಾಹ್ಮಣದಲ್ಲಿ ಮತ್ಸ್ಯಪುರಾಣದಲ್ಲಿ ಮತ್ಸ್ಯಾವತಾರದ ವಿವರಗಳು ಬರುತ್ತದೆ. ಸೃಷ್ಠಿಯನ್ನು ಮುಗಿಸಿದ್ದ ಬ್ರಹ್ಮ ದೇವರು ವಿಶ್ರಾಂತಿಯಲ್ಲಿದ್ದಾಗ ಅವರ ಮೂಗಿನ ಹೊಳ್ಳೆಯಿಂದ ಅಸುರನೊಬ್ಬ ಹೊರಗೆ ಬಂದು ವೇದಗಳನ್ನು ಅಪಹರಿಸುತ್ತಾನೆ. ಸಾಗರದ ತಳದಲ್ಲಿ ಅಡಗುತ್ತಾನೆ. ಇದನ್ನು ಅರಿತ ಸ್ಥಿತಿ ಕಾರಕ ವಿಷ್ಣು ಅಸುರನನ್ನು ಸಂಹರಿಸಿ ವೇದಗಳನ್ನು ಪುನರುತ್ಥಾನಗೊಳಿಸಲು ಸಂಕಲ್ಪಿಸುತ್ತಾನೆ.

ಶ್ರೀಮನ್ನಾರಾಯಣನ ಸೃಷ್ಟಿಯಲ್ಲಿ ಏರುಪೇರಾದಾಗ ಧರ್ಮಗ್ಲಾನಿಯುಂಟಾದಾಗ 'ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ. ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್', 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ (ಭಗವದ್ಗೀತೆ ಅ4 ಶ್ಲೋ 7-8) ಅಂತ ಯುಗ ಯುಗಗಳಲ್ಲಿ ಅವತಾರ ಎತ್ತಿ ಜೀವಿಗಳನ್ನು,ವಿಶೇಷವಾಗಿ ಸಾಧು ಸಜ್ಜನರನ್ನು ರಕ್ಷಿಸುವುದಾಗಿ ವಾಗ್ದಾನ ಮಾಡಿದ್ದಾನೆ. ಹಾಗೆ ನೋಡಿದರೆ ಭಗವಂತನ ಅವತಾರಗಳು ಅಸಂಖ್ಯ. ಅವುಗಳು ಎರಡು ವಿಧ. ಜ್ಞಾನಾವತಾರಗಳು; ಉದಾ; ಕಪಿಲ,ವ್ಯಾಸ, ದತ್ತಾತ್ರೇಯ ಮುಂತಾದವುಗಳು. ಬಲಾವತಾರಗಳು; ಉದಾ; ನರಸಿಂಹ, ವರಾಹ, ಪರುಶುರಾಮ ಮುಂತಾದವುಗಳು. ಕೃಷ್ಣಾವತಾರವು ಎರಡೂ ಉದ್ದೇಶಗಳನ್ನು ಈಡೇರಿಸಿದೆ. ಭೂಮಂಡಲಕ್ಕೆ ಅಪಾಯ ಉಂಟಾದಾಗ ಅದರ ರಕ್ಷಣೆಗಾಗಿ ಮತ್ಸ್ಯ, ಕೂರ್ಮ ಅವತಾರಗಳನ್ನು ಎತ್ತುತ್ತಾನೆ.

### ಶ್ರೀ ಹರಿಯ ಮೊದಲ ಅವತಾರ

ಹಿಂದಿನ ಚಾಕ್ಷುಷ ಮನ್ವಂತರದ ಕೊನೆಯಲ್ಲಿ ವೈವಸ್ವತಮನು ನದಿ ತೀರದಲ್ಲಿ ಅರ್ಘ್ಯವನ್ನು ನೀಡುತ್ತಿದ್ದನು. ತನ್ನನ್ನು ತನ್ನ ರಾಜ್ಯವನ್ನು ಪ್ರಜೆ ಪಶುಪಕ್ಷಿಗಳನ್ನು ರಕ್ಷಿಸುವಂತೆ ಅವನು ಮೌನ ಪ್ರಾರ್ಥನೆ ಸಲ್ಲಿಸುತ್ತಿದ್ದ. ತಾನು ನಂಬಿದ ದೈವ ತನ್ನನ್ನು ಖಂಡಿತವಾಗಿಯೂ ಕಾಪಾಡುತ್ತದೆಂಬ ಅಚಲ ವಿಶ್ವಾಸ ಅವನದ್ದು. ಅವನು ಒಮ್ಮೆ ಸ್ನಾನ ಮಾಡಲು ನದಿಗೆ ಹೋದಾಗ ಬೊಗಸೆಯಲ್ಲಿ ಚಿಕ್ಕ ಮೀನೊಂದು ಕಾಣುತ್ತದೆ. ಅದನ್ನು ಮತ್ತೆ ನದಿಗೆ ಚೆಲ್ಲಲು ಹೋದಾಗ ಭಯಭೀತವಾದ ಧ್ವನಿಯಲ್ಲಿ ಅದು ತನ್ನನ್ನು ನದಿಯಲ್ಲಿ ಕ್ರೂರ ಮೀನು ಮೊಸಳೆಗಳಿಂದ ರಕ್ಷಿಸುವಂಥೆ ಮಾತನಾಡುತ್ತದೆ. ಅದು ಮಾತನಾಡಿದ್ದು ಕಂಡು ಚಕಿತನಾದ ರಾಜ ಅದನ್ನು ತನ್ನ ಕಮಂಡಲುವಿನಲ್ಲಿ ಹಾಕಿ ಮನೆಗೆ ತಂದ. ಅಷ್ಟರಲ್ಲಾಗಲೀ ಅದು ಕಮಂಡಲುವಿನಷ್ಟಾಗಿತ್ತು. ಆಶ್ಚರ್ಯಗೊಂಡ ರಾಜ ಅದನ್ನು ಹರಿವಾಣಕ್ಕೆ ಹಾಕಿದ ಅದೂ ತುಂಬಿತು.

ಹೀಗೆ ಕೆರೆ ಸರೋವರ ಕೊನೆಗೆ ಸಾಗರಕ್ಕೆ ಹಾಕಿದ. ಸಾಗರದಲ್ಲಿ ಬಿದ್ದ ಹದ್ಮೀನನ್ನು ಕಂಡು ರಾಜ ದಿಗ್ಭ್ರಾಂತನಾಗಿ

ನಿಂತ. ಅವನಿಗೇನೂ ಸಂಶಯ ಉಳಿಯಲಿಲ್ಲ. ಈ ಮೀನು ನಿಜಕ್ಕೂ ಶ್ರೀಹರಿಯ ಅವತಾರವೇ ಆಗಿದೆ ಅಂತ ಅವನ ಅಚಲ ನಂಬಿಕೆ, ಅವನ ನಂಬಿಕೆಗೆ ಪುಷ್ಟಿಯಾಗಿ ರಾಜನೆದುರು ಬಂದ ಆ ಹೊಳೆಯುವ ಚಿನ್ನದ ಮೆರುಗಿನ, ಬೆನ್ನ ಮೇಲೆ ಕೊಂಬಿರುವ ಮೀನು ರಾಜನನ್ನುದ್ದೇಶಿಸಿ,'ರಾಜನೇ, ಅನತಿ ಸಮಯದಲ್ಲಿ ಯುಗಾಂತ್ಯವಾಗಲಿದೆ. ಭೂಮಿಗೆ ಅಪಾಯ ಕಾದಿದೆ. ಪ್ರಳಯ ಕಾಲದಂತೆ ಭೀಕರವಾದ ಮಳೆ ಬಂದು ಜಗತ್ತನ್ನು ಮುಳುಗಿಸಲಿದೆ. ನೀನು ದೊಡ್ಡದೊಂದು ಹಡಗನ್ನು ಕಟ್ಟಿ ಅದರೊಳಗೆ ನಿನ್ನ ಪ್ರಜೆಗಳನ್ನು ಎಲ್ಲ ಪ್ರಭೇದಗಳ ಪಶು ಪಕ್ಷಿಗಳನ್ನು ಸಸ್ಯಗಳನ್ನು ಬೀಜಗಳನ್ನು ತುಂಬಿ ಸಿದ್ಧನಾಗಿರು. ಆಗ ಆ ಜಲದಲ್ಲಿ ನಾನು ಕಾಣಿಸಿಕೊಳ್ಳುತ್ತೇನೆ. ನನ್ನ ಕೊಂಬಿಗೆ ವಾಸುಕಿಯನ್ನು ಕಟ್ಟು. ಆ ಮಹಾಮಳೆಯಿಂದ ತುಂಬಿದ ಸಾಗರದ ಪ್ರವಾಹದಿಂದ ನಿನ್ನ ಹಡಗನ್ನು ನಾನು ಸುರಕ್ಷಿತವಾಗಿ ದಡ ತಲುಪಿಸುತ್ತೇನೆ' ಎಂದು ಅಭಯವವನ್ನು ನೀಡುತ್ತದೆ.

ನಂತರ ಮತ್ಸ್ಯಾವತಾರಿ ವಿಷ್ಣು ಸಾಗರ ದಡಿಯಲ್ಲಿ ಅಸುರನೊಡನೆ ಯುದ್ಧ ಮಾಡುತ್ತಾನೆ. ಘೋರವಾಗಿ ನಡೆದ ಕಾಳಗದಲ್ಲಿ ಅಸುರನನ್ನು ಸಂಹರಿಸಿ ವೇದಗಳನ್ನು ರಕ್ಷಿಸುತ್ತಾನೆ.

ಮಹಾಪ್ರಳಯ, ದಿನಪ್ರಳಯ,ಮನ್ವಂತರ ಪ್ರಳಯ ಎಂಬುದಾಗಿ ಪ್ರಳಯವು ಮೂರು ವಿಧ. ಮಹಾಪ್ರಳಯದಲ್ಲಿ ಬ್ರಹ್ಮ ದೇವರಿಂದ ಆರಂಭಿಸಿ, ಸಮಸ್ತ ಜಗತ್ತು ನಾಶವಾಗುತ್ತದೆ. ದಿನಪ್ರಳಯದಲ್ಲಿ ಭೂಲೋಕ, ಭುವರ್ಲೋಕ, ಸ್ವರ್ಗ ಲೋಕಗಳು ನಾಶವಾಗುತ್ತದೆ. ಮನ್ವಂತರ ಪ್ರಳಯದಲ್ಲಿ ಸಮುದ್ರದ ನೀರು ಭೂಮಿಯಲ್ಲಿ ವ್ಯಾಪಿಸಿ, ವಾಸಿಸುವ ಚರಾಚರ ಪ್ರಾಣಿಗಳು ಮಾತ್ರ ನಾಶವಾಗುತ್ತವೆ. ಪುನಃ ಮೊದಲಿನಿಂದ ಪ್ರಜೆಗಳ ಸೃಷ್ಟಿ ಪ್ರಾರಂಭ ವಾಗುತ್ತದೆ ಇದೇ ಮನ್ವಂತರ.

71 ಬಾರಿ ಚಾತುರ್ಯಗಗಳು ಕಳೆದಾಗ ಮನ್ವಂತರ ಪ್ರಳಯ ಆಗುತ್ತದೆ. 1500 ವರ್ಷಗಳ ಕಾಲ ಪ್ರಳಯದ ಅವಧಿ. ಹೀಗೆ ಚಾಕ್ಷುಷ ಮನ್ವಂತರವು ಮುಗಿದಾಗ ವೈವಸ್ವತ ಮನುವಿಗೆ ಮತ್ಸ್ಯರೂಪಿಯಾದ ನಾರಾಯಣನು ತತ್ತ್ವೋಪದೇಶವನ್ನು ನೀಡಿದ್ದಾನೆ.



ಚಾಕ್ಷುಷಮನ್ವಂತರದ ಕೊನೆಯಲ್ಲಿ ವೈವಸ್ವತಮನು ಮಾತ್ರ ಉಳಿಯುವಂತೆ ಭಗವಂತನು ಅನುಗ್ರಹಿಸಿರುತ್ತಾನೆ. ಮುಂದಿನ ಸೃಷ್ಟಿಗೆ ಉಪಯುಕ್ತವಾದ ಎಲ್ಲಾ ಸಸ್ಯಗಳನ್ನೂ, ಬೀಜಗಳನ್ನು ಸಂಗ್ರಹಿಸಿ ಒಂದು ದೊಡ್ಡ ನೌಕೆಯನ್ನು ವೈವಸ್ವತಮನು ಸಿದ್ಧಪಡಿಸಿರುತ್ತಾನೆ. ಪ್ರಳಯವು ಪ್ರಾರಂಭವಾದಾಗ ಬಿರುಗಾಳಿಗೆ ತತ್ತರಿಸಿದ ಆ ನೌಕೆಯನ್ನು ಪರಮಾತ್ಮನ ಮಾರ್ಗದರ್ಶನದಂತೆ ಮತ್ಸ್ಯನ ಕೊಂಬಿಗೆ ದೊಡ್ಡ ಸರ್ಪದಿಂದ ಕಟ್ಟಿ ಹಾಕುತ್ತಾನೆ. ಅನಂತರ ಒಂದೂವರೆ ಸಾವಿರ ವರ್ಷಗಳ ಕಾಲ ದೋಣಿಯಲ್ಲಿ ಕುಳಿತು ಮತ್ಸ್ಯರೂಪಿಯಾದ ಪರಮಾತ್ಮನಿಂದ ತತ್ತ್ವೋಪದೇಶವನ್ನು ಪಡೆಯುತ್ತಾನೆ. ವೈವಸ್ವತ ಮನುವಿಗೆ ಮಾಡಿದ ತತ್ತ್ವೋಪದೇಶವೇ 'ಮತ್ಸ್ಯಪುರಾಣ' ಎಂದು ಪ್ರಸಿದ್ಧವಾಗಿದೆ.

18 ಪುರಾಣಗಳಲ್ಲಿ ಮತ್ಸ್ಯಪುರಾಣವು ಮಹಾಪುರಾಣ ಎಂದೇ ಪ್ರಸಿದ್ಧ ಹೊಂದಿದೆ. ಆದರೆ ಇದರಲ್ಲಿರುವುದು 10,000 ಶ್ಲೋಕ ಮಾತ್ರ. ಸ್ವಾಯಂಭುವಮನುವಿಗೆ ಸಾಕ್ಷಾತ್ ಮತ್ಸ್ಯರೂಪಿಯಾದ ಪರಮಾತ್ಮನು ಅನೇಕ ತತ್ವಗಳ ಉಪದೇಶವನ್ನು ಮಾಡಿರುತ್ತಾನೆ. ಅಷ್ಟೇ ಅಲ್ಲದೇ ಚಂದ್ರ ವಂಶದ ವಿವರವು ಇದರಲ್ಲಿ ಬರುತ್ತದೆ.

ಮತ್ಸ್ಯಮೂರ್ತಿಯನ್ನು ಕೆತ್ತಿಸಿ ಪೂಜಿಸುವ ವಾಡಿಕೆ ಬಂದಿಲ್ಲ. ಆದರೆ ಮತ್ಸ್ಯಶಾಲಗ್ರಾಮಕ್ಕೆ ಬಹಳ ಅಪೂರ್ವತೆ ಇರುತ್ತದೆ. ಮತ್ಸ್ಯಶಾಲಗ್ರಾಮವನ್ನು ಪೂಜಿಸುವುದರಿಂದ ಧನಸಂಪತ್ತನ್ನು ಮತ್ತು ವಿದ್ಯಾಸಂಪತ್ತನ್ನು ಹೇರಳವಾಗಿ ಪಡೆದುಕೊಳ್ಳಬಹುದು. ಬಾಲದಲ್ಲಿ ಒಂದು ಚಕ್ರವಿದ್ದು, ವನದಲ್ಲಿ ಎರಡು ಚಕ್ರವಿದ್ದು ನೇರಳೆ ಹಣ್ಣಿನಂತೆ ಉದ್ದವಾಗಿ ಇರುವುದನ್ನು 'ಮತ್ಸ್ಯಶಾಲಗ್ರಾಮ' ಎಂದು ಕರೆಯುತ್ತಾರೆ.

### ಮತ್ಸ್ಯಾವತಾರ

ಬ್ರಹ್ಮ ಸೃಷ್ಟಿಯಲ್ಲಿ ನಿರತನಾದರೆ, ವಿಷ್ಣು ಸೃಷ್ಟಿಯಾದ ಜಗತ್ತನ್ನು ರಕ್ಷಿಸುವವನು. ಹಿಂದೂ ಪುರಾಣದ ಪ್ರಕಾರ ಭೂಲೋಕವನ್ನು ರಕ್ಷಿಸುವ ಸಲುವಾಗಿ ವಿಷ್ಣು 10 ಘಟ್ಟದಲ್ಲಿ ವಿಷ್ಣು ಭೂಮಿಯ ಮೇಲೆ ದಶಾವತಾರ ಎತ್ತುತ್ತಾನೆ. ಧರ್ಮದ ಪುನರುತ್ಥಾನಗೊಳಿಸಲು ಅಥವಾ ಧರ್ಮನಿಷ್ಠೆಯನ್ನು ಸಾರಲು ಮತ್ತು ಅನ್ಯಾಯವನ್ನು ನಾಶಪಡಿಸಲು ಈ ಅವತಾರಗಳನ್ನು

ಎತ್ತುತ್ತಾನೆ ಎಂದು ಭಗವದ್ಗೀತೆಯಲ್ಲಿ ವಿವರಿಸಲಾಗಿದೆ.ವಿಷ್ಣುವಿನ ಅವತಾರ ಮಾನವ ಸಮಾಜದ ಮೇಲೆ ಗುರುತರ ಪ್ರಭಾವವನ್ನು ಬೀರಿದೆ ಎಂದು ಗರುಡಪುರಾಣದಲ್ಲಿ ಉಲ್ಲೇಖಿಸಲಾಗಿದೆ.ವಿಷ್ಣುವಿನ ದಶಾವತಾರಗಳು ಮತ್ಸ್ಯ. ಕೂರ್ಮ (ಆಮೆ),ವರಾಹ, ನರ ಸಿಂಹ, ವಾಮನ, ಪರುಶುರಾಮ, ರಾಮ, ಬಲರಾಮ ಮತ್ತು ಕೃಷ್ಣ.ಕೊನೆಯ ಅವತಾರ ಕಲ್ಕಿ, ಈ ರೂಪದಲ್ಲಿ ಕಲಿಯುಗದ ಕೊನೆಯಲ್ಲಿ ಅವತರಿಸಲಿದ್ದಾನೆ ಎಂದು ಹೇಳಲಾಗಿದೆ. ಮೊದಲ ನಾಲ್ಕು ಅವತಾರಗಳನ್ನು ಸತ್ಯಯುಗದಲ್ಲಿ, ನಂತರದ ಮೂರು ಅವತಾರಗಳನ್ನು ತ್ರೇತಾಯುಗದಲ್ಲಿ, ಎಂಟನೇ ಅವತಾರವನ್ನು ದ್ವಾಪರಯುಗದಲ್ಲಿ,ಒಂಬತ್ತನೇ ಅವತಾರವನ್ನು ಕಲಿಯುಗದಲ್ಲಿ ಈಗಾಗಲೇ ಎತ್ತಿದ್ದು, 10 ನೇ ಕೊನೆಯ ಅವತಾರವನ್ನು ಕಲಿಯುಗದ ಕೊನೆಯ ಘಟ್ಟದಲ್ಲಿ ವಿಷ್ಣುಧರಿಸಲಿದ್ದಾನೆ ಎನ್ನಲಾಗಿದೆ.

ಶ್ರೀಮದ್ ಭಾಗವತದಲ್ಲಿ (ಸ್ಕಂದ 8, ಭಾಗ 24) ಮತ್ಸ್ಯಾವತಾರದ ವಿವರಣೆ ಹೀಗಿದೆ. ಸೃಷ್ಟಿ ಕಾರ್ಯದಲ್ಲಿ ನಿರತನಾಗಿದ್ದ ಬ್ರಹ್ಮ ಆಯಾಸಗೊಂಡು ನಿದ್ರೆ ಹೋಗುತ್ತಾನೆ. ಆಗ ಹಯಗ್ರೀವಾಸುರ ವೇದಗಳನ್ನು ಕದಿಯುತ್ತಾನೆ. ಸಮುದ್ರದಾಳದಲ್ಲಿ ಬಚ್ಚಿಟ್ಟಿದ್ದ ವೇದಗಳನ್ನು ಮತ್ತು ಭೂಮಿಯಲ್ಲಿ ಸೃಷ್ಟಿಸಲಾಗಿದ್ದ ಎಲ್ಲ ಜೀವಿಗಳನ್ನು ಜಲಪ್ರಳಯದಿಂದ ರಕ್ಷಿಸಲು ವಿಷ್ಣು ಮತ್ಸ್ಯಾವತಾರವನ್ನು ತಳೆದನೆಂದು ಹೇಳಲಾಗಿದೆ.



ಅದರ ಕಥೆ ಹೀಗಿದೆ.

ಸತ್ಯವ್ರತ ಎಂಬ ರಾಜನೊಬ್ಬನಿದ್ದ. ಒಂದು ದಿನ ಅವನು ಸಾಗರದ ತೀರದಲ್ಲಿ ಹರಿಯನ್ನು ಪ್ರಾರ್ಥಿಸುತ್ತಿರುವಾಗ ಅವನ ಕೈಯೊಳಗೆ ಒಂದು ಬಂಗಾರದ ಬಣ್ಣದ ಮೀನು ನೀರಿನಿಂದ ಹಾರಿ ಬಂದು ಬೀಳುತ್ತದೆ. ಆಶ್ಚರ್ಯಗೊಂಡ ಅವನು ಅದನ್ನು ಮರಳಿ ನೀರಿಗೆ ಬಿಡಲು ಹೋಗುತ್ತಾನೆ.ಆಗ ಆ ಮೀನು ಅವನನ್ನು ತಡೆಯುತ್ತದೆ. ನೀರಿನಲ್ಲಿರುವ ದೊಡ್ಡ ಮೀನುಗಳು ತನ್ನನ್ನು ತಿಂದು ಬಿಡುವುದರಿಂದ ರಕ್ಷಿಸುವಂತೆ ಕೇಳಿಕೊಳ್ಳುತ್ತದೆ. ರಾಜ ಅದನ್ನು ತನ್ನ ಅರಮನೆಗೆ ಕೊಂಡೊಯ್ದು ಸಣ್ಣ ಕಮಂಡಲದಲ್ಲಿ ಬಿಟ್ಟ. ಆದರೆ ಅದು ಕಮಂಡಲವನ್ನು ಮೀರಿಸುವಂತೆ ದೊಡ್ಡದಾಯಿತು.ರಾಜ ಅದನ್ನು ಸಣ್ಣ ಕೊಳದಲ್ಲಿ ಬಿಟ್ಟ. ಆಗಲೂ ಅದು ಬೆಳೆಯಿತು. ಹೀಗೆ ರಾಜ ಎಲ್ಲಿ ಬಿಟ್ಟರಲ್ಲಿ ದೈತ್ಯಕಾರವಾಗಿ ಬೆಳೆಯುತ್ತಾ ಹೋಯಿತು. ಕೊನೆಗೆ ರಾಜನಿಗೆ ಜ್ಞಾನೋದಯವಾಯಿತು.ಜಗತ್ತನ್ನು ಉಳಿಸಲು ಆ ದೇವರೇ ಈ ರೂಪದಲ್ಲಿ ಬಂದಿದ್ದಾನೆ ಎಂದು. ಆಗ ವಿಷ್ಣು ತಾನು ಬಂದ ಉದ್ದೇಶವನ್ನು ಹೇಳಿದ.ಇನ್ನು ಏಳು ದಿನಗಳಲ್ಲಿ ಇಡೀ ಭೂಮಿ ಸಂಕುಲವನ್ನು ರಕ್ಷಿಸಬೇಕಿದೆ. ಆದ್ದರಿಂದ ಎಲ್ಲ ತರಹದ ಸಸ್ಯಗಳು, ಜೀವಿಗಳ ಒಂದೊಂದು ಮಾದರಿಗಳನ್ನು ಸಂಗ್ರಹಿಸು ಮತ್ತು ಸಪ್ತ ಋಷಿಗಳನ್ನು ಕರೆದುಕೊಂಡು ಬಾ. ನಾನು ದೊಡ್ಡ ದೋಣಿಯಲ್ಲಿ ಕಾಯುತ್ತಿರುತ್ತೇನೆ ಎನ್ನುತ್ತಾನೆ. ಅದರಂತೆ ಸತ್ಯವ್ರತ ಎಲ್ಲವನ್ನು ತಂದು ದೋಣಿಯಲ್ಲಿರಿಸಿ 100 ಯೋಜನ ಉದ್ದವ ಮತ್ಸ್ಯದ ಬಾಲಕ್ಕೆ ಕಟ್ಟುತ್ತಾನೆ. ವಿಷ್ಣು ಹೇಳಿದಂತೆ ದೊಡ್ಡ ಜಲಪ್ರಳಯ ಸಂಭವಿಸುತ್ತದೆ.ಮತ್ಸ್ಯಾವತಾರದಲ್ಲಿದ್ದ ವಿಷ್ಣುವೇದಗಳೂ ಸೇರಿದಂತೆ ಎಲ್ಲವನ್ನೂ ಜಲ ಪ್ರಳಯದಿಂದ ರಕ್ಷಿಸುತ್ತಾನೆ. ಹೀಗೆ ಜಗತ್ತನ್ನು ರಕ್ಷಿಸಲು ವಿಷ್ಣು ಮತ್ಸ್ಯಾವತಾರವನ್ನು ತಾಳುತ್ತಾನೆ.






ತಿರುಮಲ ತಿರುಪತಿ ದೇವಸ್ಥಾನಗಳು

**ನಾಗುಲಾಪುರಂ**
**ಶ್ರೀ ವೇದವಲ್ಲಿ ಸಮೇತ**
**ಶ್ರೀ ವೇದನಾರಾಯಣ ಸ್ವಾಮಿಯವರ**
**ಬ್ರಹ್ಮೋತ್ಸವ**
**18-04-2019 ರಿಂದ**
**27-04-2019 ವರೆಗೆ**



ತಿರುಮಲ ತಿರುಪತಿ ದೇವಸ್ಥಾನಗಳು

## ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವ

02-4-2019 ರಿಂದ 11-4-2019 ರ ವರೆಗೆ

**02-04-2019**
ಮಂಗಳವಾರ
ಹಗಲು: ---------
ರಾತ್ರಿ: ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ

**03-04-2019**
ಬುಧವಾರ
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**04-04-2019**
ಗುರುವಾರ
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**05-04-2019**
ಶುಕ್ರವಾರ
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**06-04-2019**
ಶನಿವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**07-04-2019 ಭಾನುವಾರ**
ಹಗಲು:
ಪಲ್ಲಕಿಯಲ್ಲಿ ಮೋಹಿನೀಅವತಾರೋತ್ಸವ
ರಾತ್ರಿ: ಗರುಡವಾಹನ

**08-04-2019**
ಸೋಮವಾರ
ಹಗಲು: ಹನುಮದ್ವಾಹನ
ಸಾಯಂಕಾಲ: ವಸಂತೋತ್ಸವ
ರಾತ್ರಿ: ಗಜವಾಹನ

**09-04-2019**
ಮಂಗಳವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**10-04-2019**
ಬುಧವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**11-04-2019**
ಗುರುವಾರ
ಹಗಲು: ಪಲ್ಲಕಿ ಉತ್ಸವ, ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ

ತಿರುಮಲ ತಿರುಪತಿ ದೇವಸ್ಥಾನಗಳು

## ವಾಯಲ್ಪಾಡು (ವಾಲ್ಮೀಕಿಪುರಂ) ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಬ್ರಹ್ಮೋತ್ಸವ

10-04-2019 ರಿಂದ
19-04-2019 ರ ವರೆಗೆ

**10-04-2019**
ಬುಧವಾರ
ಹಗಲು: ---------
ರಾತ್ರಿ: ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ

**12-04-2019**
ಶುಕ್ರವಾರ
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**14-04-2019**
ಭಾನುವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**16-04-2019**
ಮಂಗಳವಾರ
ಹಗಲು: ಹನುಮದ್ವಾಹನ
ಸಾಯಂಕಾಲ: ವಸಂತೋತ್ಸವ
ರಾತ್ರಿ: ಗಜವಾಹನ

**18-04-2019**
ಗುರುವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ



**11-04-2019**
ಗುರುವಾರ
ಹಗಲು: ಧ್ವಜಾರೋಹಣ
ರಾತ್ರಿ: ---------

**13-04-2019**
ಶನಿವಾರ
ಹಗಲು: ಸಿಂಹವಾಹನ
ರಾತ್ರಿ:
ಮುತ್ಯಪುಪಂದಿರಿವಾಹನ

**15-04-2019**
ಸೋಮವಾರ
ಹಗಲು:
ಪಲ್ಲಕಿಯಲ್ಲಿ ಮೋಹಿನಿಅವತಾರೋತ್ಸವ
ರಾತ್ರಿ: ಗರುಡವಾಹನ

**17-04-2019**
ಬುಧವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**19-04-2019**
ಶುಕ್ರವಾರ
ಹಗಲು: ಪಲ್ಲಕಿ ಉತ್ಸವ, ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ



ತಿರುಮಲ ತಿರುಪತಿ ದೇವಸ್ಥಾನಗಳು

## ಒಂಟಿಮಿಟ್ಟ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವ

12-04-2019 ರಿಂದ 21-04-2019 ರವರೆಗೆ

**12-04-2019**
ಶುಕ್ರವಾರ
ಹಗಲು: ನ್ಯಾಸಾಭಿಷೇಕ
ರಾತ್ರಿ: ಅಂಕುರಾರ್ಪಣೆ

**13-04-2019**
ಶನಿವಾರ
ಹಗಲು: ಧ್ವಜಾರೋಹಣ
ರಾತ್ರಿ: ಶೇಷವಾಹನ

**14-04-2019**
ಭಾನುವಾರ
ಹಗಲು: ವೇಣುಗಾನಾಲಂಕಾರ
ರಾತ್ರಿ: ಹಂಸವಾಹನ

**15-04-2019**
ಸೋಮವಾರ
ಹಗಲು: ವಟಪತ್ರಶಾಯಿ ಅಲಂಕಾರ
ರಾತ್ರಿ: ಸಿಂಹವಾಹನ

**16-04-2019**
ಮಂಗಳವಾರ
ಹಗಲು: ನವನೀತ ಕೃಷ್ಣಾಲಂಕಾರ
ರಾತ್ರಿ: ಹನುಮತ್ಸೇವೆ

**17-04-2019**
ಬುಧವಾರ
ಹಗಲು:
ಮೋಹಿನೀ ಸೇವೆ
ರಾತ್ರಿ: ಗರುಡಸೇವೆ

**18-04-2019**
ಗುರುವಾರ
ಹಗಲು: ಶಿವಧನುರ್ಭಂಗಾಲಂಕಾರ
ರಾತ್ರಿ: ಎದುರುಕೋಲು, ಕಲ್ಯಾಣೋತ್ಸವ,
ಗಜವಾಹನ

**19-04-2019**
ಶುಕ್ರವಾರ
ಹಗಲು: ರಥೋತ್ಸವ
ರಾತ್ರಿ: -------

**20-04-2019**
ಶನಿವಾರ
ಹಗಲು: ಕಾಳಿಯಮರ್ದನಾಲಂಕಾರ
ರಾತ್ರಿ: ಅಶ್ವವಾಹನ

**21-04-2019**
ಭಾನುವಾರ
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ




ತಿರುಮಲಗಿರಿಗಳಲ್ಲಿ ತಿ.ತಿ.ದೇ.,ಯವರು 19-02-2019 ರಂದು ನಿರ್ವಹಿಸಿದ ಕುಮಾರಧಾರ ತೀರ್ಥಮುಕ್ಕೋಟಿಯ ದೃಶ್ಯಗಳು





ತಿರುಮಲ ತಿರುಪತಿ ದೇವಸ್ಥಾನಗಳ ಧರ್ಮಕರ್ತಮಂಡಲಿ ಸದಸ್ಯರಾಗಿ ಪ್ರಮಾಣ ಸ್ವೀಕಾರ

ಶ್ರೀ ವೇಣಾಟಿ ರಾಮಚಂದ್ರಾರೆಡ್ಡಿ (21-02-2019)

ಶ್ರೀ ಎಸ್.ಪ್ರಸಾದ್ ಬಾಬು (22-02-2019)



ತಿ.ತಿ.ದೇ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಯಾಗಿ
ಕೆಲಸ ಮಾಡಿ ಬದಲಿಯಾದ ಶ್ರೀ ಪೋಲಭಾಸ್ಕರ್ ಐ.ಎ.ಎಸ್., ಯವರಿಗೆ
ಬೀಳ್ಕೊಡುಗೆ



ತಿ.ತಿ.ದೇ. ನೂತನ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ (ತಿರುಪತಿ) ಯಾಗಿ
10-02-2019 ರಂದು ಪದವಿಯನ್ನು ಸ್ವೀಕರಿಸಿದ
ಶ್ರೀ ಬಿ. ಲಕ್ಷ್ಮೀಕಾಂತಂ, ಐ.ಎ.ಎಸ್., ರವರು

# "ಓಂ ಶ್ರೀ ರಾಮ ಜಯರಾಮ ಜಯ ಜಯ ರಾಮ"


- ಎಸ್. ಗೋಪಾಲ್

ಲಂಕಾ ವಿಜಯದ ನಂತರ ಅಯೋಧ್ಯಾನಗರದಲ್ಲಿ ಶ್ರೀರಾಮಚಂದ್ರ ಭಗವಾನನು ರಾಜ ದರ್ಬಾರಿನಲ್ಲಿ ವಿರಾಜಮಾನನಾಗಿದ್ದ.ಆ ಸಮಯದಲ್ಲಿ ಶ್ರೀರಾಮಚಂದ್ರ ಪ್ರಭುವಿಗೆ ಅತ್ಯವಸರ ವಿಷಯಗಳನ್ನು ನಿವೇದಿಸುವ ಮಹಾಸಂಕಲ್ಪದಿಂದ ದೇವರ್ಷಿನಾರದಮುನಿ, ವಿಶ್ವಾಮಿತ್ರ, ವಸಿಷ್ಠ ಇನ್ನಿತರ ಅನೇಕ ಮಂದಿ ಮುನಿವರ್ಯರು ಆಸೀನರಾಗಿದ್ದರು.

ಒಂದಾನೊಂದು ವಿಷಯದ ಮೇಲೆ ಗಹನವಾಗಿ ತೀವ್ರ ತರದಲ್ಲಿ ಚರ್ಚೆ ನಡೆಯುತ್ತಿರಲು ದೇವರ್ಷಿ ನಾರದ ಮುನಿ ಅಲ್ಲಿ ಸೇರಿದ್ದ ಎಲ್ಲ ಗಣ್ಯವ್ಯಕ್ತಿಗಳಲ್ಲಿ 'ನನ್ನಲ್ಲೊಂದು ಜಿಜ್ಞಾಸೆ ಅದೇನೆಂದರೆ ಭಗವನ್ನಾಮ ಒಳ್ಳೆಯದೋ ಇಲ್ಲ ಭಗವಂತನೇ ಒಳ್ಳೆಯವನೂ'ಈ ವಿಷಯವನ್ನು ಚಿಂತಿಸಿ ಯೋಚಿಸಿ ಹೇಳಿರಿ"ಎನ್ನಲು ಸಭೆಯಲ್ಲಿ ಈ ವಿಷಯದ ಮೇಲೆ ವಾಗ್ವಿವಾದಗಳು ನಡೆದವು. ಆದರೂ ರಾಜಸಭೆಯಲ್ಲಿ ಋಷಿ ಗಣಗಳು ಒಂದು ನಿರ್ಣಯಕ್ಕೆ ಬರಲಾರದೆ ಹೋದರು. ಚರ್ಚೆ ಹಾಗೆ ಮುಂದುವರೆಯಿತು. ಅಂತಿಮವಾಗಿ ನಾರದ ಮಹರ್ಷಿ ತನ್ನ ಅಂತಿಮ ನಿರ್ಣಯವನ್ನು ಮಂಡಿಸುತ್ತಾ "ನಿಶ್ಚಯವಾಗಿಯೂ ಭಗವಂತನಿಗಿಂತ ಭಗವನ್ನಾಮವೇ ಶ್ರೇಷ್ಠವಾದುದು. ಇದನ್ನು ರಾಜ ಸಭೆ ಮುಗಿಸುವ ಮುನ್ನವೇ ಉದಾಹರಣ ಪೂರ್ವಕವಾಗಿ ಈ ವಿಷಯವನ್ನು ಪ್ರಮಾಣಿಕರಿಸಲಾಗುತ್ತದೆ" ಎಂದನು.

ನಂತರ ನಾರದ ಮಹರ್ಷಿ ಮಾರುತಿಯನ್ನು ತನ್ನ ಸಮೀಪಕ್ಕೆ ಕರೆದು "ಮಹಾವೀರನೇ ನೀರು ಸಾಮಾನ್ಯ ರೀತಿಯಲ್ಲಿ ಇಲ್ಲಿ ನೆರೆದಿರುವ ಋಷಿವರ್ಯರಿಗೆ ಶ್ರೀ ರಾಮನಿಗೂ ನಮಸ್ಕರಿಸಿ ವಿಶ್ವಾಮಿತ್ರಮಹರ್ಷಿಗೆ ಮಾತ್ರ ನಮಸ್ಕರಿಸಬೇಡ" ಎಂದನು. ಅದಕ್ಕೆ ಮಾರುತಿ (ಹನುಮಂತ) ಅಂಗೀಕರಿಸಿದ. ನಮಸ್ಕರಿಸುವ ಸಮಯ ಬರಲು ಅಲ್ಲಿ ಸೇರಿದ್ದ ಋಷಿಗಳಿಗೆಲ್ಲಾ ನಮಿಸಿ ವಿಶ್ವಾಮಿತ್ರ ಮುನಿಗೆ ನಮಸ್ಕರಿಸಲಿಲ್ಲ. ಇದರಿಂದ ಋಷಿವಿಶ್ವಾಮಿತ್ರನ ಮನನೊಂದಿ ಕ್ಷುಬ್ದಗೊಂಡಿತು. ನಂತರ ನಾರದಮುನಿ ವಿಶ್ವಾಮಿತ್ರನ ಬಳಿಬಂದು ಮಹರ್ಷಿಗಳೇ ಮಾರುತಿಯ ಉದ್ಧಟತನವನ್ನು ಗಮನಿಸಿದಿರಾ-ತುಂಬು ಸಭೆಯಲ್ಲಿ ಎಲ್ಲರಿಗೂ ನಮಿಸಿ ನಿಮ್ಮನ್ನು ಮಾತ್ರ ಕಡೆಗಣಿಸಿದ್ದಾನೆ. ನೀವು ಅವನಿಗೆ ಶಿಕ್ಷಿಸಿ ತಕ್ಕ ಪಾಠಕಲಿಸಬೇಕು. ಅವನಿಗೆಷ್ಟು ಗರ್ವ ಉದ್ಧಟತನ ನೀವೇ ನೋಡಿ" ಎಂದ. ಅಷ್ಟು ಮಾತ್ರಕ್ಕೆ ವಿಶ್ವಾಮಿತ್ರ ಮಹರ್ಷಿ ಬಲು ಕೋಪಾವಿಷ್ಟನಾಗಿ ಕೆಂಗಣ್ಣಾಗಿಸಿದ. ಅಂತೆಯೇ ಶ್ರೀರಾಮನ ಬಳಿಗಾಗಿ ಪ್ರಭುವೆ ನಿಮ್ಮ ಸೇವಕನಾದ ಮಾರುತಿ (ಹನುಮಂತ) ಎಲ್ಲರಿಗೂ ನಮಸ್ಕರಿಸಿ ನನ್ನನ್ನು ಬಿಟ್ಟು ಅವಮಾನಿಸಿರುವುದರಿಂದ ನಾಳೆ ಸೂರ್ಯ ಅಸ್ತಮಿಸುವುದರೊಳಗೆ ನಿನ್ನಿಂದಲೇ ಅವನಿಗೆ ಮರಣದಂಡನೆ ವಿಧಿಸಬೇಕು ಎಂದ ವಿಶ್ವಾಮಿತ್ರ ಶ್ರೀರಾಮನ ಗುರು. ಆದ್ದರಿಂದ ಗುರುವಿನ ಆಜ್ಞೆ ಪರಿಪಾಲಿಸಲೇ ಬೇಕಾದ ಪರಿಸ್ಥಿತಿ ಉಂಟಾಯಿತು. ಜೊತೆಗೆ ಹನುಮಂತ ನಿಷ್ಠಾವಂತ ಸ್ವಾಮಿ ಭಕ್ತನಾದವನಿಗೆ ಮರಣದಂಡನೆ ವಿಧಿಸಬೇಕಾದ ಪರಿಸ್ಥಿತಿಯಿಂದ ಒಂದು ಬಗೆ ಕ್ಷೋಭೆಗೆ ಸಿಲುಕಿದ. ಹಾಗೆ ಮಾಡದಿರಲಾಗದೆ ಇರುವಂತಿಲ್ಲವಾದ್ದರಿಂದ ಒಂದು ರೀತಿ ಮನದಲ್ಲಿ ಕ್ಷೋಭೆಗೆ ಸಿಲುಕಿದೆ. ಈ ವಿಷಯ ಕ್ಷಣ ಮಾತ್ರದಲ್ಲಿ ನಗರದಲ್ಲೆಲ್ಲಾ ವ್ಯಾಪಿಸಿ ಸ್ತಭ್ಧ ಸ್ಥಿತಿ ಉಂಟಾಯಿತು.ಹನುಮಂತ ಸಹ ಬಲು ವಿಭ್ರಾಂತನಾಗಿ ದುಃಖಗೊಂಡ.ಆಗ ಅವನು ನಾರದನನ್ನು ಸಮೀಪಿಸಿ"ದೇವರ್ಷಿ ನನ್ನನ್ನು ಕಾಪಾಡಿ, ಶ್ರೀ ರಾಮಚಂದ್ರ ಪ್ರಭು ನನ್ನನ್ನು ವಧಿಸುವನು ನಾನು ನೀವು ಹೇಳಿದಂತೆ ಮಾಡಿದಕ್ಕೆ ಈ ಫಲವನ್ನು ಅನುಭವಿಸು ವಂತಾಗಿದೆ. ಈಗ ನಾನೇನು ಮಾಡಬೇಕು" ಎನ್ನಲು ನಾರದನು"ಓ ಹನುಮಂತ ನಿರಾಶನಾಗಬೇಡ,ನಾನು ಹೇಳಿದಂತೆ ಮಾಡು, ಬ್ರಾಹ್ಮಿ ಮುಹೂರ್ತಕೆದ್ದು ಸರಯೂ ನದಿಗೆ ಹೋಗಿ ಸ್ನಾನಾದಿಗಳನ್ನಾಚರಿಸಿ ಕೈಗಳನ್ನು ಜೋಡಿಸಿ "ಓಂ ಶ್ರೀರಾಮ ಜಯ ರಾಮ ಜಯ ಜಯರಾಮ"ಎನ್ನುವ ಮಂತ್ರವನ್ನು ಭಕ್ತಿಯಿಂದ ಜಪಿಸು ವಿಶ್ವಾಸ ಪೂರ್ವಕವಾಗಿ ಹೇಳುತ್ತಿದ್ದೇನೆ. ನಿನಗೆ ಯಾವ ತರದ ಭಯಭೀತಿ ಕೇಡು ಉಂಟಾಗದು" ಎಂದನು ನಾರದಮುನಿ.

ಮಾರನೆ ದಿನ ಬೆಳಗಾಯಿತು, ಸೂರ್ಯೋದಯಕ್ಕೆ ಮುಂಚೆಯೇ ಮಾರುತಿ ಸರಯುನದಿಗೆ ಹೋಗಿ ಸ್ನಾನಾದಿ





ಗಳನ್ನು ಮಾಡಿ ದೇವರ್ಷಿ ಹೇಳಿದ ಪ್ರಕಾರ ಕೈಗಳನ್ನು ಜೋಡಿಸಿ ಭಗವಂತನ ಶಕ್ತಿಯುತ ನಾಮಜಪವನ್ನು ಜಪಿಸಲು ಪ್ರಾರಂಭಿಸಿದ. ಪೂರ್ಣ ಬೆಳಕಾಗುವ ವೇಳೆಗೆ ಹನುಮಂತನ ಕಠಿಣ ಪರೀಕ್ಷೆಯನ್ನು ವೀಕ್ಷಿಸಲು ಪುರಜನರೆಲ್ಲಾ ಗುಂಪು ಗುಂಪಾಗಿ ಬಂದು ಸೇರಿದ್ದರು. ಶ್ರೀರಾಮಚಂದ್ರ ಹನುಮಂತನಿಂದ ದೂರ ನಿಂತು ತನ್ನ ಪರಮಮಿತ್ರ ಭಕ್ತನನ್ನು ಕರುಣಾರ್ಥ ದೃಷ್ಟಿಯಿಂದ ನೋಡುತ್ತಲಿದ್ದ. ಕಾಲ ಸನ್ನಿಹಿತವಾಗುತ್ತಿದ್ದಂತೆ ಅನಿಚ್ಛಪೂರ್ವಕವಾಗಿಯೇ ಹನುಮಂತನ ಮೇಲೆ ಬಾಣಗಳ ವರ್ಷವನ್ನು ಸುರಿಸಲಾರಂಭಿಸಿದ. ಆದರೆ ರಾಮನ ಒಂದು ಬಾಣವೂ ಕೂಡ ಹನುಮಂತನಿಗೆ ಹಾನಿಯುಂಟು ಮಾಡಲಾಗಲಿಲ್ಲ; ಆದರೂ ಸಹ ಶ್ರೀರಾಮ ನಿರಂತರವಾಗಿ ದಿನವೆಲ್ಲಾ ಹಲವು ಬಗೆಯ ಬಾಣಗಳ ಸುರಿ ಮಳೆ ಪ್ರಯೋಗ ಮಾಡಲಾಯ್ತು ಮಾರುತಿ ಮೇಲೆ ಇಷ್ಟಾದರೂ ಒಂದೇ ಒಂದು ಬಾಣವೂ ಕೂಡ ಹನುಮಂತನನ್ನು ಸೋಂಕಲಾಗಲಿಲ್ಲ. ಇದನ್ನು ಗಮನಿಸಿದ ಶ್ರೀರಾಮ ಮತ್ತೂ ಬಲಯುತವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಲಾದರೂ ಅವು ಯಾವುವು ಪ್ರಯೋಜನಕ್ಕೆ ಬರದೇ ಹೋಯಿತು. ಅಂತ್ಯಕ್ಕೆ ಶ್ರೀ ರಾಮ ಬ್ರಹ್ಮಾಸ್ತ್ರವನ್ನು ಕೈಗೆತ್ತಿಕೊಂಡ. ಆದರೇನು ಹನುಮಂತ ಪೂರ್ಣ ಆತ್ಮವಿಶ್ವಾಸದಿಂದ ಕೂಡಿ ತೀವ್ರಗತಿಯಲ್ಲಿ ತನ್ನ ರಾಮ ತಾರಕಮಂತ್ರ ಜಪಿಸತೊಡಗಿದ. ಹಾಗೆಯೇ ರಾಮನ ಕಡೆ ತನ್ನ ಮಂದಹಾಸದ ಮುಗುಳು ನಗೆಯನ್ನು ಸೂಸತೊಡಗಿದ ಸ್ಥಿರ ಭಾವದಲ್ಲಿ ಅಲ್ಲಿ ನೆರೆದಿದ್ದವರೆಲ್ಲಾ ಆಶ್ಚರ್ಯಭರಿತರಾಗಿ ನೋಡುತ್ತಾ ಹನುಮಂತನಿಗೆ ಜಯ ಜಯಕಾರ ಹಾಕತೊಡಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾರದ ವಿಶ್ವಾಮಿತ್ರನನ್ನು ಸಮೀಪಿಸಿ ಓ ಮಹರ್ಷಿ ವಿಶ್ವಾಮಿತ್ರರೆ ನೀವು ಹನುಮಂತನ ಮೇಲಿನ ವಿರೋಧವನ್ನು ಸಂಹರಿಸಿಕೊಳ್ಳುವುದೊಂದೇ ಮಾರ್ಗವಲ್ಲವೆ. ಏಕೆಂದರೆ ಶ್ರೀರಾಮ ಈಗಾಗಲೇ ಬಳಲಿರುವಂತಿದೆ. ಹಲವು ತರದ ಬಲು ಶಕ್ತಿಯುತ ಬಾಣಗಳನ್ನು ಪ್ರಯೋಗಿಸಿದರೂ ಮಾರುತಿಯನ್ನು ಏನುಮಾಡಲಾರದೆ ಸುಮ್ಮನಾದವು. ಹನುಮಂತ ನಿಮಗೆ ಸಮಸ್ಕರಿಸದೆ ಹೋದರೆ ನಿಮಗೇನಾಯಿತು. ಈ ಸಂಘರ್ಷಣೆಯಿಂದ ನಿಮ್ಮ ಪ್ರೀತಿ ಪಾತ್ರನಾದ ಶ್ರೀರಾಮನನ್ನು ರಕ್ಷಿಸಿ. ಈ ಪ್ರಯಾಸದಿಂದ ಆ ಪ್ರಭುವನ್ನು ನಿವೃತ್ತಿ ಗೊಳಿಸಿ ನೀವು ಸಹ ಶ್ರೀರಾಮ ನಾಮ ಮಹಾತ್ಮೆ-ಶಕ್ತಿಯನ್ನು ನೋಡಿದಿರಲ್ಲಾ ಎನ್ನಲು, ನಾರದನ ಈ ಹೇಳಿಕೆಯಿಂದ ವಿಶ್ವಾಮಿತ್ರ ಮಹರ್ಷಿ ಒಂದು ರೀತಿ ಹರ್ಷಿತನಾಗಿ ಉಬ್ಬ ಪ್ರಭಾವಿತನಾಗಿ ಬಿಟ್ಟ ಹಾಗೆಯೇ ಕೂಡಲೇ "ರಾಮ, ನೀನು ಹನುಮಂತನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಬೇಡ" ಎಂದು ಆದೇಶಿಸಿದ ಇದರಿಂದ ಹನುಮಂತ ಬಂದು ತನ್ನ ಪ್ರಭುವಿನ ಪಾದಗಳಿಗೆ ಸಾಷ್ಟಾಂಗ ನಮಸ್ಕರಿಸಿ ಪಾದಗಳನ್ನು ಹಿಡಿದುಕೊಂಡು ದಯಾ ದೃಷ್ಟಿಯಿಂದ ನೋಡತೊಡಗಿದ. ಅಂತೆಯೇ ವಿಶ್ವಾಮಿತ್ರರ ದಯಾಳತ್ವವನ್ನು ಕಂಡು ಕರಗಿ ಹೋಗಿ ಭಕ್ತಿ ಗೌರವದಿಂದ ಅವರಿಗೆ ಕೈಜೋಡಿಸಿ ಪ್ರಣಾಮಗಳನ್ನು ನಿವೇದಿಸಿದ. ವಿಶ್ವಾಮಿತ್ರಮುನಿ ಕೂಡ ಅತ್ಯಂತ ಪ್ರಸನ್ನನ್ನಾಗಿ ಹನುಮಂತನನ್ನು ಆಲಂಗಿಸಿಕೊಂಡು ಆಶೀರ್ವದಿಸಿದನು. ಜೊತೆಗೆ ಶ್ರೀರಾಮನಲ್ಲಿ ಹನುಮಂತನ ಅನನ್ಯ ಅಸಾಧಾರಣ ಭಕ್ತಿ ಭಾವ ಕುರಿತು ವಿಶೇಷವಾಗಿ ಪ್ರಶಂಸಿಸಿದ.

ಹನುಮಂತ ಸಂಕಟ ಸ್ಥಿತಿಯಲ್ಲಿರಲು ನಾರದ ಮಹರ್ಷಿ ಪ್ರಪ್ರಥಮನಾಗಿ ಅವನಿಗೆ ಈ ಮಂತ್ರವನ್ನು ಉಪದೇಶಿಸಿದ. (ಶ್ರೀರಾಮ ಜಯರಾಮ ಜಯಜಯರಾಮ) ಆದ್ದರಿಂದ ಓದುಗರೇ ಎಂತಹ ಭಾವಾಗ್ನಿ ಕ್ಲಿಷ್ಟ ಪರಿಸ್ಥಿತಿಗಳಿದ್ದಲ್ಲಿ-ಸಮಯದಲ್ಲಿ ಮುಕ್ತಿ ಪಡೆದು ಹೊರಬರಲು ಎಂತಹ ಭವರೋಗಗಳಿಂದ ಬಳಲುತಿದ್ದು ಸುಧಾರಿತರಾಗಲು ಈ ಮೂರಕ್ಷರದ ಮಂತ್ರ 'ಶ್ರೀರಾಮ ಜಯರಾಮ ಜಯ ಜಯ ರಾಮ'ವನ್ನು ಸತತವಾಗಿ ಜಪಿಸಿದಲ್ಲಿ ಸುಖಾಂತವಾಗುವುದು ಸತ್ಯಸಂಗತಿ. 'ಶ್ರೀರಾಮ' ಈ ಸಂಬೋಧನೆ ಶ್ರೀರಾಮನಿಗೆ ಕರೆ 'ಜಯರಾಮ' ಅನ್ನುವುದು ಅವನ ಪ್ರಶಂಸೆ-ಪ್ರೀತಿ ಗೌರವ. "ಜಯ ಜಯರಾಮ" ಇದು ಅವನ ವಿಷಯದಲ್ಲಿ ಪರಿಪೂರ್ಣ ಸಮರ್ಪಣೆ, ಮಂತ್ರವನ್ನು ಜಪಿಸುವ ವೇಳೆಯಲ್ಲಿ ಈ ಭಾವನೆಗಳು ಮನದಲ್ಲಿರಬೇಕು. ಶ್ರೀರಾಮ ನಾನು ನಿನ್ನನ್ನು ನಂಬಿ ಸ್ತುತಿಸುತ್ತಿದ್ದೇನೆ. ಶರಣು ಬಿದ್ದಿದ್ದೇನೆ ನೀನೇ ಗತಿ ರಕ್ಷಿಸು" ಎನ್ನಿರಿ, ನಿಮಗೆ ಕೂಡಲೇ ಶ್ರೀರಾಮನ ಭಗವದ್ದರ್ಶನವಾದಂತಾಗಿ ಮನದಲ್ಲಿ ಧೈರ್ಯಸ್ಥೈರ್ಯವುಂಟಾಗಿ ನೀವೆಂದು ಕೊಂಡ ಕಾರ್ಯ ಕೈಗೂಡುವುದರಲ್ಲಿ ಸಂದೇಹವಿಲ್ಲ.




**ಸುಳಾದಿ**

"ಹರಿಗೆ ತನ್ನಾತ್ಮ ನಿವೇದನದಿಂದ
ಉರಿ - ಜಲ - ಮಣ್ಣು - ಬಯಲು - ಗಾಳಿಹೊಂದ
ಸ್ವರೂಪವ ಹರಿಯಂಘ್ರಿಗರ್ಪಿಸಿನಿಂದ
ಹರುಷವನುಂಬ ಉನ್ನಾಹಗಳಿಂದ
ಪುರಂದರವಿಠಲರಾಯನ ದಯದಿಂದ
ಸುರಖುಷಿಯೊಲುಮೆಗಿಲ್ಲವು ನಿಜಾನಂದ"

ಶ್ರೀ ವೈಷ್ಣವರ ಪದ್ಧತಿಯಂತೆ ಶ್ರೀರಾಮಾನುಜಾಚಾರ್ಯರು ಪ್ರಪತ್ತಿಯ ಬಗ್ಗೆ, ಶರಣಾಗತಿಯ ಬಗ್ಗೆ ಹೀಗೆ ಹೇಳುತ್ತಾರೆ.

"ಭಗವನ್ನಾರಾಯಣಾಭಿಮತಾನುರೂಪ - ಸ್ವರೂಪ - ರೂಪ. ಗುಣ-ವಿಭ-ವೈಶ್ವರ್ಯ. ಶಿಲಾದ್ಯ ನವದಿಕಾತಿಶಯಾ ಸಂಖ್ಯೇಯ-ಕಲ್ಯಾಣಗುಣಾಂ-ಪದ್ಮಾನಾಲಯಾಂ, ಭಗವತಿಂ-ಶ್ರೀಯಂ ದೇವಿಂ-ನಿತ್ಯಾನಪಾಯಿನೀಂ-ನಿರವದ್ಯಾಂ-ದೇವ ದೇವ ದಿವ್ಯಮಹಿಷೀಮ್ ಅಖಿಲಜಗನ್ಮಾತರಮ್ ಅಸ್ಮನ್ಮಾತರಮ್ ಅಶರಣ್ಯ ಶರಣ್ಯಾಮ್ ಅನನ್ಯಶರಣಂ ಶರಣಮಹಂ ಪ್ರಪದ್ಯೇ"

ಭಗವನ್ನಾರಾಯಣನಿಗೆ ಅಭಿಮತವೂ, ಅನುರೂಪವೂ ಆದ ಸ್ವರೂಪ, ರೂಪ, ವಿಭವ ಮತ್ತು ಅದರ ಗುಣ ಇವುಗಳನ್ನುಳ್ಳವಳೂ ಆದ ಐಶ್ವರ್ಯ ಶೀಲ ಇವೇ ಮೊದಲಾದ ಅವಧಿಯಿಲ್ಲದ ಅತಿಶಯದಿಂದ ಕೂಡಿದ ಅಸಂಖ್ಯೇಯವಾದ ಕಲ್ಯಾಣ ಗುಣಗಳ ಸಮೂಹವನ್ನುಳ್ಳವಳೂ ಪದ್ಮವನವನ್ನೇ ನಿವಾಸವಾಗಿ ಉಳ್ಳವಳೂ, ಭಗವತಿಯೂ,ನಿತ್ಯವೂ ಆದ ಅಖಿಲ ಜಗತ್ತಿಗೆ ತಾಯಿಯೂ, ಶರಣ್ಯರಿಲ್ಲದವರಿಗೆ ಶರಣ್ಯಳೂ ಆದ ಶ್ರೀ ಹರಿ ಶ್ರೀದೇವಿಯನ್ನು ಅನನ್ಯ ಶರಣನಾದ ನಾನು ಶರಣು ಹೋಗುತ್ತಾನೆ.

ಇದನ್ನೇ ಶ್ರೀ ಪುರಂದರದಾಸರು ಈ ಸುಳಾದಿಯಲ್ಲಿ ಹೇಳುತ್ತಾರೆ. ಯಾವ ಭಕ್ತನು ಭಗವಂತನಲ್ಲಿ ಶರಣಾಗತಿಯನ್ನು ಹೊಂದುವನೋ ತನ್ನಾತ್ಮವನ್ನು ತನ್ನ ಪ್ರಾಣವನ್ನು ಅವನಿಗೆ ಮುಡಿಪಾಗಿ ಇಡುವನೋ ಅಂತಹ ಭಕ್ತನು ಯಾವುದೇ ವಸ್ತುಗಳಿಂದ ವಿಚಲಿತನಾಗುವುದಿಲ್ಲ. ಬೆಂಕಿ, ಜಲ, ಮಣ್ಣು,ಬಯಲು, ಗಾಳಿಯಿಂದ, ಭಕ್ತನು ತನ್ನ ಸರ್ವಸ್ವವನ್ನು ಶ್ರೀಹರಿಯ ಚರಣಾರವಿಂದಕ್ಕೆ ಅರ್ಪಿಸುವನು.ಎಲ್ಲವನ್ನು ಅರ್ಪಿಸಿದ ಭಕ್ತನು ಸಕಲ ಸಂತೋಷ ಉತ್ಸಾಹದಿಂದ ಇರುತ್ತಾರೆ. ತನ್ನದೇನು ಇಲ್ಲ ಎಲ್ಲ ಆ ಶ್ರೀಹರಿಯದೇ ಎನ್ನುವನು ಯಾವಾಗಲೂ ಸುಖಿ, ಅವನು ಹೇಗಿರುವನೆಂದರೆ (ಭಕ್ತನು) ವೈಕುಂಠದ ಋಷಿಮುನಿಗಳು ಹೇಗೆ ಇರುವರೂ ಆ ರೀತಿಯಾಗಿ ನಿತ್ಯ ನಿರಂಜನನಾಗಿ ಇರುವನು.

**1. ವೆಂಕಟೇಶ ಬೇಡಿಕೊಂಬೆ**

ವೆಂಕಟೇಶ ಬೇಡಿಕೊಂಬೆ ಕೃಪೆಯ ಪಾಲಿಸೋ
ಬ್ರಹ್ಮ ಶಂಕರಾದಿವಂದ್ಯ ಎನಗೆ ಮುಕ್ತಿ ತೋರಿಸೋ॥

ನಷ್ಟ ಮೊದಲಾದಂತ ಕಷ್ಟ ಬಿಡಿಸೋ । ನಿನ್ನ ।
ಪಟ್ಟದ ರಾಣಿಗೆ ಹೇಳಿ ನೀನು ಪದವಿಕೊಡಿಸೋ॥
ಇಷ್ಟಭಕ್ತ ಜನರೊಳು ಎನ್ನ ಸೇರಿಸೋ । ಈ।
ಸೃಷ್ಟಿಯೊಳು ನಿನ್ನ ದಾಸರ ದಾಸನೆನಿಸೋ॥

ಉಟ್ಟು ಉಂಡು ಮಿಕ್ಕಿದ್ದೆಲ್ಲ ಎನಗೆ ಹಾಕಿಸೋ
ಪೊಂ ಬಟ್ಟಲೊಳಗಿನಹಾಲು ಉಚಿಷ್ಟಹಾಕಿಸೋ
ಘಟ್ಯಗಿ ಸಕ್ಕರೆ ರೊಟ್ಟಿ ತುಪ್ಪ ಉಣಿಸೋ।
ಮುಂದೆ ಹುಟ್ಟು ಬಹುಜನ್ಮಗಳ ಎನಗೆ ಬಿಡಿಸೋ॥

ಕಿಟ್ಟಗಟ್ಟಿದ ಕಬ್ಬಿಣಕೆ ಪುಟವ ಹಾಕಿಸೋ।
ಉತ್ಕೃಷ್ಟ ಬಂಗಾರದೊಳು ಎನ್ನ ಸೇರಿಸೋ॥
ಬೆಟ್ಟಿಗೆ ಉಂಗುರ ಮಾಡಿ ನೀ ಎನ್ನ ಧರಿಸೋ ।
ಸ್ವಾಮಿ ದಿಟ್ಟಪುರಂದರ ವಿಠಲನೆ ದಯದಿ ಪಾಲಿಸೋ॥

ಶ್ರೀ ಹರಿಯೇ ಪರನು, ಶ್ರೀಹರಿಯೇ ಮೂರ್ಜಗಕ್ಕೂ ದೊರೆಯು ಹರಿಯೇ ಸರ್ವೋತ್ತಮನು.ಅಡಿಗಡಿಗೆ ಪುರಂದರ ದಾಸರ ಕೀರ್ತನೆ ಈ ತತ್ತ್ವವನ್ನು ಪ್ರತಿಪಾದಿಸುತ್ತದೆ.

ತಿರುಪತಿ ಕ್ಷೇತ್ರದಲ್ಲಿ ಶ್ರೀ ವೇಂಕಟೇಶನ ದರ್ಶನ ಮಾಡಿದ ಅನನ್ಯ ಭಕ್ತಿಯಿಂದ ವೇಂಕಟೇಶ್ವರನ ದಯೆಗಾಗಿ ಮುಕ್ತಿಗಾಗಿ ಬೇಡಿ ದಾಸರು ಬರೆದ ಕೀರ್ತನೆ. 'ವೇಂ' ಎಂದರೆ ಪಾಪ 'ಕಟ' ಎಂದರೆ ನಾಶಮಾಡುವವನು ಎಂದು.

"ದೇವಾ ವೇಂಕಟೇಶ ನಾನು ನಿನ್ನ ಬೇಡಿ ಕೊಂಬೆನು ನನಗೆ ದಯಪಾಲಿಸು. ಶಂಕರರು. ಬ್ರಹ್ಮ ಇನ್ನು ಇತರ ಅನೇಕರು ವಂದಿಸುವಂಥ ಸ್ವಾಮಿ ನೀನು ನನಗೆ ಮುಕ್ತಿಯನ್ನು ಪಾಲಿಸು. ಈ ಭವಬಂಧನದಿಂದ ಪಾರಾಗಿಸು, ಜ್ಞಾನ ಭಕ್ತಿ ವೈರಾಗ್ಯ ಕೊಡು, ಈ ಜನ್ಮ ವ್ಯರ್ಥವಾಗದಂತೆ ಮಾಡು.

ಜನನ ಮರಣಗಳ ಕಷ್ಟದಿಂದ ಪಾರುಮಾಡು ನನ್ನ ಸರ್ವಸ್ವ ವನ್ನೇ ನಿನಗೆ ಮುಡಿಪಾಗಿಟ್ಟಿರುವೇ ತಂದೆ ಎಂದು ದಾಸರು ನಿವೇದನೆ ಮಾಡುತ್ತಾರೆ. ನಿನ್ನ ಅರಸಿ ಲಕುಮಿ, ನಿನ್ನ ಪಟ್ಟದ ರಾಣಿ ಬಳಿ ಹೇಳಿ ನನಗೆ ಸತ್ವದನಿ ಕೊಟ್ಟು ಕಾಪಾಡು ದೇವಾ!

ನನ್ನನ್ನು ನೀನು ನಿನ್ನ ಭಕ್ತ ಜನರೊಳಗೆ ಸೇರಿಸು ತಂದೆ,ನಿನ್ನ ದಾಸರ ದಾಸನಾಗುವ ಭಾಗ್ಯ ಎನಗೆ ಕೊಡಿಸೋ

ನೀನು ತಿಂದು, ನೀನು ತೊಟ್ಟು ಮಿಕ್ಕಿದ್ದೆಲ್ಲ ನನಗೆ ಕೊಡು ತಂದೆ.ಅಂದರೆ ನಿನಗೆ ಅರ್ಪಿತವಾದಂತಹದ್ದು ನನಗೆ ಕರುಣಿಸು. ನನಗೆ ಸಕಲ ಐಶ್ವರ್ಯ ಸಂಪತ್ತುಗಳನ್ನು ನೀನು ಕರುಣಿಸು.ಮುಂದೆ ಬರುವ ಬಹುಜನ್ಮಗಳ ಕಷ್ಟಗಳನ್ನು, ಜರಾಮರಾಣದ ಕಷ್ಟಗಳನ್ನು ಬಿಡಿಸು ತಂದೆ ಎಂದು ದಾಸರು ಇಲ್ಲಿ ಭಗವಂತನಲ್ಲಿ ಬೇಡಿಕೊಳ್ಳುತ್ತಾರೆ.

ನನ್ನ ದೇಹದಲ್ಲಿ ಮನಸ್ಸಿನಲ್ಲಿ ಬಹಳ ಕಲ್ಮಶಗಳು ತುಂಬಿದೆ ತಂದೆ. ನಿನ್ನ ನಾಮಾಮೃತದಿಂದ ಅದನ್ನು ಪರಿ ಹರಿಸು.ಕಬ್ಬಿಣಕ್ಕೆ ಪುಟವಿಟ್ಟರೆ ಹೇಗೆ ಹೊಳೆಯುತ್ತದೋ ಆ ರೀತಿ ನನ್ನನ್ನು ಉದ್ಧಾರಮಾಡು.ನಾನು ನಿನ್ನ ಚರಣಕ್ಕೆ ಎರಗಿ ದ್ದೇನೆ. ನನ್ನ ಪ್ರಾಣವನ್ನೆ ನಿವೇದನೆ ಮಾಡಿದ್ದೇನೆ.ನನ್ನನ್ನೇ ನೀನು ನಿನ್ನ ಬೆಟ್ಟಿಗೆ ಉಂಗುರ ಮಾಡಿ ಸದಾಕಾಲ ಧರಿಸು ಮತ್ತು ನನಗೆ ಮುಕ್ತಿ ದಯಪಾಲಿಸೋ ಎಂದು ದಾಸರು ಈ ಕೀರ್ತನೆಯಲ್ಲಿ ಬೇಡಿಕೊಂಡಿದ್ದಾರೆ.

### 3. ಹಿಂದಿಲ್ಲ ಸ್ವಾಮಿ ಮುಂದಿಲ್ಲ

ಹಿಂದಿಲ್ಲ ಸ್ವಾಮಿ ಮುಂದಿಲ್ಲ
ಗೋವಿಂದ ನೀನಲ್ಲದೆ ಇಹಪರವಿಲ್ಲ॥

ಪರರ ಬೇಡಿಪ್ಪಂತೆ ಗತಿಯಾಯಿತಲ್ಲ
ನರರ ತುತಿಸಿ ನಾಲಿಗೆ ಬರಡಾಯಿತಲ್ಲ॥
ಇಹವಿಲ್ಲ ಪರವಿಲ್ಲ ನರಜನ್ಮ ಸ್ಥಿರವಿಲ್ಲ॥
ನರಗೆ ಪಾಮರಗೆ ಪಾಪದ ಪಂಜರಗೆ॥

ತನುವು ತನ್ನದಲ್ಲ ತನ್ನವರಾರಿಲ್ಲ॥
ಘನವಾಗಿ ಇರುವಾಗ ಸತಿಸುತರಿರೆಲ್ಲ॥
ತನುಮನ ಧನತಪ್ಪಿ ತಲ್ಲಣಿಸುವಾಗ॥
ವನಜನಾಭ ನೀನಲ್ಲದೆ ಯಾರಿಲ್ಲ॥

ಮಾತಾಪಿತೃ ಮೊದಲಾದ ಗೋತ್ರಜರು
ಸಂಪ್ರೀತಿಯೊಳಿರುವಾಗ ಮುನ್ನಿಪರೆಲ್ಲ॥
ಕಾತರನಾಗಿ ಯಮ ಕೊಂಡೊಯ್ಯುವಾಗ ।
ಸಂಗಾತ ಇನ್ನಾರಿಲ್ಲ ಪುರಂದರವಿಠಲ॥ ॥3॥

ದಯಾನಿಧಿ, ಕೇಶವಾ, ನಾರಾಯಣ ಹಿಂದಿನ ಬವಣೆ ಅರಿಯದು, ಮುಂದಿನ ಜನ್ಮ ತಿಳಿಯದು, ಅತ್ತದರಿ, ಇತ್ತಗಿರಿ, ಹಿಂದೆ ಸರ್ಪ, ಮುಂದೆ ಹೆಬ್ಬಾವು। ಅಂತೂ ಎತ್ತ ಹೋದರೂ ಕಾಪಾಡುವ ಸಾಮರ್ಥ್ಯ ನಿನಗೊಬ್ಬನಿಗೆ ಅಲ್ಲದೆ ಇನ್ನಾರಿಗೂ ಇಲ್ಲ ಗೋವಿಂದ.

ಹಿಂದೆ ಸಲಹಿದವನು ನೀನು. ಮುಂದೆ ಸಲಹುವವನು ನೀನೇ. ನನಗೆ ಹಿಂದೆ ಮುಂದೆ ಏನೊಂದು ತಿಳಿದಿಲ್ಲ. ದೊರೆ ನಿನ್ನಗೆ ನಾನು ಶರಣಾಗತಿ ಹೊಂದಿದ್ದೇನೆ.ನನ್ನನ್ನು ಕಾಪಾಡು ಎಂದು ದಾಸರು ಈ ಕೀರ್ತನೆಯಲ್ಲಿ ಬೇಡಿದ್ದಾರೆ.

ಅನನ್ಯವಾಗಿ ಹಿಂದಿನಿಂದಲೂ ನಿನಗೆ ಹೊಂದಿದ್ದರೆ, ಈ ಗತಿ ನನಗಾಗುತ್ತಿರಲಿಲ್ಲ.ಈ ಹಾಳು ಹೊಟ್ಟೆಗಾಗಿ, ಮನುಷ್ಯ ರನ್ನು ಬೇಡಿ,ಅವರನ್ನು ಸ್ತುತಿಸಿ ಸ್ತುತಿಸಿ ನನ್ನ ನಾಲಿಗೆಯು ಬರಡಾಗಿ ಹೋಯಿತು. ನಾರಾಯಣನನ್ನು ಸ್ತುತಿಸಲೇ ಇಲ್ಲ. ಪ್ರಭುವಾದ ನಿನ್ನ ನಾನು ನಂಬಲೇ ಇಲ್ಲ. ಆದುದರಿಂದ ನನಗೆ ಇಹದಲ್ಲಿ ಪರವಿಲ್ಲ.ಇನ್ನೊಮ್ಮೆ ಈ ನರಜನ್ಮ ಸಿಗುತ್ತದೆಂಬ ನಂಬಿಕೆಯು ನನಗೆ ಇಲ್ಲ ಸ್ವಾಮಿ.ಅಧ ಮಾಧಮನೂ, ಪಾಮ ರನೂ, ಪಾಪದ ಪುಂಜನೂ ಆದ ನನಗೆ ಉದ್ಧಾರವೆಂತೂ? ನನ್ನದೆನ್ನುವಂಥಾದ್ದು ಏನಿದೆ? ನನ್ನವರೆನ್ನುವವರು ಯಾರಿ ರುವರು?

ದೇಹವು ತನ್ನ ನಾಶದತ್ತ ಸಾಗುವುದು. ಧನವಳಿದಾಗ ಧನದ ನೆಂಟರೂ ತನುವಳಿದಾಗ, ತನುವಿ ನೆಂಟರೂ ದೂರ ವಾಗುವರು.ಮನದ ನಿಷ್ಟೂರತೆಗೆ ಕಾರಣವಾದಾಗ ಮನದ ನೆಂಟರೂ ಅಗಲುವರು. ತನ್ನ ತನುವು ತನ್ನದಲ್ಲ, ತನ್ನವರೂ ಯಾರೂ ಇಲ್ಲ,ಎಲ್ಲರೂ ನೆಂಟರೂ ಇಷ್ಟರೂ ಎಲ್ಲ ಐಶ್ವರ್ಯ ವಿದ್ದಾಗ ಮಾತ್ರ.ಇಲ್ಲದಿದ್ದಾಗ ಎಲ್ಲರೂ ಕೈ ಬಿಡುವರೇ ವನಜ ನಾಭ, ಅಕಾರಣಕಾರುಣ್ಯದಾತ, ನನ್ನವನೆಂಬುವನೂ ನೀನೊ ಬ್ಬನೇ ಅಪತ್ಬಾಂಧವಾ ನನ್ನವನು ನೀನೇ! ನೀನೇ! ನೀನೇ! ಎಂದು ದಾಸರು ಅತ್ಯಂತ ದೀನರಾಗಿ ನಿವೇದನೆ ಮಾಡಿದ್ದಾರೆ.

ತಂದೆ ತಾಯಿ ಮೊದಲಾದ ಹಿರಿಯರೂ ಬಂಧುಗಳು ಗೋತ್ರಜರೂ ಎಲ್ಲರೂ ಸಂಪ್ರೀತಿಯಲ್ಲಿ ಇರುವಾಗ ಯಾವುದೇ ಕಷ್ಟ ಕಾರ್ಪಣ್ಯ ಬಂದಾಗ್ಯೂ ಸಹಾಯಕರಾಗಿ ಇರುವರು. ಆದರೆ ಏನಾದರೇನು ಸ್ವಾಮಿ ಯಮಧರ್ಮರಾಯನು ಬಂದು ಅಂತ್ಯಕಾಲದಲ್ಲಿ ಕೊಂಡೊಯ್ಯುವಾಗ ಪುರಂದರವಿಠಲ ನೀನ ಲ್ಲದೇ ನನಗೆ ಇನ್ಯಾರು ಸಂಗಾತನಾಗಿ ಬರುತ್ತಾನೆ. ನಿನ್ನ ಹೊರತು ಮತ್ಯಾರು ಬರುವುದಿಲ್ಲ.

ಸಮರ್ಥನಾದ ನಿನ್ನಲ್ಲಿ ಆರ್ತನಾಗಿ ನಾನು ಸಲ್ಲಿಸುವ ಪ್ರಾರ್ಥನೆ ಇಷ್ಟೇ ಭಗವಂತಾ ನನ್ನಲ್ಲಿ ಅಪರಿಮಿತವಾದ ಭಕ್ತಿಯನ್ನು ಕರುಣಿಸು ಸದಾ ನಿನ್ನನ್ನು ಸ್ತುತಿಸುವ ಧ್ಯಾನ ಮಾಡುತ್ತಾ ನಿನ್ನಲ್ಲೆ ಸದಾ ಐಕ್ಯವಾಗುವಂತೆ ಎನ್ನನ್ನು ಮಾಡು ಎಂದು ದಾಸರು ಇಲ್ಲಿ ಹೇಳುತ್ತಾರೆ.

ಎಲ್ಲರೂ ಕೈಬಿಟ್ಟಾಗ ದೇವರಿಗೆ ಶರಣುಹೊಂದುವ ವಿಧಾನವನ್ನು ಈ ಕೀರ್ತನೆಯಲ್ಲಿ ದಾಸರು ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಆರ್ತಭಕ್ತಿಯ ಸುಂದರವಾದ ಪ್ರಾರ್ಥನೆ ಇದು. ಹೇ ಪ್ರಭು ಕರುಣಾನಿಧಿಯಾದ ನಿನಗೆ ನಾನು ಶರಣು ಹೋಗುವೆನು ಎಂದು ಇಲ್ಲಿ ಪುರಂದರದಾಸರು ಪ್ರತಿಪಾದಿಸುತ್ತಾರೆ.

ಹರಿಕಥಾಶ್ರವಣವೂ, ಹರಿನಾಮಕೀರ್ತನೆ।
ಹರಿಸ್ಮರಣೆ ಹರಿಪಾದ ಸೇವನೆ
ಹರಿಪೂಜನ, ವಂದನ, ದಾಸ್ಯ, ಸಖ್ಯತ್ವ।
ಹರಿಗಾತ್ಮ ಅರ್ಪಣ ಮುಕ್ತಿಪಥ ತತ್ತ್ವ।
ಪುರಂದರವಿಠಲ ಪರಮಾತ್ಮ ಸಿದ್ಧಿ
ಗುರುಮಧ್ವಮತ ಶ್ರುತಿ ಸ್ಮೃತಿಯೊಳು ಶುದ್ಧ ॥

ಪುರಂದರದಾಸರು ನವವಿಧ ಭಕ್ತಿಯ ಬಗ್ಗೆ ಉಪಸಂಹಾರವಾಗಿ ಈ ರೀತಿಯಾಗಿ ಹೇಳುತ್ತಾರೆ.

ಯಾವ ಭಕ್ತನು ಭಗವಂತನಲ್ಲಿ ಈ ರೀತಿಯಾದ ನವವಿಧ ಭಕ್ತಿಗಳನ್ನು ಹರಿಶ್ರವಣ, ಕೀರ್ತನ, ಹರಿಸ್ಮರಣ, ಹರಿಯ ಪಾದಸೇವನ, ಹರಿಅರ್ಚನೆ, ಹರಿಗೆ ವಂದನ, ಹರಿದಾಸ್ಯ, ಹರಿಸಖ್ಯತ್ವ ಮತ್ತು ಆತ್ಮನಿವೇದನದಲ್ಲಿ ಆಚರಿಸುವನೋ ಅವನು ಯಾವಾಗಲೂ ಶ್ರುತಿ,ಸ್ಮೃತಿಯೊಳಗೆ ಶುದ್ಧನಾಗಿರುವನು ಎಂದು ದಾಸರು ಹೇಳುತ್ತಾರೆ. ಈ ರೀತಿಯಾದ ಭಕ್ತಿಯಿಂದ ದೈವಸಾನಿಧ್ಯವು ಒದಗಿ ಬರುವುದು ಎಂದು ಶ್ರೀ ಪುರಂದರದಾಸರು ಹೇಳುತ್ತಾರೆ. ಈ ಸುಳಾದಿಯಲ್ಲಿ ಆತ್ಮ ನಿವೇದನ ಭಕ್ತಿಯ ಬಗ್ಗೆ ಶ್ರೀ ಪುರಂದರದಾಸರು ಇನ್ನು ಅನೇಕ ಕೀರ್ತನೆಗಳು ರಚಿಸಿದ್ದಾರೆ.

1. ಅಲ್ಲಿದೆ ನಮ್ಮ ಮನೆ

2. ಪೂರ್ವಜನ್ಮದಲ್ಲಿ ನಾಮಾಡಿದ ಅಘದಿಂದ

3. ಇನ್ನಾದರು ನಿನಗೆ ನೀನು ತಿಳಿಯದೆ

4. ತಪ್ಪುಗಳ ಪರಿಹರಿಸು ನಮ್ಮಪ್ಪ

5. ಕಾಯಬೇಕೆನ್ನ ಗೋಪಾಲ

6. ಯಾರು ಬಿಟ್ಟರು ಕೈ ನೀ ಬಿಡಬೇಡ .... ಇತ್ಯಾದಿ

ಶ್ರೀ ಪುರಂದರದಾಸರು ಮತ್ತು ನವವಿಧಭಕ್ತಿಗಳನ್ನು ಕುರಿತು ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಸಾಮಾನ್ಯ ಭಾಷೆಗೆ ಅಥವಾ ತರ್ಕಕ್ಕೆ ನಿಲುಕದ ನಾದರೂಪಿಯಾದ ಭಗವಂತನನ್ನು ಸಂಗೀತ ಮಾಧ್ಯಮದ ಮೂಲಕ ಸಾಕ್ಷಾತ್ಕರಿಸಿಕೊಳ್ಳಬಹುದೆಂಬುದನ್ನು ಸ್ವಾನುಭವ ಪೂರ್ವಕವಾಗಿ ಜನಸಾಮಾನ್ಯರಿಗೂ ಶ್ರೀ ದಾಸರು ಅರ್ಥೈಸಿದ್ದಾರೆ. ಸಂಪ್ರದಾಯಬದ್ಧವಾಗಿ, ನಿಯಮಿತವಾಗಿ ಭಗವದ್ ವಸ್ತುವುಳ್ಳ ಕೀರ್ತನೆ ಅಭ್ಯಸಿಸಬೇಕಾದ ಕ್ರಮವನ್ನು ತಿಳಿಸಿದ್ದಾರೆ.

ಇವುಗಳಲ್ಲಿ ಕೀರ್ತನೆಗಳ ವಸ್ತು ಬಹುತೇಕ ಭಗವಂತನೇ ಆದ್ದರಿಂದ ಇವುಗಳೆಲ್ಲವನ್ನೂ ಪರ್ಯಾಯವಾಗಿ 'ಕೀರ್ತನೆ'ಗಳೆಂದು ಗುರುತಿಸಿದರೂ ತಪ್ಪಿಲ್ಲ. ಇವುಗಳಲ್ಲಿ ಭಗವಂತನ ನಾಮಸಂಕೀರ್ತನೆಯನ್ನೇ ಪ್ರಧಾನವಾಗಿ ಒಳಗೊಂಡು,ಅನುಷಂಗಿಕನಾಗಿ ಇತರ ವಿಷಯಗಳನ್ನೂ ಅಳವಡಿಸಿಕೊಂಡು ಸರಳ ಸಂಗೀತ ಹೊಂದಿದ ರಚನೆಗಳು ದಿವ್ಯನಾಮಗಳೆಂದೂ,ಈ ಮಾದರಿಯ ರಚನೆಗಳು ದೈನಂದಿನ ಪೂಜೆಯಲ್ಲೂ,ಆಲಯಾರ್ಚನೆಗಳಲ್ಲೂ,ಈ ಒಂಟಿಯಾಗಿಯೂ,ಸಾಮೂಹಿಕವಾಗಿಯೂ ಬಳಸಲು ಅನುಕೂಲವಾದವು.

ಪುರಂದರದಾಸರ ದೃಷ್ಟಿಯಲ್ಲಿ ದೇವರು ಸಗುಣನೂ ಹೌದು ನಿರ್ಗುಣನೂ ಹೌದು, ನಿರ್ಗುಣನಾದ ಭಗವಂತನು ತನ್ನ ಭಕ್ತರ ಭಕ್ತಿಗೆ ಅನುಗುಣವಾಗಿ ಅಕಾರಗುಣಗಳನ್ನು ತಳೆಯುತ್ತಾನೆ.ದೇವನು ಪರನೂ ಹೌದು ಸುಲಭನೂ ಹೌದು. ದೇವನು ಪರನೆಂದಾಗ ಆತನು ಸರ್ವಜ್ಞ, ಸರ್ವವ್ಯಾಪಿ ಮತ್ತು ಸರ್ವಶಕ್ತನೆಂದರ್ಥ.ಎಲ್ಲವನ್ನೂ ತಿಳಿದವನಾಗಿ, ಎಲ್ಲೆಡೆಯೂ ಅಂತರ್ಯಾಮಿಯಾಗಿರುವ ಆತನ ಸರ್ವಶಕ್ತಿತ್ವವೂ ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳಲ್ಲಿ ವ್ಯಕ್ತಗೊಳ್ಳುತ್ತದೆ.

ದೇವರು ಮನುಷ್ಯನಿಗೆ ಇಚ್ಛಾ ಸ್ವಾತಂತ್ರ್ಯವನ್ನು ನೀಡಿ ಅದನ್ನು ಜೀವಿಯು ತನಗಿಷ್ಟ ಬಂದಂತೆ ಉಪಯೋಗಿಸಲು ಅವಕಾಶ ನೀಡಿರುತ್ತಾನೆ. ಹೀಗಾಗಿ ಸುಖ, ದುಃಖ ಪರಿಣಾಮಗಳನ್ನು ಎದುರಿಸುವವನು ಜೀವಿಯೇ ಆದ್ದರಿಂದ ಜಗತ್ತಿನಲ್ಲಿರುವ ಕೆಡಕಿಗೆ ದೇವರು ಕಾರಣನಲ್ಲ. ಆ ಜಗತ್ತಿನಲ್ಲಿರುವ ಮನುಷ್ಯನ ಕಾರಣ, ದೇವರು ಮನುಷ್ಯನ ಕರ್ಮ ಫಲಗಳ ವಿತರಕನಷ್ಟೇ.

ಶುಭಮಸ್ತು

# ಶ್ರೀ ರಾಮ ವೈಭವ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ



ನಮ್ಮ ಸಂಸ್ಕೃತಿಯಲ್ಲಿ ಶ್ರೀರಾಮಚಂದ್ರನು ಹಾಸು ಹೊಕ್ಕಾಗಿದ್ದು ಎಲ್ಲರಿಗೂ ಆದರ್ಶಪ್ರಾಯನಾಗಿರುತ್ತಾನೆ. ಪಿತೃ ವಾಕ್ಯ ಪರಿಪಾಲಕಾನದ ಶ್ರೀರಾಮಚಂದ್ರ ಮರ್ಯಾದಾ ಪುರುಷೋತ್ತಮನೆಂದು ಎಲ್ಲಡೆ ಪೂಜಿಸಲ್ಪಡುತ್ತಿದ್ದಾನೆ.ಹಾಗಾಗಿ ಶ್ರೀ ರಾಮ ನವಮಿ ಅತ್ಯಂತ ಮಹತ್ವವೆನಿಸಿಕೊಂಡಿದೆ.

ಸೂರ್ಯವಂಶ ಸಾರ್ವಭೌಮ ದಶರಥ ಮಹಾರಾಜನಿಗೆ ಕೌಸಲ್ಯೆ, ಸುಮಿತ್ರ ಮತ್ತು ಕೈಕೇಯಿ ಎಂಬ ಮೂವರು ಪತ್ನಿಯರು. ಅವರಾರಿಗೂ ಮಕ್ಕಳಿರಲಿಲ್ಲ. ಕುಲ ಪುರೋಹಿತರಾದ ವಸಿಷ್ಠ ಮಹರ್ಷಿಗಳ ಸಲಹೆಯ ಮೇರೆಗೆ ಪುತ್ರಕಾಮೇಷ್ಠಿ ಯಾಗವನ್ನು ಮಾಡಿದಾಗ ವಿಷ್ಣುವಿನ ಅನುಗ್ರಹದ ಯಾಗದ ಪ್ರಸಾದವನ್ನು ದಶರಥ ಮಹಾರಾಜನು ಸೇವಿಸಿ ಉಳಿದ ಶೇಷ ಪ್ರಸಾದವನ್ನು ಮೂವರು ಪತ್ನಿಯರಿಗೂ ಹಂಚಿದ. ಇದರ ಪರಿಣಾಮ ಮೂವರೂ ಗರ್ಭವತಿಯರಾಗಿ ಎಲ್ಲರೂ ಗಂಡು ಮಕ್ಕಳಿಗೆ ಜನ್ಮ ನೀಡುತ್ತಾರೆ. ಕೌಸಲ್ಯೆಯ ಹೊಟ್ಟೆಯಲ್ಲಿ ರಾಮ,ಕೈಕೇಯಿಯ ಹೊಟ್ಟೆಯಲ್ಲಿ ಭರತ, ಸುಮಿತ್ರೆಯ ಹೊಟ್ಟೆಯಲ್ಲಿ ಲಕ್ಷ್ಮಣ, ಶತೃಘ್ನ ಅವಳಿ ಪುನರ್ವಸು ನಕ್ಷತ್ರದಲ್ಲಿ ಮಹಾತೇಜಸ್ವಿಯಾಗಿ ಅವತರಿಸಿದ್ದು ಶ್ರೀರಾಮನವಮಿಯಾಗಿ ಜಗದ್ವಿಖ್ಯಾತಿಯಾಗಿ ಅವತರಿಸಿದ್ದು ಶ್ರೀರಾಮನವಮಿಯಾಗಿ ಜಗದ್ವಿಖ್ಯಾತಿಗೊಂಡಿದೆ.

ಕೆಲವೆಡೆ ಗರ್ಭರಾಮನವಮಿ (ರಾಮನು ಕೌಸಲ್ಯೆಯ ಹೊಟ್ಟೆಯಲ್ಲಿರುವಾಗ) ಜನನ ರಾಮನವಮಿ (ರಾಮ ಜನಿಸಿದ ಮೇಲೆ) ನಡೆಸುವ ಸಂಪ್ರದಾಯವನ್ನು ಹೊಂದಿರುತ್ತಾರೆ. (ಜನನ ರಾಮ ನವಮಿಯೇ ಹೆಚ್ಚಾಗಿ ಕಂಡು ಬರುತ್ತದೆ.) ಶ್ರೀಮದ್‌ವಾಲ್ಮೀಕಿ ರಚಿತ ರಾಮಾಯಣ ಮಹಾಗ್ರಂಥವನ್ನು ವ್ಯಾಸ ಪೀಠದ ಮೇಲೆ ಇರಿಸಿ ಶೋಡಷೋಪಚಾರ ಪೂಜೆಗಳನ್ನು ನೆರವೇರಿಸಿ ಪ್ರಥಮ ಕಾಂಡದಿಂದ ಪಾರಾಯಣವನ್ನು ಆರಂಭಿಸಿ ಶ್ರೀರಾಮಪಟ್ಟಾಭಿ ಷೇಕದವರೆಗೆ 9 ದಿನಗಳ ಪರ್ಯಂತ ರಾಮಾಯಣ ಪಾರಾಯಣಾದಿಗಳು ಕ್ರಮ ವಾಗಿ ನಡೆಯುತ್ತವೆ.

ಶ್ರೀ ರಾಮಾಯಣ ಗ್ರಂಥವು-ಬಾಲಾಕಾಂಡ,ಅಯೋಧ್ಯಾಕಾಂಡ, ಅರಣ್ಯ ಕಾಂಡ,ಕಿಷ್ಕಿಂದಾಕಾಂಡ,ಸುಂದರಕಾಂಡ,ಯುದ್ಧಕಾಂಡ ಹಾಗೂ ಉತ್ತರಕಾಂಡಗಳೆಂದು 7 ಕಾಂಡಗಳನ್ನು ಹೊಂದಿದೆ. ಪುರಾಣ ಎನ್ನುವವರಿಗೆ - ರಾಮಾಯಣ ಒಂದು ಪುರಾಣ. ಇತಿಹಾಸ ಎನ್ನುವವರಿಗೆ - ರಾಮಾಯಣ ಒಂದು ಇತಿಹಾಸ. ಧಾರ್ಮಿಕರಿಗೆ ರಾಮಾಯಣ ಒಂದು ಧರ್ಮಗ್ರಂಥ. ಕಾವ್ಯರಸಿಕರಿಗೆ ರಾಮಾಯಣ ಒಂದು ಅಪೂರ್ವಕಾವ್ಯ. ಋಷಿ ವಾಲ್ಮೀಕಿಯ ಹೃದಯಾಂತರಾಳದಿಂದ ಹರಿದು ಬಂದ ರಸಗಂಗೆ.

ಶ್ರೀರಾಮನವಮಿ ಸುಡಿಬಿಸಿಲಿನ ಬೇಸಿಗೆಯಲ್ಲಿ ಬರುವುದರಿಂದ ತಂಪು ಚೆಲ್ಲುವ ಸುವಾಸಿತ ತಾಜಾಹಣ್ಣುಗಳ ಪಾನಕ. ಕಬ್ಬಿನಹಾಲು, ಅಲೆಮನೆಯ ಬಿಸಿ ಬಿಸಿ ಬೆಲ್ಲ, ಮಜ್ಜಿಗೆ ಕುಡಿದು ಬಗೆ ಬಗೆಯ ಕೋಸಂಬರಿಗಳನ್ನು ಸೇವಿಸುವುದೇ ಗ್ರಾಮೀಣಭಾಗದ ಮಜಲು. ಮಧ್ಯಾಹ್ನವೆಲ್ಲಾ ಬೇಸಿಗೆಯ ಬಿಸಿಲ ತಾಪಕ್ಕೆ ಭಕ್ತರಿಗೆ ತಂಪೆರೆಯುವಂತೆ ಸಂಧ್ಯಾಕಾಲದಲ್ಲಿ ಶಾಸ್ತ್ರೀಯ ಸಂಗೀತದ ರಸದೌತಣದ ಸಮಾರಾಧಾನೆಯೇ ನೆರವೇರುತ್ತದೆ. ಶ್ರೀರಾಮನನ್ನೇ ಸಾಕ್ಷಾತ್ಕರಿಸಿಕೊಂಡಿದ್ದ ಸಂಗೀತ ಸಾರ್ವಭೌಮ ಶ್ರೀ ತ್ಯಾಗರಾಜರು ಹೇ ರಾಮ ನೀನಾಮಮು ಎಂತ ರುಚಿರಾ-ಎಮಿ ರುಚಿರಾ ಎಂಬ ಸಾವಿರಾರು ಸಂಕೀರ್ತನೆಗಳನ್ನು ಶ್ರೀರಾಮನವಮಿ ಸಂಗೀತೋತ್ಸವಗಳಲ್ಲಿ ಇಂದಿಗೂ ಕಾಣಬಹುದಾಗಿದೆ.

"ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ।
ಆರೂಹ್ಯ ಕವಿತಾ ಶಾಖಾಂ ವಂದೇ ವಾಲ್ಮೀಕಿ ಕೋಕಿಲಂ"

ಅಂದರೆ ಮರದ ಕೊಂಬೆಗಳ ಮೇಲೆ ಕುಳಿತು ಸವಿಯಾದ ಮಧುರವಾದ ಅಕ್ಷರಗಳಿಂದ ರಾಮ ರಾಮ ರಾಮ ಎಂದು ಉಲಿಯುತ್ತಿರುವ ವಾಲ್ಮೀಕಿ ಕೋಕಿಲ

ವನ್ನು ವಂದಿಸುತ್ತೇನೆನ್ನುವ ಈ ಕರ್ಣಾನಂದಕರ ಶ್ಲೋಕ ಎಷ್ಟೊಂದು ಸುಮಧುರ, ಎಂಥಾ ಭಾವಸಿಂಧೂರ! “ರಾಮ” ಎಂಬ ಎರಡಕ್ಷರಗಳ ಮೃದು ಮಧುರ ಸಂಗೀತ. ಅಂತಹ ಅಮೃತ ತುಂಬಿದೆ.

ರಾಮಾನಾಮ ಕಿವಿಗೆ ಬಿದ್ದರೆ ಸಾಕು ರಾಮಭಕ್ತರು ರೋಮಾಂಚನ ಗೊಳ್ಳುತ್ತಾರೆ.ಸಾಕ್ಷಾತ್ ಶ್ರೀರಾಮನನ್ನೇ ತಮ್ಮ ಮನಸ್ಸಿನಲ್ಲಿ ಸಾಕ್ಷಾತ್ಕರಿಸಿಕೊಂಡು ಪರಮಾನಂದಿತರಾಗುತ್ತಾರೆ.ಜೀವ-ಜೀವನವೆಲ್ಲಾ ರಾಮಾನಾಮಾಮೃತದಿಂದ ಪಾವನವಾಯಿತೆಂದು ಸಂತುಷ್ಟಗೊಳ್ಳುತ್ತಾರೆ.ಪವಿತ್ರ ತೀರ್ಥಕ್ಷೇತ್ರ ಕಾಶಿಯಲ್ಲಿ ದೇಹತ್ಯಾಗ ಮಾಡುವವರಿಗೆ ಕಾಶಿವಿಶ್ವನಾಥನೇ ಕಿವಿಯಲ್ಲಿ ರಾಮನಾಮ ಉಪದೇಶ ಮಾಡುತ್ತಾನೆಂಬ ನಂಬಿಕೆ ಭಾರತೀಯರಲ್ಲಿದೆ.

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆಯನ್ನು ವಿಠಲನೆಂಬ ತುಪ್ಪ ಬೆರೆಸಿ ಬಾಯಿ ಚಪ್ಪರಿಸಿರೋ ಎಂಬಂತೆ ರಾಮನಾಮಾಮೃತವನ್ನು ನಾಲಿಗೆಯಲ್ಲಿ ಹರಿದಾಡಿಸೋ ಶ್ರೀರಾಮಭಕ್ತಿ ಸುಧೆಯ  ಸಿಹಿ ಜೇನಿನ ಹಬ್ಬವೆಂದರೆ ಅತಿಶಯೋಕ್ತಿಯಾಗುವುದಿಲ್ಲ.

“ಶ್ರೀರಾಮ ರಾಮೇತಿರಮೇರಾಮೇ ಮನೋರಮೇ।
ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ॥

ರಾಮ ಎಂಬ ಒಂದೇ ನಾಮ ವಿಷ್ಣುವಿನ ಸಹಸ್ರನಾಮಗಳಿಗೆ ಸಮವೆಂದು ಪುರಾಣಗಳೇ ಸಾರಿ ಹೇಳುತ್ತವೆ. ಸರ್ವೋತ್ತಮನೆಂದರೆ, ಪರಿಪೂರ್ಣ ಶ್ರೇಷ್ಠ ಮನುಷ್ಯನೆಂದರೆ, ಮನುಷ್ಯನಿಂದಲೇ ದೇವನಾದನೆಂದರೆ ರಾಮ. ಅದೇ ರಾಮಶಕ್ತಿ,ರಾಮನಾಮದ ಧೀಶಕ್ತಿ. “ರಾಮಂ ಮಾನುಷಂ ಮನ್ಯೆ” ಎನ್ನುವುದರ ಮೂಲಕ ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ಶ್ರೀರಾಮನನ್ನು ಓರ್ವ ಸಾಮಾನ್ಯ ಮನುಷ್ಯನಾಗಿಯೇ ಚಿತ್ರಿಸಿ,ಸಾರ್ಥಕ ಬದುಕಿನ ಅವನ ನಡವಳಿಕೆಯಿಂದಲೇ ದೇವನನ್ನಾಗಿಸುತ್ತಾರೆ. ಇಡೀ ಸಂಪೂರ್ಣ ರಾಮಾಯಣವನ್ನೇ ನಾವು ಅವಲೋಕಿಸಿದರೆ ರಾಮನ ಚಿತ್ರಣದಲ್ಲೇ ಕುಟುಂಬ ವಾತ್ಸಲ್ಯದ ಚಿತ್ರಣವಿರುವುದನ್ನು ಕಾಣಬಹುದು. ದೇವನಾಗಿಯೂ ರಾಮ ತಾನೊಬ್ಬನೇ ಎಲ್ಲಿಯೂ ಪೂಜಿಸಿಕೊಳ್ಳುವುದಿಲ್ಲ. ಸೀತೆ ಮಾತ್ರವಲ್ಲದೆ ಆಂಜನೇಯ, ಲಕ್ಷ್ಮಣ, ಭರತ,ಶತೃಘ್ನರೂಡಗೂಡಿದ ದೇವತಾ ಸ್ವರೂಪವೇ ಇವತ್ತಿಗೂ ನಮ್ಮ ಕಣ್ಮುಂದಿನ ಚಿತ್ರವಾಗಿದೆ.ಗುಹನಲ್ಲಿ ಸೋದರ ವಾತ್ಸಲ್ಯ ತೋರಿದ, ಶಿಲೆಯಾದ ಅಹಲ್ಯೆಯನ್ನು ಉದ್ಧರಿಸಿದ,ಶಬರಿಯ ಎಂಜಲನ್ನು ತಿಂದ, ಆಯಸ್ಸು ಮುಗಿಯುವ ಮುನ್ನವೇ ಮಂತ್ರಿ ಸುಮಂತ್ರನನ್ನು ಮರಣಿಸುವಂತೆ ಮಾಡಿದ ಯಮನ ವಿರುದ್ಧವೇ  ಸಮರ ಸಾರಿ ಸುಮಂತ್ರನನ್ನು ಬದುಕಿಸಿದ ಅಳಿಲಿನ ಸೇವೆಯನ್ನೂ ಸಹ ಮುಖ್ಯವಾಗಿ ಕಂಡ ರಾಮನ ಮಹಾ ವ್ಯಕ್ತಿತ್ವಕ್ಕೆ ಸಾಟಿಯುಂಟೆ?

ರಾಮನ ಆದರ್ಶ ಬದುಕು ಅಂಥಾದ್ದು. ಹಾಗಾಗಿ ರಾಮನಾಮ ಸೀಮೋಲಂಘನ, ಸಾಗರೋಲಂಘನವಾಗಿ  ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ರಾಮ ಆರಾಧ್ಯ ದೈವವಾಗಿದ್ದಾನೆ.ರಾಮನನ್ನು ದಕ್ಷಿಣ ಏಷ್ಯಾದ ಸಾರ್ವಕಾಲಿಕ ಆದರ್ಶವೆಂದು ಖ್ಯಾತ ಸಂಶೋಧಕ, ವಿದ್ವಾಂಸ ಪ್ರೊ. ಡಬ್ಲ್ಯೂ. ಹೆಚ್.ಸ್ಟುಟರ್ ಹೀವ ಹೇಳಿದ್ದು, ಬಾಲಿ ದ್ವೀಪದ ರಾಮನ ಪೂಜೆಯ ಬಗ್ಗೆ ವಿವರಿಸುತ್ತಾ “ಇಲ್ಲಿ ರಾಮ ಕಥೆಯ ಸಾರಾಂಶ ಗೊತ್ತಿಲ್ಲದ ಒಬ್ಬ ಹುಡುಗನನ್ನು



ಕಾಣಲಾರಿರಿ. ಬೆಳೆದಂತೆಲ್ಲಾ ಅದನ್ನು ಸಂಪೂರ್ಣವಾಗಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪಾಠವನ್ನು ಇಲ್ಲಿ ಹೇಳಿ ಕೊಡಲಾಗುತ್ತದೆ” ಎಂದು ಅವರು ಉಲ್ಲೇಖಿಸಿದ್ದಾರೆ.

“ರಾಮಾಯ ರಾಮ ಭದ್ರಾಯಾ ರಾಮಚಂದ್ರಾಯ ವೇಧಸೇ
ರಘುನಾಥಾಯಾ ನಾಥಾಯಾ ಸೀತಾಯಾ ಪತಯೇ ನಮಃ”

ಇದು ರಾಮಾಯಾಣದಲ್ಲಿ ಬರುವ ದೃಷ್ಟಾಂತ, ಇಕ್ಷ್ವಾಕು ವಂಶದ ಅರ್ಥಾತ್ ಸೂರ್ಯವಂಶ ಸಾರ್ವಭೌಮ ದಶರಥ ಮಹಾರಾಜನಿಗೆ ಕೌಸಲ್ಯೆ, ಸುಮಿತ್ರೆ ಮತ್ತು ಕೈಕೇಯಿ ಎಂಬ ಮೂವರು ಪತ್ನಿಯರು. ಆದರೆ ಯಾರಿಗೂ ಮಕ್ಕಳಿರಲಿಲ್ಲ. ಹಾಗಾಗಿ ಕುಲಗುರು ವಶಿಷ್ಠ ಮಹರ್ಷಿ ಮತ್ತು ಪ್ರಧಾನ ಮಂತ್ರಿ ಸುಮಂತ್ರರ ಸಲಹೆಯ ಮೇರೆಗೆ ಪುತ್ರ ಕಾಮೇಷ್ಟಿಯಾಗ ಮಾಡಿದಾಗ ಮಹಾವಿಷ್ಣುವಿನ ಅನುಗ್ರಹ ಯಾಗದ ಪ್ರಸಾದವನ್ನು ದಶರಥ ಮಹಾರಾಜ ಸೇವಿಸಿ ಉಳಿದಿದ್ದನ್ನು ತನ್ನ ಮೂವರೂ ಪತ್ನಿಯರಿಗೂ ಹಂಚಿದ ಪರಿಣಾಮ ಕಾಲಕ್ರಮೇಣ ಮೂವರೂ ಗರ್ಭವತಿಯರಾಗಿ ಎಲ್ಲರೂ ಗಂಡು ಮಕ್ಕಳಿಗೆ ಜನ್ಮ ನೀಡುತ್ತಾರೆ. ಕೌಸಲ್ಯೆಯ ಹೊಟ್ಟೆಯಲ್ಲಿ ರಾಮ ಜನಿಸಿದರೆ, ಸುಮಿತ್ರೆಯಲ್ಲಿ ಲಕ್ಷ್ಮಣ-ಶತ್ರುಘ್ನ ಅವಳಿ ಮಕ್ಕಳು ಮತ್ತು ಕೈಕೇಯಿಯಲ್ಲಿ ಭರತ ಜನಿಸುತ್ತಾರೆ. ಶ್ರೀರಾಮ ಚೈತ್ರಮಾಸದ ಶುಕ್ಲ ಪಕ್ಷ ನವಮಿಯಂದು ಮಧ್ಯಾಹ್ನ ಪುನರ್ವಸು ನಕ್ಷತ್ರದಲ್ಲಿ ಮಹಾತೇಜಸ್ವಿಯಾಗಿ,ಜಗದ ಬೆಳಕಾಗಿ ಅವತರಿಸಿದ್ದು ಅದು ಶ್ರೀರಾಮ ನವಮಿಯಾಗಿ ಜಗತ್ತಿನಲ್ಲಿ ಪೂಜನೀಯ ಸ್ಥಾನ ಪಡೆದಿದೆ. ರಾಮಾವತಾರವು ವಿಷ್ಣುವಿನ ದಶಾವತಾರಗಳಲ್ಲಿ ಒಂದಾಗಿದ್ದು ಅನುಕ್ರಮಣಿಕೆಯಲ್ಲಿ ಏಳನೆಯದಾಗಿದೆ.

ಭಾರತೀಯ ಸಂಸ್ಕೃತಿ, ಸಂಪ್ರದಾಯ, ಪರಂಪರೆಗಳಲ್ಲಿ ಸಂಖ್ಯಾಶಾಸ್ತ್ರಕ್ಕೂ ಮಹತ್ವವಿದೆ. ಆ ಪ್ರಕಾರ ಸಂಖ್ಯೆ 'ಏಳು' ವಿಶೇಷ ಮಹತ್ವ ಪಡೆದು ಕೊಂಡಿದೆ. ರಾಮನ ವಿಷಯದಲ್ಲೂ ಏಳು ಬಹಳ ಮಹತ್ವವೆನಿಸಿದೆ, ವಾಲ್ಮೀಕಿ ಮಹರ್ಷಿಗಳಿಂದ ರಚಿತವಾದ ರಾಮಾಯಣ ಕೂಡ ಬಾಲಕಾಂಡ, ಅಯೋಧ್ಯಾ ಕಾಂಡ, ಅರಣ್ಯ ಕಾಂಡ, ಕಿಷ್ಕಿಂದಾಕಾಂಡ, ಸುಂದರಕಾಂಡ, ಯುದ್ಧ ಕಾಂಡ ಹಾಗೂ ಉತ್ತರಕಾಂಡಗಳೆಂಬ ಏಳು ಕಾಂಡ ಗಳಲ್ಲಿದೆ. ಶ್ರೀರಾಮನ ಜನ್ಮ ನಕ್ಷತ್ರ ಪುನರ್ವಸು.ಇದು ಸಪ್ತರ್ಷಿ ಮಂಡಲದಲ್ಲಿ ಏಳನೆಯದು.

ಶ್ರೀರಾಮನ ಆದರ್ಶಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ನಡೆದಾಗ ಮಾತ್ರ ಶ್ರೀ ರಾಮ ನವಮಿ ಆಚರಣೆಗೆ ನೈಜ ಅರ್ಥಸಿಕ್ಕಿದಂತಾಗುತ್ತದೆ.

**ರಾಮನೆಂಬ ನಾಮದೈವ**

ಮಹಾತ್ಮಗಾಂಧಿ ಅವರಿಗೆ ರಾಮನೊಂದು ಧ್ಯಾನ ದೈವ. ರಾಮರಾಜ್ಯ ಅವರ ಆದರ್ಶ. ರಾಮರಾಜ್ಯ (ವೆಲ್ಫೇರ್ ಸ್ಟೇಟ್),ರಾವಣನ ರಾಜ್ಯ (ಡಿಕ್ಟೇಟರ್ ಶಿಪ್) , ವಾನರ ರಾಜ್ಯ



(ಅವ್ಯವಸ್ಥಿತ ಅನಾರ್ಕಿ) ವಾಲ್ಮೀಕಿ ಋಷಿಯು ಕಲ್ಪಿಸಿದ ವಿಭಿನ್ನ ರಾಜ್ಯವ್ಯವಸ್ಥೆಗಳಾಗಿವೆ.ನಿಸ್ವಾರ್ಥಿಗಳಾದ ಎಂಟು ಮಂದಿ ಮಂತ್ರಿಗಳುಳ್ಳ ಮಂತ್ರಿಮಂಡಲ, ವಸಿಷ್ಟ, ವಾನದೇವರಂಥ ಮಾರ್ಗದರ್ಶಿ ವಿಚಾರ ಪುರುಷರು. ಸಜ್ಜಾದ ಚತುರ್ಬಲ ವ್ಯವಸ್ಥೆ. ಭೋಗವಿರಹಿತವಾದ ರಾಮನಂಥ ರಾಜನ ಜೀವನ ಕ್ರಮ. ಎಲ್ಲಕ್ಕಿಂತ ಮುಖ್ಯವಾಗಿ ಧರ್ಮದ ನೆಲೆಗಟ್ಟಿನ ಮೇಲೆ ನಡೆಯುವ ರಾಜಕೀಯ ವ್ಯವಸ್ಥೆ.ಎಲ್ಲೂ ಎಲ್ಲೆ ದಾಟದಂಥದ್ದು. ಅದಕ್ಕೆ ಅನು ಮರ್ಯಾದ ಪುರುಷೋತ್ತಮ.ಏಕಪತ್ನೀ ವ್ರತಸ್ಥ.ತಂದೆಯ ವಚನ ಉಳಿಸಲಿಕ್ಕಾಗಿ ಸಿಂಹಾಸನ ತ್ಯಾಗ ಮಾಡಿದ ಧರ್ಮಶೀಲ.ಸದಾ ಹಸನ್ಮುಖಿ. ತನ್ನನ್ನು ದೂರುವ ವರಲ್ಲೂ ಪ್ರೀತಿ ತೋರುವವನು. ಸ್ಮಿತಪೂರ್ವಭಾಷಿ. ಯಾರನ್ನೇ ಆಗಲಿ ನಗುನಗುತ್ತಾ ಮೊದಲು ಮಾತನಾಡಿಸುವವನು. ಯಾರೇ ಇರಲಿ ಶರಣಾದವರನ್ನು ರಕ್ಷಿಸುವವನು.ಇಷ್ಟಾ ಗಿಯೂ ತನ್ನ ಜೀವಿತದಲ್ಲಿ ರಾಮ ಕೈಗೊಂಡ ಕೆಲವು ನಿರ್ಣಯಗಳು ಪ್ರಶ್ನಾತೀತವೇನಲ್ಲ. ಶ್ರೀರಾಮ ಪರೀಕ್ಷಣವೂ ಕಾಲಕಾಲಕ್ಕೆ ನಡೆಯುತ್ತಲೇ ಬಂದಿದೆ. ಯಾರೂ ವಿಮರ್ಶಾ ತೀತರಲ್ಲ. ಕಾಲದ ಪರಿಪ್ರೇಕ್ಷ್ಯದಲ್ಲೇ ನಮ್ಮ ವಿಮರ್ಶೆಯ ಅನು ಸಂಧಾನವೂ ನಡೆಯ ಬೇಕಾಗಿದೆ. ರಾಮಕಥೆಯ ಹಂಗೇ ಇಲ್ಲದ ರಾಮನಾಮ ಸಂಕೀರ್ತನೆಯಿಂದಲೇ ಮೋಕ್ಷಸಾಧನೆ ಸಾಧ್ಯವೆಂದು ನಂಬುವ ಮಹಾಭಕ್ತರೂ, ಮಹಾನ್ ಕಲಾ ವಿದರೂ ನಮ್ಮಲ್ಲಿ ಆಗಿಹೋಗಿದ್ದಾರೆ.ನೀನ್ಯಾಕೊ ನಿನ್ನ ಹಂಗ್ಯಾಕೋ? ಎನ್ನುವ ದಾಸವಾಣಿ ಮತ್ತೆ ಕಿವಿಗಳಲ್ಲಿ ಗುಂಯ್ ಗುಡು ತ್ತಿದೆ.

**ರಾಮ ಮಂತ್ರದ ಮಹತ್ತು.**

ಆಧ್ಯಾತ್ಮ ಸಾಧನೆಯಲ್ಲಿ ರಾಮ ಮಂತ್ರಕ್ಕೆ ವಿಶೇಷ ಮಹತ್ವವಿದೆ. ಅಷ್ಟಿಲ್ಲದೇ ಪುರಂದರದಾಸರು 'ರಾಮ ಮಂತ್ರವ ಜಪಿಸೋ ಹೇ ಮನುಜಾ' ಎಂದದ್ದು. ದಾಸರು ಮುಂದು ವರಿದು' ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಬೇಡ. ಸೋಮ ಶೇಖರ ತನ್ನ ಭಾಮಿನಿಗೆ ಪೇಳಿದ ಮಹಾಮಂತ್ರ' ಎನ್ನುತ್ತಾರೆ. ದಾಸರ ಪದದ ಹಿಂದಿನ ಭಾವವನ್ನು ತಿಳಿಯ ಬೇಕಾದರೆ ಒಮ್ಮೆ ವಿಷ್ಣು ಸಹಸ್ರನಾಮದ ಈ ಶ್ಲೋಕದತ್ತ ನಮ್ಮ ಗಮನ ಹರಿಯಬೇಕು.ವಿಷ್ಣು ಸಹಸ್ರನಾಮ ಗಂಗಾ ಪುತ್ರ ಭೀಷ್ಮರಿಂದ ರಚಿಸಲ್ಪಟ್ಟ ಮಹಾಸ್ತೋತ್ರ. ವಿಷ್ಣು ಸಹಸ್ರ ನಾಮದಲ್ಲಿ 108 ಶ್ಲೋಕಗಳಿವೆ. 108 ಶ್ಲೋಕಗಳಲ್ಲಿ ಶ್ರೀಮನ್ ನಾರಾಯಣನ ಸಾವಿರ ನಾಮಗಳಿವೆ.ಸಹಸ್ರನಾಮದ ಫಲ ಶ್ರುತಿಯಲ್ಲಿ ಶಿವನು ಪಾರ್ವತಿಗೆ ರಹಸ್ಯಮಯವಾದ ಮಂತ್ರವೊಂದನ್ನು ಉಪ ದೇಶಿಸುತ್ತಾನೆ.ಅದೆಂದರೆ, 'ಶ್ರೀರಾಮ ರಾಮೇತಿ ರಮೇ ರಾಮೇ ಮನೋರಮೆ! ಸಹಸ್ರನಾಮ ತತ್ತುಲ್ಯಂ ರಾಮ ನಾಮ ವರಾನನೇ॥'ಅಂದರೆ ರಾಮ ರಾಮ ರಾಮ ಎಂದು ಮೂರಾ ವರ್ತಿ ಜಪಿಸು. ಶ್ರೀಮನ್‌ನಾರಾಯಣನ ಸಹಸ್ರನಾಮವನ್ನೇ

ಜಪಿಸಿದಂತಾಗುತ್ತದೆ ಎನ್ನುತ್ತಾನೆ ಪರಮೇಶ್ವರ. ಅಕ್ಷರ ಮಾಲಿಕೆಯ ಕೊನೆಯಲ್ಲಿ ಬರುವ 'ಯ, ರ,ಲ,ವ' ದಲ್ಲಿ 'ರ' ಎರಡನೆಯ ಅಕ್ಷರವಾಗಿದ್ದರೆ 'ವ' ಐದನೇಯ ಅಕ್ಷರ ವಾಗಿದೆ. ರಾಮ (2x5=10). ಮೂರಾವರ್ತಿ ರಾಮ ಎಂದಾಗ 10x10x10= 1000 ಬಾರಿ ಜಪಿಸಿದಂತಾಗುತ್ತದೆ ಎನ್ನುವುದೇ ಅದರ ಅರ್ಥ. ಅಮ್ಮ ಎನ್ನುವ ಪದವನ್ನು ವಿಶ್ಲೇಷಿಸಿದಂತೆ ಇದೀಗ ರಾಮ ಪದವನ್ನು ವಿಶ್ಲೇಷಿಸೋಣ. ರಾಮ ಎನ್ನುವ ಬೀಜಾಕ್ಷರ ಸ್ವಾಧಿಷ್ಠಾನ ಚಕ್ರದಲ್ಲಿ ಬರುತ್ತದೆ. ಸ್ವಾಧಿಷ್ಠಾನವು ಜಲತತ್ವ. ಅಂದರೆ ರಾ ಮತ್ತು ಮ ಎನ್ನುವುದು ಜಲತತ್ವವೇ. ಸ್ವಾಧಿಷ್ಠಾನ ಚಕ್ರವು ಪ್ರಾಣಮಯ ಕೋಶವನ್ನು ಜಾಗೃತ ಗೊಳಿಸುತ್ತದೆ. ಅಂದರೆ ಸ್ವಾಧಿಷ್ಠಾನ ಚಕ್ರದೊಳಗಿನ ಬೀಜಾ ಕ್ಷರವನ್ನು ಪಠಿಸುವ ಮೂಲಕ ಪ್ರಾಣಮಯ ಕೋಶವನ್ನು ಜಾಗೃತಗೊಳಿಸಬಹುದು. ಶರೀರದೊಳಗಿನ ಪ್ರಾಣಮಯವು ಜಾಗೃತವಾಗುವುದೆಂದರೆ ವಿವೇಕವು ಜಾಗೃತವಾದಂತೆ. ಈ ಸ್ಥಿತಿಯಲ್ಲಿ ಶರೀರವು ಎಚ್ಚರದ ಸ್ಥಿತಿಯಲ್ಲಿರುತ್ತದೆ. ಆಧ್ಯಾತ್ಮ ಭಾವದಲ್ಲಿ ನೋಡಿದಾಗ ಜಾಗೃತ್ ಸ್ಥಿತಿಯೇ ಸಾಧನೆಯ ಜಾಗೃತಗೊಂಡ ಮನಸ್ಸು ಮೋಹರಹಿತವಾಗಿರುತ್ತದೆ. ಸುತ್ತಣ ಪರಿಸರವನ್ನು ನೋಡಿ ಆನಂದಿಸುತ್ತದೆ. ಆ ಆನಂದ ದೊಳಗೆ ತನ್ನನ್ನು ಲೀನವಾಗಿಸಿಕೊಳ್ಳುತ್ತದೆ. ನಮ್ಮ ಋಷಿ, ಮುನಿಗಳು ಅಂತಹ ಸ್ಥಿತಿಯನ್ನೇ ದಿವ್ಯಾನುಭೂತಿ ಎಂದರು. ಆ ಕಾರಣದಿಂದಲೇ ರಾಮನು, ರಾಮ ನಾಮವು ಆನಂದ ಮಯವಾಗಿದೆ. ಆ ಮಾಲಿಕೆಯನ್ನು ಹೇಳುವಾಗ ಮನಸ್ಸು ಮುದ ಗೊಳ್ಳುತ್ತದೆ. ಆನಂದಭಾವವು ಸ್ಫುರಿಸುತ್ತದೆ. ರಾಮ ಎಂಬ ಒಂದೇ ನಾಮ ಮಹಾವಿಷ್ಣುವಿನ ಸಹಸ್ರನಾಮಗಳಿಗೆ ಸಮವೆಂದು ಪುರಾಣಗಳು ಸಾರಿ ಹೇಳುತ್ತಿವೆ. ಅದೇ ರಾಮ ನಾಮದ ಧೀ ಶಕ್ತಿ.

## ಶುದ್ಧ ಬ್ರಹ್ಮ ಪರಾತ್ಪರ ರಾಮ

ಆನಂದಮಯ ಈ ಜಗ ಹೃದಯ. ಅಂದರೆ ಸುತ್ತಣ ಪರಿಸರದೊಳಗೆ ಮಧುರಾಮೃತವೇ ತುಂಬಿಕೊಂಡಿದೆ. ರಾಮ ನಾಮವೇ ಪಾಯಸ ಎನ್ನುವ ದಾಸರ ಮಾತಿನಂತೆ, 'ರಾಮ ನಾಮವ ತಿಳಿ ತಿಳಿ' ಎನ್ನುವ ನಾಣ್ನುಡಿಯಂತೆ 'ಶುದ್ಧ ಬ್ರಹ್ಮ ಪರಾತ್ಪರ ರಾಮ' ಕಾವ್ಯ ಮಾಲಿಕೆ ಆನಂದ ವೃಷ್ಟಿಯ ಅನುಭವವನ್ನು ನಿಮ್ಮದಾಗಿಸುತ್ತದೆ.

ರಾಮ ಎನ್ನುವ ಪದದಲ್ಲಿ ಆನಂದವಿದೆ. ಈ ಆನಂದ ವನ್ನು ಮಂತ್ರ ಜಪ (13 ಅಕ್ಷರಗಳುಳ್ಳ ರಾಮ ಮಂತ್ರ) ದಲ್ಲಿ ಕಾಣುತ್ತಾರೆ. ಆದರೆ ಶ್ರೀ ಸಾಮಾನ್ಯರ ಮಟ್ಟಿಗೆ 'ಶುದ್ಧ ಬ್ರಹ್ಮ ಪರಾತ್ಪರ ರಾಮ, ಎನ್ನುವ ಸರಳ ರೂಪದ ಮಾಲಿಕೆಯೇ ಅಯ್ಯಾಯಮಾನ. ಅದುವೇ ಆನಂದದ ಸಾಯುಜ್ಯ. ವಾಲ್ಮೀಕಿ ರಾಮಾಯಣದ ಸಂಕ್ಷಿಪ್ತ ರೂಪ. ಶುದ್ಧ ಬ್ರಹ್ಮ ಪರಾತ್ಪರ ರಾಮ ಮೂಲಕೃತಿಕಾರರು ಯಾರು ಎಂಬುದು ಗೋಪ್ಯವಾಗಿದ್ದರೂ ಸ್ತೋತ್ರ ಮಾಲಿಕೆ ಮಾತ್ರ ಗೋವಿನ ಹಾಡಿ ನಷ್ಟೇ ಜನಜನಿತ. ಅದರಲ್ಲೂ ರಚ್ಚೆ ಹಿಡಿಯುವ ಮಕ್ಕಳ ಮನ ಸ್ಸನ್ನು ಹಿಡಿತಕ್ಕೆ ತರಲು ಸಿದ್ಧಕಾವ್ಯ ಸಾರ ಎಂಬುದೀಗ ಅಧ್ಯ ಯನಗಳಿಂದಲೂ ಸ್ಪಷ್ಟವಾಗಿದೆ. ಈ ಸ್ತೋತ್ರ ಮಾಲಿಕೆಯಲ್ಲಿ ಭಕ್ತಿರಸ, ಆನಂದ ರಸ, ಜ್ಞಾನರಸದ ಸಂಗಮವಿದೆ.

## ರಾಮ ರಾಮ ಜಯ ರಾಜಾರಾಮ

ಪರಬ್ರಹ್ಮ ಸ್ವರೂಪವಾಗಿ ಕಾಲತೀತನಾದ ಶ್ರೀರಾಮ ಚಂದ್ರನಿಗೆ ನನ್ನ ನಮನಗಳು ಎನ್ನುವ ಮೂಲಕ ಪ್ರಾರಂಭ ವಾಗುತ್ತದೆ. ರಾಮನೇ ಮಹಾವಿಷ್ಣುವು ಎನ್ನುವ ದೃಷ್ಟಿಯಲ್ಲಿ ಆತ ಶೇಷನಾಗುವ ಮೇಲೆ ಪವಡಿಸಿದ್ದಾನೆ. ಆತನ ಪಾದ ಕಮಲಗಳ ಅರ್ಚನೆಯನ್ನು ಮಾಡಲು ಎಲ್ಲರೂ ಉದ್ಯುಕ್ತ ರಾಗಿದ್ದಾರೆ. ಹೇ ಪ್ರಭು ಶ್ರೀರಾಮ ನೀನು ದಶರಥನ ಪುತ್ರ. ಮಾತೆ ಕೌಸಲ್ಯೆಗೆ ಅಪರಿಮಿತ ಸಂತೋಷವನ್ನು ತಂದೆ ವಿಶ್ವಾ ಮಿತ್ರನಿಗೆ ಅಗರ್ಭ ಸಂಪತ್ತಿನಂತೆ ದೊರೆತ ಹೀಗೆ ಕೃತಿಯ ಸಾಲುಗಳು ಸಾಗುತ್ತವೆ. ಒಂದೊಂದು ಚರಣವು ರಾಮ ರಾಮ ಜಯ ರಾಜಾರಾಮ। ರಾಮ ರಾಮ ಜಯ ಸೀತಾರಾಮ ಎಂಬ ಉದ್ಘೋಷದೊಂದಿಗೆ ಕೊನೆಗೊಳ್ಳುತ್ತದೆ. 'ಘೋರ ತಾಟಕ ಘಾತಕ ರಾಮ। ಮಾರೀಚಾದಿ ನಿಪಾತಕ ರಾಮ' ಎಂದರೆ ತಾಟ ಕಾಸುರನನ್ನು ಮಾರೀಚರಂತಹ ಅಸುರರನ್ನು ಸಂಹ ರಿಸಿದ ರಾಮನೇ ನಿನಗೆ ಶರಣು ಎನ್ನುತ್ತಾರೆ. ಹೀಗೆ ಪ್ರತಿ ಯೊಂದು ಸಾಲಿನಲ್ಲೂ ಭಗವದ್ಭಕ್ತಿ ಪ್ರತಿ ಬಿಂಬಿತವಾಗುತ್ತದೆ. ಶರಣಾಗತಿಯ ಹೊರತು ದಿವ್ಯ ಸಂದೇಶವನ್ನು ಸಾರುತ್ತದೆ. ಮುಖ್ಯವಾಗಿ ನಾವಿಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಇಡೀ ಮಾಲಿಕೆ ಪ್ರಾಸಬದ್ಧವಾಗಿದ್ದು ಎಲ್ಲಿಯೂ ರಸಾನು ಭೂತಿಗೆ ಅಡಚಣೆ ಉಂಟು ಮಾಡುವುದಿಲ್ಲ. ಮುಖ್ಯವಾಗಿ ರಾಮ ರಾಮ ಎನ್ನುವ ಮನಸ್ಸು ಶಾಂತವಾಗುತ್ತದೆ. ಚಂದ್ರನ ಬೆಳದಿಂಗಳಂತೆ ಸುತ್ತಣ ಪರಿಸರ ತಂಪಾಗುತ್ತದೆ. ಅರ್ಥಾತ್ ಪ್ರಫುಲ್ಲವಾಗುತ್ತದೆ. ಅಂತಹ ಪ್ರಫುಲ್ಲತೆಯಲ್ಲೇ ಮನಸ್ಸುಗಳು ಅರಳುತ್ತವೆ., ತಾಮಸಿಕ, ರಾಜಸಿಕ ಗುಣಗಳು ಶಾಂತವಾಗಿ ಸಾತ್ವಿಕ ಚಿಂತನಗಳು ವಿಕಾಸಗೊಳ್ಳುತ್ತವೆ. ಒಮ್ಮೆ ಸಾತ್ವಿಕ ಮನೋಭಾವ ಮೈದಳೆದಂತೆ ರಾಗ-ದ್ವೇಷಗಳು, ಕಾಮ - ಕ್ರೋಧಾದಿ ಅರಿಷಡ್ವರ್ಗಗಳು ಶಮನವಾಗುತ್ತವೆ. ರಾಮ ನಾಮದ ಮಹತ್ತು ಅಡಗಿರುದೇ ಈ ಅಂಶದಲ್ಲಿ!

ಯೋಗಸೂತ್ರದ ಪ್ರಕಾರ ಶರೀರವು ಪಂಚಭೂತಾತ್ಮಕ ವಸ್ತುವಿನಿಂದ (ಆಕಾಶ, ಪೃಥ್ವಿ, ಜಲ, ಅಗ್ನಿ, ವಾಯು), ಹತ್ತು ಬಗೆಯ ನಾಡಿಯಿಂದ ಏಳು ಬಗೆಯ ಧಾತುಗಳಿಂದ ಮಾಡ ಲ್ಪಟ್ಟಿದೆ. ಶರೀರ ಭಾವದಲ್ಲಿ ಏಳು ಚಕ್ರಗಳಿವೆ. ಅವೆಂದರೆ ಮೂಲಾಧಾರ, ಸ್ವಾಧಿಷ್ಠಾನ, ಅನಾಹುತ, ಮಣಿಪುರ, ಆಜ್ಞಾ, ವಿಶುದ್ಧಿ ಮತ್ತು ಸಹಸ್ರಾರ. ಪ್ರತಿಯೊಂದು ಚಕ್ರವೂ ಬೀಜಾ ಕ್ಷರಗಳು. ಅಂದರೆ ನಾವು ಉಚ್ಚರಿಸುವ ಪ್ರತಿಯೊಂದು

ಪದವೂ ಬೀಜಾಕ್ಷರದ ರೂಪವೇ. ಪ್ರತಿಯೊಂದು ಪದವೂ ಒಂದೊಂದು ಚಕ್ರದೊಳಗಿನ ಭಾವದ ಸಂಕೇತವೇ. ಅದುವೇ ಪ್ರಾಣವು.ಉಸಿರಾಟದ ಗತಿಯ ಸೂಚನೆ.ಒಂದು ಸಣ್ಣ ಉದಾಹರಣೆ ಮೂಲಕ ಈ ಅಂಶವನ್ನು ತಿಳಿದು ಕೊಳ್ಳೋಣ. ಅಮ್ಮ ಎನ್ನುವ ಪದವನ್ನೇ ತೆಗೆದುಕೊಳ್ಳಿ.ಅಮ್ಮ ಎನ್ನುವ ಪದವು ಎರಡು ಬೀಜಾಕ್ಷರಗಳಿಂದ ಕೂಡಿದೆ. ಅವೆಂದರೆ ಅ ಮತ್ತು ಮ. 'ಅ' ಎನ್ನುವುದು ವಿಶುದ್ಧ ಚಕ್ರದೊಳಗಿನ ಬೀಜಾಕ್ಷರ. 'ಮ' ಎನ್ನುವುದು ಸ್ವಾಧಿಷ್ಠಾನ ಚಕ್ರದ ಬೀಜಾಕ್ಷರ. ಅಮ್ಮ ಎನ್ನುವುದು ಪ್ರಜ್ಞಾವಂತಿಕೆ, ಆನಂದ ಭಾವವನ್ನು ಸೂಚಿಸುತ್ತದೆ. ವಿಶುದ್ಧ ಚಕ್ರವು ಜ್ಞಾನತತ್ತ್ವವಾದರೆ, ಸ್ವಾಧಿಷ್ಠಾನವೂ ಜಲತತ್ತ್ವವಾಗಿದೆ. ಇವೆರಡರ ಸಮ್ಮಿಲನವೇ ಪ್ರಜ್ಞಾವಂತಿಕೆ, ಆನಂದದ ಭಾವ. ಜಲತತ್ತ್ವವೇ ಸೃಷ್ಟಿಯ ಮೂಲ. ಸೃಷ್ಟಿಯ ಆರಂಭದೊಡನೆ ಜೀವಜಗತ್ತು ಸಂಭ್ರಮಿಸುತ್ತದೆ. ಸುತ್ತಣ ಪರಿಸರದಲ್ಲಿ ಆನಂದವನ್ನು ಹರಡುತ್ತದೆ.ಅಂತೆಯೇ ಮಗುವಿನ ಜನ್ಮವು. ಕತ್ತಲಿನಿಂದ ಬೆಳಕಿಗೆ ಬಂದ ಕೂಡಲೇ ಮಗು ಪ್ರಜ್ಞಾವಂತಿಕೆಯಿಂದ ಇರುವಿಕೆಯನ್ನು ವ್ಯಕ್ತಪಡಿಸುತ್ತದೆ. 'ಅಮ್ಮಾ' ಎಂದು ಕೂಗುತ್ತದೆ. ಅಮ್ಮ ಎಂದರೆ ಏನೋ ಹರುಷ!. ಮತ್ಯಾವುದೇ ವಸ್ತುವಿನಿಂದ ಸಿಗದ ಆನಂದ ಅಲ್ಲಿ ದೊರೆಯುತ್ತದೆ.ಕಾರಣ ಈ ಪದ ಪ್ರಯೋಗವು ಪ್ರಜ್ಞಾಪೂರ್ವಕವಾಗಿ ಬಂದದ್ದು. ಅಂದರೆ ಪ್ರಜ್ಞೆಯೊಳಗೇ ಆನಂದವಿದೆ ಎನ್ನುವುದೀಗ ಸ್ಪಷ್ಟವಾಯಿತು. ಆದರೆ ನಾವಿಂದು ಮಾಡುತ್ತಿರುವುದಾದರೂ ಏನು? ಕಣ್ಣಿನ ವಸ್ತುಗಳಲ್ಲಿ ಆನಂದವನ್ನು ಕಾಣಲು ಬಯಸುತ್ತಿದ್ದೇವೆ. ಅಂತೆಯೇ ಕಲವೊಂದು ಪದ ಪ್ರಯೋಗಗಳು ನಮ್ಮನ್ನು ತೀರಾ ಖಿನ್ನರಾಗುವಂತೆ ಮಾಡುತ್ತದೆ ಅಥವಾ ಮನದೊಳಗಿನ ಶಾಂತತೆಯನ್ನು ಹಾಳುಗೆಡುವುತ್ತದೆ ಅಥವಾ ಉದ್ವಿಷ್ನಗೊಂಡ ನರನಾಡಿಗಳು ರೋಷಾವೇಶಕ್ಕೆ ಕಾರಣವಾಗುತ್ತವೆ.ಇದೇಕೆ ಹೀಗೆ? ಎನ್ನುವುದಕ್ಕೂ ಮೇಲಿನ ಉದಾಹರಣೆಯೇ ವಿವರಣೆಯಾಗಬಹುದೇನೋ! ಈ ನಿಟ್ಟಿನಲ್ಲಿ ಮತ್ತಷ್ಟು ಅಧ್ಯಯನಗಳು ನಡೆಯಬೇಕಿವೆ.

ಕನ್ನಡ ಸ್ವರಾಕ್ಷರಗಳಲ್ಲಿ ರಾಮಾಯಣ

ಅ - ಅಯೋಧ್ಯೆಯ ರಾಜ ದಶರಥ,

ಆ - ಆತನ ಮಗನೇ ಶ್ರೀರಾಮಚಂದ್ರ,

ಇ - ಇವನ ಮಡದಿ ಸೀತಾಮಾತೆ,

ಈ - ಈಕೆ ಜನಕರಾಜನ ಮಗಳು,

ಉ - ಉತ್ತಮ ಆದರ್ಶ ಇವರ ಜೀವನ,

ಊ - ಊರಿನಲ್ಲಿ ಪ್ರತಿಯೊಬ್ಬರಿಗೂ ಇವರನ್ನು ಕಂಡರೆ ಪ್ರೀತಿ,

ಋ- ಋಷಿಗಳಿಗೆ ಈ ನಾಡು ತಪೋ ಭೂಮಿಯಾಗಿತ್ತು.

ಎ- ಎಲ್ಲರೂ ರಾಮ ಸೀತೆಯನ್ನು ತುಂಬಾ ಗೌರವಿಸುತ್ತಾರೆ.

ಏ- ಏಕಾಏಕಿ ಅಡಚಣೆಯೊಂದು ಬಂತು

ಐ- ಐಕ್ಯತೆ ಒಡೆಯಿತು.

ಒ- ಒಂದೇ ಮಾತಿನಿಂದ ಕೈಕೆ ರಾಮನನ್ನು ಕಾಡಿಗೆ ಅಟ್ಟಿದಳು.

ಓ- ಓಬ್ಬ ಕೈಕೆಯ ಮಗನಾದ ಭರತನಿಗೆ ಪಟ್ಟ ಕಟ್ಟುವಂತೆ ಆಕೆಯ ಹಠ.

ಔ- ಔದಾರ್ಯ ಭರತ ಕಾಡಿನಲ್ಲಿ ರಾಮನ ಕಂಡು ಕೊನೆಗೆ ಆತನ ಪಾದುಕೆಯನ್ನು ಹೊತ್ತು ತಂದ.


ಅಂ- ಅಂಜಲಿಬದ್ಧವಾಗಿ ಶ್ರೀರಾಮನ ಪಾದುಕೆಗೆ ಪಟ್ಟ ಕಟ್ಟಿ ಭರತ ರಾಜ್ಯಭಾರ ನಡೆಸಿದ.

ಅಃ- ಅಃ ಅದೆಂತಹ ಸೋದರ ಪ್ರೇಮ ಭರತನದು.


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



# ಚಿಗುರಿ ಅರಳಿ ಮರಳಿ ಯುಗಾದಿ

- ಶ್ರೀಮತಿ. ಕೆ.ವಿ. ಪದ್ಮಾವತಿ

ಋತುಗಳ ರಾಜ ವಸಂತ. ವಸಂತದ ರಾಜ ಚೈತ್ರ. ಕುಸುಮಾಕರ ಶ್ರೀಕೃಷ್ಣ, "ತಾನೇ ವಸಂತ" ಎಂದು ಗೀತೆಯಲ್ಲಿ ಆಶ್ವಾಸನೆ ನೀಡಿದ್ದಾನೆ. ಚೈತ್ರ ಮಾಸದ ಅಧಿದೇವ ಶ್ರೀ ವಿಷ್ಣು ಎಂದು ಶಾಸ್ತ್ರಗ್ರಂಥಗಳು ಗುರುತಿಸುತ್ತವೆ. ಚೈತ್ರ ಶುದ್ಧಪಾಡ್ಯಮಿಯೆ ದ್ವಾಪರಯುಗ ಮುಗಿದು ಕಲಿಯುಗ ಆರಂಭವಾಗುವ ಮಹತ್ತ್ವದ ದಿವಸ. ಯುಗ ಆರಂಭವಾದ ದಿನ ಆದ್ದರಿಂದ ಪ್ರತಿ ಸಂವತ್ಸರದ ಆರಂಭದ ದಿನವನ್ನು 'ಯುಗಾದಿ' ಎಂದು ಸ್ಮರಿಸಿ ಹಬ್ಬವನ್ನಾಚರಿಸಿ ಸಂಭ್ರಮಿಸುವುದು.

ಯುಗಾದಿ - ಸಂವತ್ಸರದ ಮೊದಲನೆಯ ದಿನವಷ್ಟೆ. ಇನ್ನು ವರ್ಷ ಅಥವಾ ಸಂವತ್ಸರವೆಂದರೇನೆಂಬುದನ್ನು ನೋಡೋಣ. ಸೂರ್ಯನು ಕೇಂದ್ರ ಬಿಂದುವಾದರೆ, ಅವನ ಸುತ್ತ ಸುತ್ತುವ ಭೂಗ್ರಹಕ್ಕೆ ಅವನ ಸುತ್ತ ಒಂದು ಸುತ್ತು ಬರಲು ಒಂದು ವರ್ಷ ಬೇಕಾಗುತ್ತದೆ. ಅದೇ ಸೂರ್ಯನ ಸುತ್ತ ಸುತ್ತಲು ಗುರುವಿಗೆ ಹನ್ನೆರಡು ವರ್ಷಗಳೂ, ಶನಿಗ್ರಹಕ್ಕೆ ಮೂವತ್ತು ವರ್ಷಗಳೂ ಬೇಕಾಗುತ್ತವೆ. ಹೀಗಾಗಿ ಭೂಮಿ, ಬುಧ ಮತ್ತು ಶನಿ ಗ್ರಹಗಳು ಒಂದೇ ಆರಂಭ ಬಿಂದುವಿಗೆ ಬರಲು, 12x5 ಅರವತ್ತು ವರ್ಷಗಳು ಬೇಕಾಗುತ್ತವೆ. ಭಾರತೀಯ ಜ್ಯೋತಿಷಿಗಳು ಈ ವರ್ಷಗಳನ್ನನುಸರಿಸಿ ಅರವತ್ತು ಸಂವತ್ಸರಗಳ ನಿರ್ಣಯ ಮಾಡಿರುತ್ತಾರೆ. ಖಗೋಳವಿಜ್ಞಾನದ ಲೆಕ್ಕಾಚಾರ ಭಾರತೀಯ ಪಂಚಾಂಗ ಕರ್ತರ ಕಾಲ ಚಕ್ರ ನಿರ್ಣಯಕ್ಕೆ ಪೂರಕವಾಗಿರುವುದು ಗಮನಾರ್ಹ. ಪ್ರಸ್ತುತ 32 ನೇಯ ವಿಳಂಬಿವರ್ಷ.

ಭಾರತದಲ್ಲಿ ಸೌರಮಾನ ಹಾಗೂ ಚಾಂದ್ರಮಾನ ಇವೆರಡರ ಹಿನ್ನೆಲೆಯಲ್ಲಿ ಮಾಸ-ತಿಥಿಗಳನ್ನು ನಿರ್ಣಯಿಸುವ ಸಂಪ್ರಾದಾಯವಿರುವುದರಿಂದ, ಯುಗಾದಿಯ ದಿನಗಳು ಸ್ವಲ್ಪ ಹೆಚ್ಚು ಪ್ರಚಲಿತವಿರುವ ಕರ್ನಾಟಕ, ಆಂಧ್ರಪ್ರದೇಶಗಳಿಗೆ ಯುಗಾದಿ ಚೈತ್ರ ಪಾಡ್ಯದಂದೆ ಬಂದರೆ ಸೌರಮಾನ ಪಂಚಾಂಗವನ್ನು ಅನುಸರಿಸುವ ತಮಿಳುನಾಡಿಗರಿಗೆ ಚಿತ್ತಿರೈ ಅಥವಾ ಮೇಷಮಾಸದ ಮೊದಲ ದಿನ ಬರುತ್ತದೆ. ಈ ವ್ಯತ್ಯಾಸವೇನೇ ಇದ್ದರೂ ಯುಗದ ಹುಟ್ಟುಹಬ್ಬದ ದಿನವೇ 'ಯುಗಾದಿ ಆಚರಣೆ' ಎಂಬುದು ನಿಶ್ಚಿತ.

'ಯುಗಾದಿ' - ಹೀಗಾಗಿ ಒಂದು ಪರ್ವ ದಿನ ಹಾಗೂ ಮೈಲಿಗಲ್ಲಿನ ದಿನ. ಬದುಕಿನ ರಸ್ತೆಯ ಈ ಮೈಲಿಗಲ್ಲು ಬಳಿ ಒಂದು ದಿನ ನಿಂತು ವೈಯುಕ್ತಿಕ ಬದುಕು ಸಾಗಿ ಬಂದ ಪರಿಯನ್ನು ಅವಲೋಕಿಸಬೇಕು. ಅವರಿಗೆ ಬದುಕಿನ ಸಂಕಷ್ಟಗಳು, ಸಾಧನೆಗಳು, ಜಯಾಪಜಯಗಳು - ಇವುಗಳನ್ನು ಮಥನ ಮಾಡುವುದರ ಮೂಲಕ ಮುಂದಿನ ಹಾದಿಯನ್ನು ಗುರುತಿಸಿಕೊಳ್ಳಬೇಕು. ಆ ಹಾದಿಯಲ್ಲಿ ಎಲ್ಲವೂ ಸುಖಮಯವೇ ಆಗಿರಬೇಕೆಂದಿಲ್ಲ. ಆ ಹಾದಿ ಹೂವಿನ ಸುಪ್ಪತ್ತಿಗೆಯೋ ಅಥವಾ ಮುಳ್ಳಿನ ಮಂಚವೋ ತಿಳಿಯದು. ಆದರೆ ಬದುಕಿನ ದೋಣಿ, ಅಲೆಗಳ ಉಬ್ಬರವಿಳಿತಗಳನ್ನೆದುರಿಸಿ ಮುಂದೆ ಸಾಗಬೇಕಷ್ಟೇ! ಅವೆಲ್ಲವನ್ನೂ ಸಮತ್ವದಿಂದ ಸ್ವೀಕರಿಸಬೇಕಷ್ಟೇ; ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನೇ ಹೇಳಿಲ್ಲವೆ -'ಸಮತ್ವವೇ ಯೋಗ' ವೆಂದು. ಹೀಗಾಗಿ ಈ ಹಬ್ಬದ ದಿನದ ಆಚರಣೆ ಅತಿ ಮಹತ್ತ್ವದ್ದು. ಹಬ್ಬದ ಉಷಃಕಾಲದಲ್ಲಿ ಎದ್ದು, ಸೂರ್ಯೋದಯಕ್ಕೆ ಮುನ್ನ, ಆದಿತ್ಯ ಸ್ಮರಣೆ ಮಾಡಬೇಕು.

ನಮಸ್ಸವಿತ್ರೇ ಜಗದೇಕ ಚಕ್ಷುಸೇ
ಜಗತ್ಪ್ರಸೂತಿ ಸ್ಥಿತಿ ನಾಶ ಹೇತವೇ
ತ್ರಯೀಮಯಾಯ ತ್ರಿಗುಣಾತ್ಮಧಾರಿಣೇ
ವಿರಿಂಚಿ ನಾರಾಯಣಾ ಶಂಕರಾತ್ಮನೇ

ಅನಂತರ ದೇಹದ ಕೊಳೆಯನ್ನು ತೊಳೆಯಲು ತೈಲ ಲೇಪಿಸಿ ಅಭ್ಯಂಜನ ಸ್ನಾನ ಮಾಡಬೇಕು. ಮನೆಯ ಮುಖ್ಯ ದ್ವಾರವನ್ನು ಮಾವು - ಬೇವು ಪತ್ರೆಗಳಿಂದ ಸಿಂಗರಿಸಿ ಹೊಸ್ತಿಲಿಗೆ ಕುಂಕುಮ ಹಚ್ಚಿ ಸರಸ್ವತಿ - ಲಕ್ಷ್ಮೀಯನ್ನು ಆಹ್ವಾನಿಸಬೇಕು. ಅನಂತರ ಪೂಜಾಗೃಹದಲ್ಲಿ ಇಷ್ಟ ದೇವರನ್ನು ಪ್ರತಿಷ್ಠಾಪಿಸಿ ಯಥಾಶಕ್ತಿ ಅರ್ಚಿಸಬೇಕು. ಇಷ್ಟ ದೇವತಾ ಪೂಜೆಯ ಅನಂತರ ತಮ್ಮ ಸಂಪ್ರದಾಯ ರೀತ್ಯ ನೂತನ ವರ್ಷದ ಪಂಚಾಂಗ-ಆದಿಲ್ಲವಾದರೆ ನೂತನ ವರ್ಷದ

ದಿನದರ್ಶಿಕೆಯನ್ನಿಟ್ಟು ಕುಂಕುಮ ಹಳದಿಗಳನ್ನು ಲೇಪಿಸಿ ಬೇವು-ಬೆಲ್ಲ ನೈವೇದ್ಯವನ್ನು ಸಮರ್ಪಿಸಿ, ಆ ಬೇವು - ಬೆಲ್ಲ ವನ್ನು

ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ।
ಸರ್ವಾರಿಷ್ಟ ವಿನಾಶಾಯ ನಿಂಬಕಪದಳ ಭಕ್ಷಣಂ॥

ಎಂಬ ಶ್ಲೋಕವನ್ನು ಹೇಳುತ್ತಾ ಸೇವಿಸಬಹುದು. ಸರ್ವ ಕಷ್ಟಗಳ ನಿವಾರಣೆ, ಸಂಪತ್ತು ಪ್ರಾಪ್ತಿ, ಸದೃಢ ಆರೋಗ್ಯ ನೂರು ವರ್ಷಗಳ ಆಯುಸ್ಸು ಪ್ರಧಾನಕ್ಕಾಗಿ ಈ ಪ್ರಸಾದ ಸೇವನೆ.ಬೇವು ಕಹಿ ಅಥವಾ ಕಾರ್ಪಣ್ಯದ ಪ್ರತೀಕ ವಾದರೆ, ಬೆಲ್ಲ ಸಿಹಿ ಅಥವಾ ಸಂತೋಷದ ಪ್ರತೀಕ. ಈ ಕಹಿ-ಸಿಹಿ ಮಿಶ್ರಣದ ಸೇವನೆ ಬದುಕಿನಲ್ಲಿ ಮಾನಸಿಕ ಸದೃಢತೆಗಾಗಿ.

**ಯುಗಾದಿ ಹೊಸತು ತರುತ್ತಿದೆ**

ಬೇವು-ಬೆಲ್ಲ ಸೇವನೆಯ ಅನಂತರ ಪಂಚಾಂಗ ಶ್ರವಣ.ಇದರ ಗುರಿ ಬರುವ ವರ್ಷದ ಬಗ್ಗೆ ಆಶಾದಾಯಕ ಭಾವನೆ ಹೊಂದಲು.ಜ್ಯೋತಿಷ್ಯಶಾಸ್ತ್ರದ ಪ್ರಕಾರ ಪಂಚಾಂಗ ಶ್ರವಣದಿಂದ ಮುಂದಿನ ವರ್ಷದ ವಿಪತ್ತುಗಳನ್ನು ತಿಳಿದು, ಅದರ ನಿವಾರಣೆಗಾಗಿ ಮುನ್ನೆಚ್ಚರಿಕೆಯ ಕರ್ಮಗಳನ್ನು ಪಾಲಿಸಲು.ನಮ್ಮ ವೈಯುಕ್ತಿಕ ಜನ್ಮದಿನವನ್ನು ಪ್ರತಿ ಸಂವತ್ಸರವೂ ನೆನಪಿಸಿಕೊಂಡು ವಿಜೃಂಭಣೆಯಿಂದ ಆಚರಿಸುವಾಗ ಮನುಕುಲದ ಸೃಷ್ಟಿಚಕ್ರದ ಯುಗದ ಆರಂಭ ದಿನವನ್ನು ಸಂತಸದಿಂದ ಆಚರಿಸುವುದು ಅತ್ಯಂತ ಸಮಂಜಸವೇ ಸರಿ. ವಿಶ್ವದ ಅನೇಕ ದೇಶಗಳು ಹೊಸ ವರ್ಷವನ್ನು ಆಚರಿಸುವ ದಿನಕ್ಕೂ ಭಾರತೀಯರು'ಯುಗಾದಿ'ಯನ್ನು ಸಂಭ್ರಮಿಸುವುದಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದರೆ ನಮ್ಮ ಹೊಸ ವರ್ಷ'ಪ್ರಕೃತಿ'ಯ ಹೊಸತನದೊಂದಿಗೆ ಮೈಗೂಡಿಸಿಕೊಂಡಿರುವುದು.ಶಿಶಿರ ಋತುವಿನಲ್ಲಿ ಹಣ್ಣಾದ ಎಲೆಗಳು ಉದುರಿ ಹೊಸ ಎಲೆಗಳು ಚಿಗುರಲಾರಂಭಿಸಿದರೆ, ವಸಂತದಲ್ಲಿ ಅವು ನಳನಳಿಸುವ ಹೂಗಳಾಗಿ ಅರಳುವ ಸಮಯ. ಆಗ ಬೀಸುವ ಮಾರುತವೂ ಅಷ್ಟೇ.ಸುವಾಸನೆಯನ್ನು ಹೊತ್ತು ತರುವ ಆ ಗಾಳಿ ಮೈಮನಗಳಿಗೆ ಆಹ್ಲಾದಕರ. ಎಂತಹ ಜಡ ಜೀವಿಯನ್ನೂ ಬಡಿದೆಬ್ಬಿಸಿ ಚೈತನ್ಯ ತುಂಬಿಸುವ ಚೇತೋಹರಿ ಸಮಯ. ಹಕ್ಕಿಗಳ ಚಿಲಿಪಿಲಿ ಗಂಧರ್ವ ಗಾಯನದಂತೆಯೇ ಮಧುರ. ಈ ಸೊಬಗನ್ನು ಕವಿ ವರ್ಣಿಸುವ ಪರಿನೋಡಿ:

ವಸಂತ ಬಂದ, ಋತುಗಳ ರಾಜ ತಾ ಬಂದ
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ
ಚಳಿಯನ್ನು ಕೊಂದ, ಹಕ್ಕಿಗಳುಲಿಗಳ ಚಂದ
ಕೂವು ಜಗ್ ಜಗ್, ಪುವ್ವೀಟುವಿಟ್ಟವೋ। (ಬಿ.ಎಂ.ಶ್ರೀ.)

ಇಂತಹ ವಸಂತದ ಆರಂಭದ ದಿನವನ್ನು ಯುಗದ ಮೊದಲ ದಿನವೆಂದು ಗುರುತಿಸಿ ಪರಮಾತ್ಮ - ಪ್ರಕೃತಿ - ಪುರುಷ ಸಂಬಂಧವನ್ನು ಬೆಸೆಯುವ, ಲೌಕಿಕದಿಂದ ಪಾರಮಾರ್ಥಿಕ ಜಗತ್ತಿಗೆ ಸೇತುವೆನಿಸುವ ಕೊಂಡಿ ಈ ಹಬ್ಬ ಎಂದರೆ ತಪ್ಪಾಗಲಾರದು.ಯುಗಾದಿ ಹಬ್ಬದಿಂದ ಆರಂಭವಾಗುವ ಚೈತ್ರಮಾಸಕ್ಕೆ ತನ್ನದೇ ಆದ ವಿಶಿಷ್ಟತೆಗಳುಂಟು. ಚೈತ್ರಮಾಸದ ಮೊದಲ ದಿನ ಶ್ರೀಕೃಷ್ಣನ ನಿರ್ಯಾಣವಾದ ಮಹತ್ವವದ ದಿನವಾದರೆ ಬಿದಿಗೆ ಶ್ರೀ ಮನ್ನಾರಾಯಣನ ದಶಾವತಾರವಾದ ದಿನ. ಅಂದಿನ ಯುಗ ಧರ್ಮಕ್ಕೆ ತಕ್ಕ ಹಾಗೆ, ಪ್ರಕೃತಿಯಲ್ಲಿ ಜೀವೋತ್ಪತ್ತಿ ವಿಕಸಿತವಾದ ಹಾಗೆ ಜಲಚರ ಮತ್ಸ್ಯ ರೂಪಿಯಾಗಿ ಶ್ರೀಹರಿ ವೇದಗಳನ್ನು ಭೂಮಿಗೆ ತಂದನಂತೆ. ತದಿಗೆ ಗೌರಿಗೆ ಮೀಸಲಾದ ಹಬ್ಬವಾದರೆ ಚತುರ್ಥಿ ಗಣೇಶ ಅವತರಿಸಿದ ದಿನ. ನಾಗದೇವತೆಗಳು ಪಂಚಮಿಯಲ್ಲಿ ಪ್ರತ್ಯಕ್ಷರಾದರೆ ಸ್ಕಂದ ಧರೆಗಿಳಿದದ್ದು ಷಷ್ಠಿಯಂದು. ಚೈತ್ರ ಶುಕ್ಲ ಸಪ್ತಮಿಯಂದು ಸೂರ್ಯಾರಾಧನೆ. 'ಆದಿತ್ಯ ಹೃದಯಂ' ದ ಪಠಣ ಫಲಪ್ರದಾಯಕ ಎಂಬ ನಂಬಿಕೆ ಪಂಚಾಂಗ ಕರ್ತರದು.ಅಷ್ಟಮಿ ಸಪ್ತ ಮಾತೃಕೆಯರ ಪೂಜೆಗೆ ಮೀಸಲು. ನವಮಿಯ ದಿನವೇ ಮರ್ಯಾದಾ ಪುರುಷೋತ್ತಮ ಶ್ರೀರಾಮ ಜನ್ಮದಿನ. ಆ ದಿನ ಮನೆಯ ಉತ್ತರ ಭಾಗದಲ್ಲಿ ಮಂಟಪ ನಿರ್ಮಿಸಿ, ಅದನ್ನು ಬಾಳೆಯಕಂಬ ಮಾವಿನ ಎಲೆಗಳಿಂದ ಅಲಂಕರಿಸಬೇಕು.ಸೀತಾಮಾತೆ ಸಮೇತ ಶ್ರೀರಾಮನ ಪ್ರತಿಮೆಯನ್ನು ಮಾಡಿಸಿ ಮಂಟಪದಲ್ಲಿ ಅದನ್ನು ಪ್ರತಿಷ್ಠಾಪಿಸಿ ಷೋಡಶೋಪಚಾರಗಳಿಂದ ಪೂಜಿಸಿ,ಆ ಪ್ರತಿಮೆಯನ್ನು ಸತ್ಪಾತ್ರರಿಗೆ ದಾನ ಮಾಡಬೇಕೆಂಬುದು ಶಾಸ್ತ್ರವಿಧಿತ. ಪ್ರತಿಮೆಯಲ್ಲಿರುವ ಶ್ರೀರಾಮನ ಬಲಹಸ್ತ ಜ್ಞಾನ ಮುದ್ರೆಯಲ್ಲಿದ್ದ ಎಡ ಹಸ್ತ ಮಾತೆಯನ್ನು ಸುತ್ತುವರಿದಿರಬೇಕು. ಸೀತಾದೇವಿ ಶ್ರೀರಾಮನ ತೊಡೆಯ ಮೇಲೆ ವಿರಾಜಮಾನಳಾಗಿರಬೇಕು. ಪ್ರತಿಮೆಯನ್ನು ಚಿನ್ನದಲ್ಲಿಯಾಗಲಿ,ಬೆಳ್ಳಿಯಲ್ಲಾಗಲಿ ಯಥಾಶಕ್ತಿ ಅಳತೆಯಲ್ಲಿ ಮಾಡಿಸಿದರೆ ಸಾಕು.ಸಂಪ್ರದಾಯಸ್ಥರು ಶ್ರೀರಾಮನಿಗೆ ಅರ್ಘ್ಯಪ್ರಧಾನ ಮಾಡುವುದೂ ಉಂಟು. ದಶಮಿ ಧರ್ಮರಾಜನ ಪೂಜೆಗೆ ಮೀಸಲು. ಚೈತ್ರ ಶುದ್ಧ ಏಕಾದಶಿಯೂ ಪವಿತ್ರವೆ. ಆ ದಿನ ಶ್ರೀ ಕೃಷ್ಣನಿಗೆ ತೊಟ್ಟಿಲು ಪೂಜೆ ಮಾಡಿ, ಗೀತ ಗಾಯನದಿಂದ ಅವನನ್ನು ಸಂತುಷ್ಟಗೊಳಿಸಿ, ನಾಟ್ಯ ಮಾಡಿ ರಂಜಿಸಬೇಕು. ಆ ದಿನ ರಾತ್ರಿ ತ್ರಯೋದಶಿ ಕಾಮ ರೂಪಿಯಾದ ಮನ್ಮಥನ ಸೇವೆಗೆ ಪ್ರಶಸ್ಥ. ಚತುರ್ದಶಿಯಂದು ಶಿವಾರಾಧನೆಯಾದರೆ ಹುಣ್ಣಿಮೆ ದೇವೇಂದ್ರ-ಶಚಿಯರ ಸ್ಮರಣೆಗೆ ಮೀಸಲು. ಚೈತ್ರಮಾಸದ ಹುಣ್ಣಿಮೆಯಂದು ಹನುಮನ ಜಯಂತಿ ಈ ದಿನದಂದೆ. ಕೆಲವು ವರ್ಗದ ಜನರು ಚಿತ್ತಗುಪ್ತನ ಪೂಜೆಯನ್ನು ಮಾಡುವುದು ಹುಣ್ಣಿಮೆಯಂದೆ.

ಚೈತ್ರಮಾಸದ ಮತ್ತೊಂದು ಹೆಸರು ಮಧುಮಾಸ. ಮಧು ಎಂದರೆ ಜೇನುತುಪ್ಪ. ಆ ಮಾಸ ಜೇನಿನಷ್ಟೇ ಮಧುರ, ಸ್ವಾದಿಷ್ಟ ಹಾಗೂ ಆಹ್ಲಾದಕರ. ಸೂರ್ಯ ಮೇಷರಾಶಿಗೆ ಪ್ರವೇಶಿಸುವುದರಿಂದ ಇದು 'ಮೇಷ ಸಂಕ್ರಮಣ'ದ ಪರ್ವ ಸಮಯ. ಹಾಗಾಗಿ 'ವಿಷು' ಹಬ್ಬದ ಆಚರಣೆಯೂ ಈ ಸಂದರ್ಭದಲ್ಲಿಯೇ. ಈ ಮಾಸದ ದೇವತೆ 'ವಿಷ್ಣು' ವಾದುದರಿಂದ 'ವಿಷ್ಣು ಮಾಸ' ವೆಂದು ಹೆಗ್ಗಳಿಕೆಯೂ ಈ ತಿಂಗಳಿನದೆ.

ಈ ವಿಷ್ಣುಮಾಸದ ಧರ್ಮಗಳು ವಿಶಿಷ್ಟವಾಗಿದ್ದು ಆಚರಣೆಗೆ ಅತ್ಯಂತ ಸುಲಭವಾಗಿವೆ. ಚಾತುರ್ಮಾಸ್ಯ ವ್ರತದಂತೆ ಯಾವುದೇ ಆಹಾರ ಪದಾರ್ಥಗಳ ಸೇವನೆ ನಿಷಿದ್ಧವಾಗಿಲ್ಲ. ಇದು ಬೇಸಿಗೆಯ ಆರಂಭವಾದುದರಿಂದ ಕೆರೆ ಸರೋವರಗಳು ಬತ್ತಿ ಬರಿದಾಗಿರುತ್ತದೆ. ಸಣ್ಣ ಪುಟ್ಟ ತೊರೆಗಳಂತೂ ಹೇಳ ಹೆಸರಿಲ್ಲದಂತಿರುತ್ತವೆ. ಆಗ ಜನ, ಪಶು, ಪಕ್ಷಿಗಳು ನೀರಿನ ಅಭಾವ ಎದುರಿಸುತ್ತದೆ. ಹೀಗಾಗಿ ಪಶು ಪಕ್ಷಿಗಳಿಗಾಗಿ ಅಲ್ಲಲ್ಲಿ ನೀರಿನ ತೊಟ್ಟಿಗಳನ್ನು ನಿರ್ಮಿಸುವುದು, ಪಕ್ಷಿಗಳ ಕೈಗೆಟುಕುವಂತೆ ಮಣ್ಣಿನ ಮಡಕೆಗಳಲ್ಲಿ ನೀರನ್ನು ತುಂಬಿ ಬಯಲು ಪ್ರದೇಶಗಳಲ್ಲಿಡುವುದು ವಿಧಿತ ಧರ್ಮ. ಪ್ರಯಾಣಿಕರಿಗಾಗಿ ಅರವಟ್ಟಿಗೆಯನ್ನು ನಿರ್ಮಿಸುತ್ತಿದ್ದ ನಮ್ಮ ಹಿರಿಯರು ಸ್ತುತ್ಯರ್ಹರು. ಚೈತ್ರ ಶುಕ್ಲ ಪಾಡ್ಯದಿಂದ ಕನಿಷ್ಠ ನಲವತ್ತೈದು ದಿವಸಗಳ ಕಾಲ ನೀರು ಕುಡಿಯಲು ಎಲ್ಲರಿಗೂ ಅನುಕೂಲ ಮಾಡಿಕೊಡಬೇಕು.

ದೊಡ್ಡ ಪ್ರಮಾಣದಲ್ಲಿ ಜನ ದಾನ ಮಾಡಲಾಗದವರೂ ಸಹ, ತಮ್ಮ ಮಿತಿಗೆ ತಕ್ಕಂತೆ ಬೆಳ್ಳಿಯ ಅಥವಾ ತಾಮ್ರದ ತಂಬಿಗೆಯಲ್ಲಿ ಶುದ್ಧ ನೀರನ್ನು ತುಂಬಿ ಸಪಾತ್ರರಿಗೆ - ಅಂದರೆ ಅವಶ್ಯಕತೆ ಇರುವವರಿಗೆ-ಇದರಲ್ಲಿ ಜಾತಿ ಮತ ಭೇದ ಭಾವನೆ ಮಾಡಬಾರದು, ದಾನ ಮಾಡಬೇಕು. ಇದಕ್ಕೆ 'ಉದಕುಂಭ ದಾನ' ವೆನ್ನುತ್ತಾರೆ.

ತ್ರಿಮೂರ್ತಿಗಳ ಅನುಗ್ರಹ ಪಡೆಯಲು ನಮ್ಮ ಮನೋಕಾಮನೆಗಳನ್ನು ಈಡೇರಿಸಿಕೊಳ್ಳಲು ಇದಕ್ಕಿಂತ ಬೇರೆ ಯಾವ ಸುಲಭೋಪಾಯವಿದೆ? ಬೆಳ್ಳಿ-ತಾಮ್ರ ತಂಬಿಗೆಯನ್ನೂ ಕೊಡಲಾಗದವರು ಒಂದು ಮಣ್ಣಿನ ಮಡಕೆಯನ್ನು ನೀರು ತುಂಬಿ ಕೊಟ್ಟರು ಸಾಕು. ನೀರಿನ ದಾನಕ್ಕೆ ಎಷ್ಟು ಫಲಪ್ರಧಾನವಿದೆಯೆಂದರೆ, ಇದರ ಜೊತೆಗೆ ನೀರು, ಮಜ್ಜಿಗೆ ಪಾನಕ, ಕೋಸಂಬರಿಗಳನ್ನು ದಾನ ಮಾಡಿದರೆ ಅದಿನ್ನಷ್ಟು ಫಲಪ್ರಧಾಯಕ! ಅದಿಕ್ಕೆಂದೆ ನಮ್ಮ ಹಿರಿಯರು ಪ್ರತಿ ದಿನವಲ್ಲದಿದ್ದರೂ ಶ್ರೀರಾಮನವಮಿಯ ದಿನವಾದರೂ ಪಾನಕ ಕೋಸಂಬರಿಯ ನೈವೇದ್ಯ ಸಮರ್ಪಿಸುವ ಸಂಪ್ರದಾಯ ವನ್ನೇರ್ಪಡಿಸಿರುವುದು.

ಚೈತ್ರ ಪೂರ್ಣಿಮೆ - ವೈಶಾಖ ಸ್ನಾನದ ಆರಂಭದ ದಿನ. ಇಂದಿನಿಂದ ವೈಶಾಖ ಪೂರ್ಣಿಮೆಯವರೆಗೆ, ಒಂದು ತಿಂಗಳ ಕಾಲ ಉಷಃಕಾಲದಲ್ಲಿ ನದಿಯಲ್ಲಾಗಲಿ ಅಥವಾ ಬಾವಿಯ ನೀರಿನಲ್ಲಾಗಲಿ ಸ್ನಾನ ಮಾಡುವುದು ಪುಣ್ಯಕರ. ಆಧುನಿಕ ಕಾಲದಲ್ಲಿ ಅದು ಅಸಾಧ್ಯವಾದುದರಿಂದ ಕೊಳಾಯಿ ನೀರೇ ಧರ್ಮ. ಈ ವೈಶಾಖ ಸ್ನಾನದ ಮಹಾತ್ಮೆಯಾದರೂ ಏನು?

ವೈಶಾಖಂ ಸಕಲಂ ಮಾಸಂ
ಮೇಷ ಸಂಕ್ರಮಣೇ ರವೇಃ
ಪ್ರಾತಃ ಸನಿಯಮಃ ಸ್ನಾಸ್ಯೇ
ಪ್ರಿತೋಸ್ತು ಮಧು ಸೂದನಃ
ಮಧು ಹಂತುಃ ಪ್ರಸಾದೇನ
ಬ್ರಾಹ್ಮಣಾನಾಮನುಗ್ರಹಾತ್
ನಿರ್ವಿಘ್ನಮಸ್ತು ಮೇ ಪುಣ್ಯಂ
ವೈಶಾಖ ಸ್ನಾನ ಮನ್ವಹಂ

ಈ ಸ್ನಾನ ಮಧುಸೂದನನಿಗೆ ಪ್ರೀತಿಯೆಂದ ಮೇಲೆ ಮತ್ತೆ ಹೇಳುವುದೇನಿದೆ?

ಇದು ವಿಷ್ಣು ಮಾಸವಾದುದರಿಂದ 'ವಿಷ್ಣುಸಹಸ್ರನಾಮ' ಪಠಣ, 'ಶ್ರೀರಾಮ ತಾರಕ ಮಂತ್ರ'ದ ಜಪ ಅತ್ಯಂತ ಫಲದಾಯಕ. ದಕ್ಷಿಣ ಭಾರತದ ಎಲ್ಲೆಡೆ ಚೈತ್ರಮಾಸವನ್ನು ಈ ರೀತಿಯಾಗಿ ಆಚರಿಸುವ ಪದ್ಧತಿರೂಢಿಯಲ್ಲಿದೆ. 'ವಸಂತ' ಋತುವಿನ ಮೊದಲ ಒಂಬತ್ತು ದಿವಸಗಳು ಶಕ್ತಿಯ ಆರಾಧನೆ ವಿವಿಧ ರೂಪಗಳಲ್ಲಿ ಆಚರಿಸುವುದರ ಹಿನ್ನೆಲೆ ಯುಗ ಸೃಷ್ಟಿಗೆ ಕಾರ್ಯ ಬ್ರಹ್ಮನಾದರೂ ಶಕ್ತಿ - ಪ್ರಕೃತಿಯಿಲ್ಲದಿದ್ದರೆ ಆ ಕಾರ್ಯ ಅಸಾಧ್ಯವಷ್ಟೆ. ಅದಕ್ಕೆ ತಾನೇ ಬ್ರಹ್ಮ ತನ್ನ ಅರ್ಧ ಭಾಗವನ್ನು ಸರಸ್ವತಿಯನ್ನಾಗಿಸಿದ್ದು. ಶಾಕ್ತ ಪುರಾಣಗಳು ಶಕ್ತಿಯ ಹಿರಿಮೆಯನ್ನು ಸಾರಿ ಹೇಳುತ್ತವೆ. ಹೀಗಾಗಿ ನಾವು ಶರದೃತುವಿನಲ್ಲಿ 'ನವರಾತ್ರಿ' ಆಚರಿಸಿದರೆ ಉತ್ತರ ಭಾರತೀಯರಲ್ಲಿ ಅನೇಕರು ವಸಂತದಲ್ಲಿ ಆಚರಿಸುತ್ತಾರೆ. ಆ ನವ ದಿನಗಳಲ್ಲಿ ದೇವಿ ಮಹಾತ್ಮೆ, ಲಲಿತಾಸಹಸ್ರನಾಮ ಪಠಣೆ ಅಲ್ಲಿನ ಸಂಪ್ರದಾಯ.

ಆಚರಣೆ, ಸಂಪ್ರದಾಯ - ಯಾವುದೇ ಇರಲಿ ಚೈತ್ರ ಮಾಸ ಸಂಭ್ರಮದ ಮಾಸ ಎನ್ನುವುದರಲ್ಲಿ ಯಾವುದೇ ದರ್ಪಣ ಹಿಡಿದಂತೆ-ಅಂದರೆ ವಿಶ್ವರೂಪ ತೆರೆದಂತೆ. ಅದೆಂದಿಗಾದರೂ ಸಾಧ್ಯವೆ?

# ದೇವಹೂತಿ ಕರ್ದಮರ ಕಥೆ

**ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ: ಡಿ.ಎಸ್.ಬದ್ರಿನಾಥ್**

ಸೃಷ್ಟ್ಯಾರಂಭದಲ್ಲಿ ಪ್ರಜಾಭಿವೃದ್ಧಿ ಮಾಡಿದ ಮಹಾನುಭಾವರೆಲ್ಲರೂ ಪ್ರಜಾಪತಿಗಳೆಂದು ಕರೆಯಲ್ಪಟ್ಟಿದ್ದಾರೆ. ಅವರೆಲ್ಲರೂ ಬ್ರಹ್ಮದೇವರ ಸಂತಾನವೇ. ಬ್ರಹ್ಮಕೂಡಾ ತನ್ನ ಸಂತಾನದಂತೆಯೇ ಪ್ರಜಾಪತಿಯೆಂದೇ ಕರೆಯಲ್ಪಟ್ಟಿದ್ದಾನೆ ಭಗವದಾಜ್ಞೆಯ ಮೇರೆಗೆ ಬ್ರಹ್ಮ ಸೃಷ್ಟಿಕಾರ್ಯಕ್ಕೆ ಬಹಳಾ ಪ್ರಯತ್ನ ಪಟ್ಟರೂ ಸೃಷ್ಟಿಕಾರ್ಯವು ಕೈಗೂಡಲಿಲ್ಲ. ಅದಕ್ಕಾಗಿಯೇ ಆತನು ತೀವ್ರವಾದ ತಪಸ್ಸು, ಆರಾಧನೆ, ಸಮಾಧಿ, ಭಕ್ತಿಯೋಗಗಳಿಂದ ಕೂಡಿದವನಾಗಿ ಇಂದ್ರೀಯನಿಗ್ರಹದಿಂದ ಮಹರ್ಷಿಗಳನ್ನು ಸೃಷ್ಟಿಸಿದ್ದಾನೆ. ತದನಂತರ ಸಮಾಧಿ, ಯೋಗ,ಅಸಾಧಾರಣವಾದ ಶಕ್ತಿ,ತಪಸ್ಸು ಆರಾಧನೆ, ವೈರಾಗ್ಯ ಮೊದಲಾದವುಗಳಿಂದ ಕೂಡಿದ ತನ್ನ ದೇಹದ ಒಂದೊಂದು ಭಾಗವನ್ನು ಆ ಮಹರ್ಷಿಗಳಿಗೆ ಬ್ರಹ್ಮದೇವನು ಕೊಟ್ಟಿದ್ದಾನೆ. ಈ ವಿಧವಾಗಿ ಬ್ರಹ್ಮನಲ್ಲಿ ಜನಿಸಿದ ಸಂತಾನಗಳಲ್ಲೊಬ್ಬನು ಕರ್ದಮ ಋಷಿ. ಪ್ರಜಾ ಸೃಷ್ಟಿಯಲ್ಲಿ ವಿಶೇಷವಾದ ಪಾತ್ರ ವಹಿಸಿದ ಕಾರಣಕ್ಕೆ ಆತನು ಕರ್ದಮ ಪ್ರಜಾಪತಿಯಾಗಿ ಪ್ರಸಿದ್ಧಿ ಪಡೆದಿದ್ದಾನೆ. ತಂದೆಯಾದ ಬ್ರಹ್ಮನಿಂದ ಪ್ರಜಾಭಿವೃದ್ಧಿಯ 'ಆಜ್ಞೆಯನ್ನು ಪಡೆದ ಕರ್ದಮ ಮುನಿ ಮೊದಲು ಸರಸ್ವತಿ ತೀರದಲ್ಲಿ ಹತ್ತು ಸಾವಿರ ವರ್ಷಗಳವರೆಗೆ ತಪಸ್ಸನ್ನು ಮಾಡಿದ್ದಾನೆ. ಯಾವುದೇ ಬೃಹತ್ಕಾರ್ಯವನ್ನು ನೆರವೇರಿಸಬೇಕೆಂದರೆ ಭಗವದನುಗ್ರಹ ಬೇಕೇ ಬೇಕು. ಅದಕ್ಕೆ ತಪೋಧ್ಯಾನಗಳು ಅವಶ್ಯಕವಾಗಿರುತ್ತವೆ. ಕೃತಯುಗದಲ್ಲಿ ಆಯುಃ ಪರಿಮಿತಿ ಲಕ್ಷ ಸಂವತ್ಸರಗಳು ಎಂದು ಹೇಳಲ್ಪಟ್ಟಿರುವ ಕಾರಣ ಅದರಲ್ಲಿ 'ಪದವಶಾತಂ' ಅಂದರೆ ಹತ್ತು ಸಾವಿರ ವರ್ಷಗಳನ್ನು ಕರ್ದಮ ಮುನಿ ತಪಸ್ಸಿನಲ್ಲೇ ಕಳೆದು ಬಿಟ್ಟಿದ್ದಾರೆ. ಆದರೂ ಕಲಿಯುಗದಲ್ಲಿ ಅದು ಸಾಧ್ಯವಾಗದುದು ಆದ್ದರಿಂದ ಅತ್ಯಂತ ಸರಳವಾದ ಹರಿನಾಮ ಸಂಕೀರ್ತನವೇ ಭಗವತ್ಪ್ರಾಪ್ತಿಗೆ ಮಾರ್ಗವೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಕರ್ದಮರು ದೇವಹೂತಿಯನ್ನು ವಿವಾಹವಾದ ವೃತ್ತಾಂತ, ಕಪಿಲನಾಮಕ ಭಗವಂತನ ಅವತಾರವು ಶ್ರೀ ಮದ್ಭಾಗವತದಲ್ಲಿ ಮೂರನೇ ಸ್ಕಂದದಲ್ಲಿದೆ.



ಕರ್ದಮ ಮುನಿ ತಪಸ್ಸಿಗೆ ಮೆಚ್ಚಿದ ಶ್ರೀಹರಿ ಚತುರ್ಭುಜನಾಗಿ ಗರುಡಾರೂಢನಾಗಿ ಆಕಾಶ ಮಧ್ಯದಲ್ಲಿ ದರ್ಶನ ಕೊಟ್ಟಿದ್ದಾನೆ. ಭಗವಂತನ ಸುಂದರವಾದ ರೂಪವನ್ನು ನೋಡುತ್ತಾ ಪರವಶನಾಗಿದ್ದ ಕರ್ದಮ ಮುನಿಯನ್ನು ಕುರಿತು ಭಗವಂತ "ನಿನ್ನ ಮನಸ್ಸಿನಲ್ಲಿರುವ ಕೋರಿಕೆಯನ್ನು ತಿಳಿದು ಅದು ಈಡೇರುವ ವ್ಯವಸ್ಥೆ ಮಾಡಿದ್ದೇನೆ. ಧರಿಣಿಯನ್ನು ಪಾಲಿಸುತ್ತಿರುವ ಸ್ವಾಯಂಭು ಮನುವಿಗೆ ಸೂಕ್ತವಯೋ ಮಾನದ ಒಬ್ಬ ಪುತ್ರಿಯಿದ್ದಾಳೆ. ಆಕೆಯನ್ನು ನಿನಗೆ ಮಡದಿಯಾಗಿ ನೀಡಲು ಆ ಧರಣೇಶ ಬರಲಿದ್ದಾನೆ. ಪ್ರಜಾಭಿವೃದ್ಧಿಗೆ ಸೂಕ್ತವಾದ ಪತ್ನಿಯ ಕುರಿತು ನೀನು ಆಲೋಚನೆ ಮಾಡುತ್ತಿರುವೆ. ಆಕೆ ನಿನಗೆ ಸರಿಯಾದ ಹೆಣ್ಣು ಆಕೆಯ ಗರ್ಭದಲ್ಲಿ ಒಂಬತ್ತು ಮಂದಿ ಪುತ್ರಿಯರು ಹುಟ್ಟುತ್ತಾರೆ. ಅವರ ದ್ವಾರ ಋಷಿಗಳ ಸಂತತಿ ಮುಂದುವರೆಯಲಿದೆ. ನಂತರ ನಾನೇ ಸ್ವತಃ ನಿನ್ನ ಪತ್ನಿಯ ಗರ್ಭದಲ್ಲಿ ಜನಿಸಿ ಸಾಂಖ್ಯಾಶಾಸ್ತ್ರವನ್ನು ಉಪದೇಶಿಸುತ್ತೇನೆ. ನನ್ನ ಆದೇಶದ ಪಾಲನೆಯಿಂದಾಗಿ ನಿಷ್ಕಳಂಕನೆಂದೆನಿಸಿ ಕಡೆಗೆ ನನ್ನನ್ನೇ ಸೇರುತ್ತೀಯೆ" ಎಂದು ಹೇಳಿದ್ದಾನೆ.

ಈ ರೀತಿಯಾಗಿ ಹೇಳಿದ ಭಗವಂತನು ಗರುಡವಾಹನನಾಗಿ ತನ್ನ ಲೋಕಕ್ಕೆ ಹಿಂತಿರುಗಿದ್ದಾನೆ. ಗರುಡನ ರೆಕ್ಕೆಗಳ ಬಡಿತದಿಂದ ಸಾಮವೇದಗಳು ಹೊರ ಹೊಮ್ಮುವುದನ್ನು ಕರ್ದಮರು ಗಮನಿಸಿದ್ದಾರೆ. ಭಗವಂತನು ಹೊರಟು ಹೋಗುತ್ತಲೇ ಆ ದೇವದೇವನು ನುಡಿದ ಭವಿಷ್ಯದ್ವಾಣಿಯು ನಿಜವಾಗುವ ಘಳಿಗೆ ಬರುವವರೆಗೂ ಕರ್ದಮರು ಅಲ್ಲಿಯೇ ಉಳಿದು ಹೋಗಿದ್ದಾರೆ. ಪ್ರೇಮದಿಂದ,ಭಕ್ತಿಯಿಂದ ಕರ್ದಮರು ಮಾಡಿದ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಭಗವಂತನು ಆ ಮುನಿ ತೋರಿದ ಪ್ರೇಮಾದರಗಳನ್ನು ಮಂತ್ರಮುಗ್ಧನಾಗಿ ಆನಂದ



ಭಾಷ್ಪಗಳನ್ನು ಸುರಿಸಿದ್ದಾನೆ. ಆ ಆನಂದ ಭಾಷ್ಪಗಳಿಂದ ಅಲ್ಲಿ ಬಿಂದು ಸರೋವರವು ನಿರ್ಮಿತವಾಗಿದೆ. ಭಗವಂತನು ನುಡಿದ ಹಾಗೆಯೇ ಸ್ವಾಯಂಭುಮನು ಶುಭಘಳಿಗೆಯೊಂದರಲ್ಲಿ ತನ್ನ ಮಡದಿ-ಮಕ್ಕಳೊಂದಿಗೆ ಆ ಪ್ರಾಂತ್ಯಕ್ಕೆ ಒಂದು ಕರ್ದಮಮುನಿಗೆ ಬಗ್ಗಿ ನಮಸ್ಕರಿಸಿದ್ದಾನೆ.ಆ ಚಕ್ರವರ್ತಿ ಯಾವ ಕೋರಿಕೆಯನ್ನಿಟ್ಟುಕೊಂಡು ಅಲ್ಲಿಗೆ ಬಂದಿರುವೆಯೋ ಆ ಕೋರಿಕೆಯನ್ನು ತೀರಿಸಲು ನಾನು ಸಿದ್ಧನಿದ್ದೇನೆಂದು ಮುನಿ ಹೇಳಿದ್ದಾನೆ. ಆಗ ರಾಜನು ತನ್ನ ಕುಮಾರಿಯ ವಿವಾಹದ ಕುರಿತಾಗಿ ಪ್ರಸ್ತಾವನೆ ಮಾಡುತ್ತಾ ಆಕೆಯು ಮುನಿಯನ್ನೇ ವಿವಾಹ ಮಾಡಿ ಕೊಳ್ಳಬೇಕೆಂದು ಬಯಸಿರುವುದಾಗಿ ಕರ್ದಮರಿಗೆ ತಿಳಿಯಪಡಿಸಿದ್ದಾನೆ.ಆ ಮಾತನ್ನು ಕೇಳಿ ಕರ್ದಮ ಮುನಿ ಎಷ್ಟೋ ಸಂತೋಷ ಭರಿತನಾಗಿ ಎಲ್ಲವೂ ಭಗವದನುಗ್ರಹವೆಂದು ಭಾವಿಸಿ ವಿವಾಹಕ್ಕೆ ಸನ್ನದ್ಧನಾಗಿದ್ದಾನೆ.

ಆನಂತರ ವೇದೋಕ್ತವಾಗಿ ದೇವಹೂತಿ - ಕರ್ದಮರ ವಿವಾಹವೇರ್ಪಟ್ಟಿದೆ.ತನ್ನ ಮಗಳಿಗಾಗಿ ಶತರೂಪಾ ಆಭರಣ,ವಸ್ತುಗಳನ್ನು ಗೃಹೋಪಕರಣಗಳನ್ನು ಕೊಟ್ಟಿದ್ದಾಳೆ.ತಂದೆಯಾದ ಸ್ವಾಯಂಭು ಮನು ಎಷ್ಟೋ ಆನಂದದಿಂದ, ಪ್ರೇಮದಿಂದ ಶುಭ ಸೂಚಕವಾಗಿ ವರದಕ್ಷಿಣೆ-ಕಾಣಿಕೆಗಳನ್ನು ಸಮರ್ಪಿಸಿದ್ದಾನೆ. ಈ ವಿಧವಾಗಿ ಕನ್ಯಾದಾನ ಮಾಡಿದ ಸ್ವಾಯಂಭು ಮನು ತನ್ನ ಪತ್ನಿಯೊಂದಿಗೆ ತಿರುಗಿ ತನ್ನ ರಾಜ್ಯಕ್ಕೆ ಬಂದಿದ್ದಾನೆ. ಆತನ ರಾಜ್ಯ ಬರ್ಹಿಷ್ಮತಿಪುರ. ವಿಷ್ಣುವು ವರಾಹವತಾರವನ್ನು ಧರಿಸಿದಾಗ ಆ ಶ್ರೀವರಾಹನ ರೋಮಗಳು ಬಿದ್ದ ಸ್ಥಳವಾದ್ದರಿಂದ ಬರ್ಹಿಷ್ಮತಿ ಎಷ್ಟೋ ಪವಿತ್ರವಾದುದು, ತ್ರಿವಿಧ ತಾಪಗಳಿಂದ ದೂರವಿರುವುದು ಸಂಪತ್ಸಮೃದ್ಧಿಯಿಂದ ಕೂಡಿದುದು.

ದೇವಹೂತಿ ರಾಜನರಮನೆಯಲ್ಲಿ ಹುಟ್ಟಿ ಬೆಳೆದವಳಾದರೂ ವಿವಾಹದ ನಂತರ ಆಶ್ರಮದಲ್ಲಿ ಮುನಿಯ ವೃತ್ತಿಯನ್ನೇ ಸ್ವೀಕರಿಸಿದ್ದಾಳೆ. ನಾರುಮಡಿಯನ್ನುಟ್ಟು ನೆಲದ ಮೇಲೆಯೇ ಮಲಗಿದ್ದಾಳೆ.ಕಂದೆ ಮೂಲಗಳನ್ನೇ ಭುಜಿಸಿದ್ದಾಳೆ. ಪತಿಯನ್ನೇ ಭಗವಂತನೆಂದು ಸೇವಿಸಿದ್ದಾಳೆ. ತನ್ನ ಕುರಿತು ಯಾವುದೇ ಆಲೋಚನೆಯನ್ನು ಮಾಡದೇ ತನ್ನ ಪತಿಯ ಸೇವೆಯಲ್ಲಿಯೇ ದಿನವೆಲ್ಲಾ ಕಳೆಯುತ್ತಾ ಕೃಶಳಾಗಿದ್ದಾಳೆ,ದುರ್ಬಲಳಾಗಿದ್ದಾಳೆ. ಆದರೆ ಆಕೆಯ ಸೇವಾಮನೋಭಾವಕ್ಕೆ ಕರ್ದಮರು ಎಷ್ಟೋ ಆನಂದಿಸಿ, ಆಕೆ ತೋರಿದ ಪತಿಸೇವಾ ತತ್ಪರತೆಗೆ ಮನಸೋತು ಆಕೆಯನ್ನು ಯಾವುದಾದರೂ ವರವನ್ನು ಕೋರಿಕೊಳ್ಳಬೇಕೆಂದು ಹೇಳಿದ್ದಾರೆ. ಆಕೆಯು ತನಗೆ ಸಂತಾನಬೇಕೆಂದೂ, ಆದರೆ ಆ ಕಾರ್ಯರೂಪುಗೊಳ್ಳಲು ತನ್ನ ದೇಹ ಯೋಗ್ಯವಾಗುವಂತೆ ಮಾಡಬೇಕೆಂದೂ, ಅಷ್ಟೇ ಅಲ್ಲದೆ, ಗೃಹಸ್ಥ ಜೀವನವನ್ನು ಸುಖವಾಗಿ ಕಳೆಯಲು ಯೋಗ್ಯವಾದ ಗೃಹವೊಂದನ್ನು ನಿರ್ಮಾಣಮಾಡ ಬೇಕೆಂದು ಕೋರಿದ್ದಾಳೆ. ಮಡದಿಯ ಕೋರಿಕೆಯ ಮೇರೆಗೆ ಕರ್ದಮರು ಯೋಗ ಶಕ್ತಿಯಿಂದ ಒಂದು ವಿಮಾನಸೌಧವನ್ನು ನಿರ್ಮಿಸಿದ್ದಾರೆ. ಅದು ದೇವೇಂದ್ರನ ಅರಮನೆಯಂತೆ ಕಂಗೊಳಿಸುತ್ತಿದೆ. ನಂತರ ಕರ್ದಮರು ದೇವಹೂತಿಯನ್ನು ಬಿಂದು ಸರೋವರದಲ್ಲಿ ಸ್ನಾನ ಮಾಡಿ ಬರಬೇಕೆಂದಿದ್ದಾರೆ. ಜಡೆಕಟ್ಟಿದ ಕೇಶಗಳಿಂದ, ಒಣಗಿ ಕೃಶವಾದ ಕಾಯದಿಂದ ಬಿಂದು ಸರೋವರವನ್ನು ಪ್ರವೇಶಿಸಿದ ದೇವಹೂತಿ ಸರ್ವಾಂಗ ಸುಂದರಿಯಾಗಿ ರೂಪುಗೊಂಡು ಹೊರಬಂದಿದ್ದಾಳೆ. ಆಕೆಯೊಬ್ಬಳೇ ಅಲ್ಲದೇ ಅನೇಕ ಮಂದಿ ಪರಿವಾರ ವೃಂದದಿಂದ ಹೊರಗೆ ಬರಲು ಕರ್ದಮರು ಆಕೆಯೆಡೆಗೆ ಆಕರ್ಷಿತ ರಾಗಿದ್ದಾರೆ. ಕೂಡಲೇ ಅವರು ಆಕೆಯನ್ನು ವಿಮಾನಸೌಧದಲ್ಲೇರಿಸಿ, ಸುಂದರಾಂಗ ಸುಂದರಿಯರು ಸೇವಿಸುತ್ತಿರಲು ವಿಹಾರಯಾತ್ರೆಗೆ ಕರೆದೊಯ್ದರು. ಈ ರೀತಿಯಾಗಿ ಕರ್ದಮರು ಸೃಷ್ಟಿಯಲ್ಲಿರುವ ಎಲ್ಲಾ ಪ್ರಾಂತ್ಯಗಳು,ನಂದನವನ ಮುಂತಾದ ಉದ್ಯಾನವನಗಳನ್ನು ಸಂದರ್ಶಿಸಿದ್ದಾರೆ.ಈ ರೀತಿಯಲ್ಲಿ ವಿಹಾರಯಾತ್ರೆಗಳನ್ನು ಪೂರ್ತಿಗೊಳಿಸಿ ತಿರುಗಿ ಆಕೆಯನ್ನು ಆಶ್ರಮಕ್ಕೆ ಕರೆತಂದಿದ್ದಾರೆ. ಆದರೆ ತನ್ನ ಪತ್ನಿ ಸಂತಾನವತಿಯಾಗಬೇಕೆಂದು ಬಯಸಿರುವುದನ್ನು ಅರಿತು ಒಂಬತ್ತು ರೂಪಗಳನ್ನು ಧರಿಸಿ ಆಕೆಯೊಂದಿಗೆ ರಮಿಸಿದ್ದಾರೆ. ಈ ರೀತಿಯಲ್ಲಿ ಕರ್ದಮ ದೇವಹೂತಿಯರು ಸಂಸಾರ ಸುಖಗಳಲ್ಲಿ ಓಲಾಡುತ್ತಿರುವಾಗಲೇ ನೂರು ಶರದೃತುಗಳ ಕಾಲ ಉರುಳಿ ಹೋಗಿವೆ. ಆಗ ಕರ್ದಮಮುನಿಯ ತಪೋಫಲದಿಂದಾಗಿ ದೇವಹೂತಿಗೆ ಒಂದೇ ದಿನ ಒಂಬತ್ತು ಮಂದಿ ಪುತ್ರಿಯರು ಜನಿಸಿದ್ದಾರೆ. ಅವರೆಲ್ಲರೂ ಬಹಳ ಸುಂದರವಾಗಿದ್ದಾರೆ.ಆಗ ಕರ್ದಮರು ಗೃಹತ್ಯಾಗ ಮಾಡಿ ತಪೋವನಕ್ಕೆ ಹೋಗುವುದಕ್ಕಾಗಿ ತಯಾರಾಗಿದ್ದಾರೆ. ಆದರೆ ದೇವಹೂತಿ ಕಣ್ಣೀರು ಸುರಿಸುತ್ತಾ ಅಡ್ಡಗಟ್ಟಿ “ಸ್ವಾಮಿ! ನೀವು ನನಗೆ

ನೀಡಿದ ವಾಗ್ದಾನವನ್ನೇನೋ ಪೂರ್ತಿಗೊಳಿಸಿದ್ದೀರಿ. ಸಂತಾನವನ್ನು ಪ್ರಸಾದಿಸಿದ್ದೀರಿ. ಆದರೆ ಅವರೆಲ್ಲರೂ ಹೆಣ್ಣು ಮಕ್ಕಳು.ಇವರೆಲ್ಲರೂ ಮದುವೆಯಾಗಿ ಹೊರಟು ಹೋದರೆ ನನ್ನನ್ನಾರು ನೋಡಿ ಕೊಳ್ಳುವವರು? ನೀವು ವರಕೊಟ್ಟರೂ ನಾನು ಇಂದ್ರೀಯ ಭೋಗಗಳಲ್ಲಿ ಮುಳುಗಿ ಮೋಕ್ಷ ಪ್ರಾಪ್ತಿಯನ್ನೇ ಮರೆತು ಹೋಗಿದ್ದೇನೆ" ಎಂದು ಆಕೆ ಮೊರೆ ಯಿಟ್ಟಿದ್ದಾಳೆ.

ಪತ್ನಿಯ ಮಾತುಗಳಿಂದ ಪ್ರಸನ್ನರಾದ ಕರ್ದಮರು ಶೀಘ್ರದಲ್ಲೇ ಭಗವಂತನು ಆಕೆಯ ಗರ್ಭದಲ್ಲಿ ಜನಿಸು ವನಿರುವನೆಂದೂ ಆತನೇ ತನ್ನ ಯಶಸ್ಸಿಗೆ ಕಾರಣನಾಗುವ ನೆಂದೂ,ತಾಯಿಗೆ ಬ್ರಹ್ಮ ಜ್ಞಾನವನ್ನು ಬೋಧಿಸಿ ಹೃದಯ ಗ್ರಂಥಿಯನ್ನು ಜಾಗೃತಗೊಳಿಸುತ್ತಾನೆಂದು ಬೋಧಿಸು ತ್ತಾರೆ.ಇದೇ ರೀತಿಯಲ್ಲಿ ಸರಿಯಾಗಿ ಸ್ವಲ್ಪ ಕಾಲದಲ್ಲೇ ಭಗ ವಂತನು ದೇವಹೂತಿಯ ಗರ್ಭದಲ್ಲಿ ಪ್ರವೇಶಿಸಿದ್ದಾನೆ. ಇದು ತಿಳಿದ ಬ್ರಹ್ಮ ದೇವನು ಮಾರಿಚಾದಿ ಋಷಿಗಳೊಂದಿಗೆ ಕರ್ದ ಮರ ಆಶ್ರಮಕ್ಕೆ ಬಂದಿದ್ದಾನೆ.ಆಗ ಬ್ರಹ್ಮದೇವನ ಆಜ್ಞಾನುಸಾರ ಕರ್ದಮರ ತಮ್ಮ ಒಂಬತ್ತೂ ಮಂದಿ ಕನ್ಯೆಯರನ್ನು ಒಂಬತ್ತು ಮಂದಿ ಋಷಿಕುಮಾರರಿಗೆ ಮದುವೆ ಮಾಡಿ ಕೊಟ್ಟಿದ್ದಾರೆ. 'ಕಳಾ'ಎಂಬುವಳನ್ನೂ ಮರೀಚಿಗೆ,ಅನಸೂಯೆಯನ್ನು ಅತ್ರಿಗೆ, ಶ್ರದ್ಧೆಯನ್ನು ಅಂಗೀರಸರಿಗೆ, ಹವಿರ್ಭುಹುವನ್ನು ಪುಲಸ್ತ್ಯರಿಗೆ, ಗತಿಯನ್ನು ಪುಲಹುನಿಗೆ,ಕ್ರಿಯೆಯನ್ನು ಕ್ರತುವಿಗೆ, ಖ್ಯಾತಿಯನ್ನು ಭೃಗುವಿಗೆ,ಅರಂಧತಿಯನ್ನು ವಶಿಷ್ಠರಿಗೆ,ಕೊಟ್ಟು ವಿವಾಹ ಏರ್ಪಟಿಸಿದ್ದಾನೆ. ಇನ್ನು ಶಾಂತಿಯನ್ನು ಅಥರ್ವಣನಿಗೆ ಕೊಟ್ಟು ಮದುವೆ ಮಾಡಿದ್ದಾನೆ.ಮದುವೆಗಳು ಪೂರ್ಣಗೊಳ್ಳು ತ್ತಲೇ ಋಷಿಗಳು ಮಾವನ ಆಶೀರ್ವಾದ ತೆಗೆದು ಕೊಂಡು ತಂತಮ್ಮ ವಧುಗಳೊಂದಿಗೆ ತಂತಮ್ಮ ಆಶ್ರಮಗಳಿಗೆ ಹೊರಟು ಹೋಗಿದ್ದಾರೆ.

ಇಷ್ಟರಲ್ಲಿ ಕರ್ದಮರ ಆಶ್ರಮದಲ್ಲಿ ಕಪಿಲಭಗವಂತನ ಆವಿರ್ಭೂತವುಂಟಾಗಿದೆ. ಸ್ವತಃ ಭಗವಂತನೇ ತನ್ನ ಮನೆಗೆ ಆವಿರ್ಭೂತನಾಗಿರುವುದನ್ನು ತಿಳಿದುಕೊಂಡು ಕರ್ದಮನು ಏಕಾಂತವಾಗಿ ಆತನನ್ನು ಸೇರಿಕೊಂಡು ತನ್ನ ಭವಿಷ್ಯಾತ್ಕಾರ ವನ್ನು ತಿಳಿದುಕೊಂಡಿದ್ದಾನೆ. ಸನ್ಯಾಸಾಶ್ರಮವನ್ನು ಸ್ವೀಕರಿಸಿ ಆ ದೇವದೇವನ ಹೃದಯದಲ್ಲಿ ನೆಲೆನಿಲ್ಲುವುದೇ ಮತ್ತು ಸರ್ವತ್ರ ಸಂಚಾರ ಮಾಡುವುದೇ ತನ್ನ ಗುರಿಯೆಂದು ಭಗ ವಂತನಿಗೆ ತಿಳಿಪಡಿಸಿದ್ದಾನೆ.ಅದಕ್ಕೆ ಭಗವಂತನು ಸಂತೋಷ ಗೊಂಡು ತನ್ನ ಅವತಾರ ಲಕ್ಷ್ಯವನ್ನು ತಿಳಿಯಪಡಿಸುತ್ತಾ "ನಿನಗೆ ಪುತ್ರನಾಗಿ ಜನಿಸುವೆನೆಂದು ಹೇಳಿದ ಕಾರಣಕ್ಕೆ ಆ ಮಾತನ್ನು ನಿಜಗೊಳಿಸಲು ಇಲ್ಲಿ ಆವಿರ್ಭವಿಸಿದ್ದೇನೆ. ನಿನ್ನ ಕರ್ಮಗಳನ್ನೆಲ್ಲಾ ನನಗರ್ಪಿಸಿ ಇಚ್ಛಾನು ಸಾರವಾಗಿ ಹೊರಟು ಹೋಗು. ಮೃತ್ಯುವನ್ನು ಜಯಿಸಿ ಅಮರತ್ವವನ್ನು ಸಾಧಿಸು ಆಗಲೇ ಪರಮಾತ್ಮನಾದ ನನ್ನನ್ನು ನಿನ್ನ ಬುದ್ಧಿಯ ಮೂಲಕ ನಿನ್ನ ಹೃದಯದಲ್ಲಿ ಕಾಣುತ್ತೀಯೆ.ಉತ್ತಮೋತ್ತಮವಾದ ಜ್ಞಾನವನ್ನು ನಾನು ನನ್ನ ತಾಯಿಗೂ ಕೂಡಾ ಬೋಧಿಸು ತ್ತೇನೆ.ಆಕೆಯೂ ಸಹ ಈ ಭಯದಿಂದ ಬಿಡುಗಡೆ ಪಡೆದು ಮೋಕ್ಷವನ್ನು ಹೊಂದುತ್ತಾಳೆ"ಎಂದು ಹೇಳುತ್ತಾನೆ.ಆಗ ಕರ್ದಮ ಮಹರ್ಷಿತನ್ನ ಸುತನಾದ ಕಪಿಲ ಭಗವಂತನಿಗೆ ಮುನ್ನೂರು ಪ್ರದಕ್ಷಿಣೆಯನ್ನು ಮಾಡಿ ಸಂತುಷ್ಟ ಹೊಂದಿದ ಮನಸ್ಸಿನಿಂದ ವನಕ್ಕೆ ತೆರಳಿದ್ದಾನೆ.ವನದಲ್ಲಿ ಕರ್ದಮರು ಸಮದರ್ಶೀಯರಾಗಿ ಜೀವಿಸುತ್ತಾ ಹೃದಯದಲ್ಲಿ ಭಗ ವದ್ದರ್ಶನವನ್ನು ಹೊಂದಿದ್ದಾರೆ. ಆತನ ಮನಸ್ಸು ಅಲೆಗಳಿಲ್ಲದ ಸಮುದ್ರದ ತೆರೆನಾಗಿ ಮಾರ್ಪಟ್ಟಿದೆ. ಆ ವಿಧವಾಗಿ ಆತನು ಆತ್ಮಸ್ಥಿತಿಯಲ್ಲೇ ನೆಲೆನಿಂತು ಕಡೆಗೆ ಭಾಗವತಗತಿಯನ್ನು ಪಡೆ ದಿದ್ದಾರೆ.

ಪತಿಯ ನಿರ್ಗಮನ ನಂತರ ದೇವಹೂತಿ ತನ್ನ ಪುತ್ರ ನಾದ ಕಪಿಲನೊಂದಿಗೆ ಬಿಂದುಸರೋವರದ ಹತ್ತಿರವೇ ವಾಸಿಸಲಾರಂಭಿಸಿದ್ದಾಳೆ. ನಂತರ ಆಕೆ ತನ್ನ ಪುತ್ರನನ್ನೇ ಆಶ್ರಯಿಸಿ ತನಗೆ ಜ್ಞಾನಭಿಕ್ಷೆ ನೀಡಬೇಕೆಂದು ಪ್ರಾರ್ಥಿಸಿದ್ದಾಳೆ. ಮಯಾಮೋಹಾ ಸಾಗರದಲ್ಲಿ ಬಿದ್ದಿರುವ ತನ್ನನ್ನು ಉದ್ಧರಿಸ ಬೇಕೆಂದು ಯಾಚಿಸಿದ್ದಾಳೆ. ಆಕೆಯ ಪ್ರಾರ್ಥನೆಗೆ ಪ್ರತ್ಯುತ್ತರ ವಾಗಿ ಕಪಿಲಭಗವಂತನು ಆಕೆಗೆ ಸಾಂಖ್ಯಶಾಸ್ತ್ರ ತತ್ತ್ವವನ್ನು ಅಂದರೆ ಭಕ್ತಿಯೋಗವನ್ನು ವಿವರಿಸಿದ್ದಾನೆ. ಕಪಿಲನು ತನ್ನ ತಾಯಿಗೆ ವಿವರಿಸಿದ ಸಾಂಖ್ಯತತ್ತ್ವವು ಎಷ್ಟೋ ಗಂಭೀರ ವಾದದ್ದು,ಭಗವತ್ಪ್ರಾಪ್ತಿಗೆ ಖಚಿತವಾಗಿ ಸಾನುಕೂಲ ವಾದುದ್ದು.ಈ ರೀತಿಯಾಗಿ ತಾಯಿಗೆ ಸಾಂಖ್ಯತತ್ತ್ವವನ್ನು ಬೋಧಿಸಿ ಕಪಿಲರು ಮನೆಬಿಟ್ಟು ಹೊರಟು ಹೋದನು. ಕಡೆ ಗಾಲದಲ್ಲೇ ಆಕೆಗೆ ಮುಕ್ತಿ ದೊರಕುವುದೆಂದು ದೇವದೇವನು ವರವಿತ್ತಿದ್ದಾನೆ. ತಂದೆಯ ಆಶ್ರಮವನ್ನು ಬಿಟ್ಟು ಈಶಾನ್ಯದಿಕ್ಕಿಗೆ ಆ ದೇವದೇವನು ಹೋಗುತ್ತಿರುವಾಗ ಚಾರಣರು,ಗಂಧ ರ್ವರು, ಮುನಿಗಣಗಳು, ಅಪ್ಸರವೃಂದವು ಸ್ತುತಿಸಲಾರಂಭಿ ಸಿದ್ದಾರೆ. ಸಮುದ್ರನು ದಾರಿಬಿಟ್ಟು ಸೇವೆಯನಿತ್ತಿದ್ದಾನೆ. ಮೊಟ್ಟಮೊದಲು ಆತನು ಹಿಮಾಲಯ ಪ್ರಾಂತ್ಯಕ್ಕೆ ಹೋಗಿ ಗಂಗಾ ನದಿಯ ಉಗಮಸ್ಥಾನವನ್ನು ಸೇರಿದ್ದಾನೆ. ನಂತರ ಗಂಗಾನದಿಯ ಡೆಲ್ಟಾ ಪ್ರಾಂತ್ಯಕ್ಕೆ ಬಂದಿದ್ದಾನೆ. ಆಗ ಸಮು ದ್ರನು ದೇವದೇವನಿಗಾಗಿ ಗಂಗಾನದಿ ಪ್ರಾಂತ್ಯದಲ್ಲಿ ನಿವಾಸ ಸ್ಥಾನವನ್ನು ನಿಯೋಜಿಸಿದ್ದಾನೆ.ಮೂರುಲೋಕದಲ್ಲಿರುವ ಬುದ್ಧಿ ಜೀವಿಗಳನ್ನು ಉದ್ಧರಿಸಲು ಕಪಿಲಮುನಿ ಈಗಲೂ ಅಲ್ಲಿಯೇ ಇದ್ದಾನೆ. ಕಪಿಲ ಚರಿತೆಯನ್ನು, ಕಪಿಲರ ಸಾಂಖ್ಯಾ ತತ್ತ್ವವನ್ನು ಕೇಳುವವರು, ಪಠಿಸುವವರು ಗರುಡಾರೂಢ ನಾದ ಕೃಷ್ಣನ ಭಕ್ತರಾಗುತ್ತಾರೆಂದು ಫಲಶ್ರುತಿ ಹೇಳುತ್ತದೆ. ಶ್ರೀಮದ್ಭಾಗವತದಲ್ಲಿ ಕಪಿಲಮುನಿಯ ಅವತಾರವನ್ನು ಐದನೇ ಅವತಾರವನ್ನಾಗಿ ಪರಿಗಣಿಸಿರುವುದು ವಿಶೇಷ.



# ಪಂಚಾಂಗ ಸಂಕ್ಷಿಪ್ತ ವಿವರಣೆ

**- ಬಿ.ಆರ್.ಶ್ರೀಕಂಠಯ್ಯ**

ಯುಗಾದಿ ಬಂದರೇ ಎಲ್ಲೆಲ್ಲಿಯೂ ವಿವಿಧ ರೀತಿಯ ವಿವಿಧ ಸಂಸ್ಥೆಗಳ ಪಂಚಾಂಗಗಳು ಪ್ರಕಟಣೆಯಾಗುತ್ತದೆ. ಎಲ್ಲರಿಗೂ ಕುತೂಹಲ,ಈ ಹೊಸ ವರ್ಷದ ನಾಯಕರು ಯಾರು, ಅಧಿಪತಿಗಳು ಯಾರು, ಮಳೆ, ಬೆಳೆ ಮತ್ತು ವಸ್ತುಗಳ ಬೆಲೆಗಳು ಹೇಗಿರುತ್ತೆ ಎಂಬುದನ್ನು ತಿಳಿಯಲು ಸಾಮಾನ್ಯರು, ವಿದ್ಯಾರ್ಥಿಗಳು, ರೈತರು, ಉದ್ಯೋಗಸ್ಥರು, ರಾಜಕಾರಣಿಗಳು ಮತ್ತು ಸರ್ವರೂ ತಮ್ಮ ಭವಿಷ್ಯ ಮಕ್ಕಳ ಭವಿಷ್ಯ, ದೇಶ ಮತ್ತು ವಿದೇಶಗಳ ಬೆಳವಣಿಗೆ ಹೇಗಿರುತ್ತೆ ಎಂದು ತಿಳಿಯಲು ಬಹಳ ಕಾತುರರಾಗಿರುತ್ತಾರೆ.

ಯುಗಾದಿಯ ದಿನ (ಹೊಸ ವರ್ಷ) ಎಲ್ಲರೂ ಧಾರ್ಮಿಕ ಕಾರ್ಯಾಚರಣೆ, ಬೇವು - ಬೆಲ್ಲ ಸೇವನೆ, ಜೊತೆಗೆ ‘‘ಪಂಚಾಂಗ ಶ್ರವಣ’’ ಕಾರ್ಯಕ್ರಮ ಅವರವರ ಸಂಪ್ರದಾಯ ಮತ್ತು ಆಚಾರಗಳ ಆಧಾರದ ಮೇಲೆ ಹೊಸ ವರ್ಷವನ್ನು ಆಚರಿಸುತ್ತಾರೆ. ಈ ನೂತನ ವರ್ಷ ಅಥವಾ ಯುಗಾದಿ “ಚಾಂದ್ರಮಾನ” ಮತ್ತು “ಸೌರಮಾನ” ರೀತಿ ಆಚರಣೆಯಲ್ಲಿರುತ್ತದೆ.“ಪಂಚಾಂಗ ಶ್ರವಣ”ವನ್ನು ಸಾರ್ವಜನಿಕವಾಗಿ ದೇವಾಲಯ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿಯೂ ಕೂಡ ನಡೆಸುವ ಪದ್ಧತಿ ಹಿಂದಿನಿಂದಲೂ ನಡೆದು ಬಂದಿದೆ. ಹಿಂದೆ, ನಮ್ಮ ಹಿರಿಯರು, ಸ್ತೋತ್ರಪಾಠ ಮತ್ತು ಪಂಚಾಂಗಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಕ್ಕಳಿಗೆ ಸಂಧ್ಯಾಕಾಲದಲ್ಲಿ ಹೇಳಿಕೊಡುವ ಪದ್ಧತಿಯಿತ್ತು. ಆದರೆ, ಇಂದು ಈಗಿನ ಒತ್ತಡ,ಸಮಯದ ಅಭಾವ ಎಂದು ಹೇಳಿಕೊಳ್ಳುವ ಈ ವೈಜ್ಞಾನಿಕ ಯುಗದಲ್ಲಿ,ಸಾಮಾನ್ಯವಾಗಿ ಮಕ್ಕಳಿಗೆ ಇದರ ಅರಿವು ಮೂಡಿಸಲು ಸಾಧ್ಯವಾಗುತ್ತಿಲ್ಲ.

ಪಂಚಾಂಗ ಅಂದರೇನು - ಐದು ಅಂಗ ಅಥವಾ ಅಂಶಗಳನ್ನು ಸಮಗ್ರವಾಗಿ ಸೂಚಿಸುವ ಪುಸ್ತಕವೇ “ಪಂಚಾಂಗ”. ಆ ಐದು ಅಂಗಗಳೇ -

೧) ತಿಥಿ ೨) ವಾರ ೩) ನಕ್ಷತ್ರ ೪) ಯೋಗ ೫) ಕರಣ

೧) ತಿಥಿ - ನಮ್ಮ ಎಲ್ಲಾ ಹಬ್ಬ ಹರಿದಿನಗಳನ್ನು ನಿರ್ಣಯಿಸುವುದು ತಿಥಿ. ಸೂರ್ಯೋದಯದಲ್ಲಿ ಯಾವ ತಿಥಿ ಇರುತ್ತದೆಯೋ ಅದನ್ನೇ ಸಾಮಾನ್ಯವಾಗಿ ಹಬ್ಬಗಳ ಆಚರಣೆಗೆ ಉಪಯೋಗಿಸುವ ಪದ್ಧತಿ ಅವರವರ ಸಂಪ್ರದಾಯದಂತೆ ಪಾಲಿಸುತ್ತಾರೆ. ಅದರಂತೆ ಮಧ್ಯಾಹ್ನದ ವೇಳೆ ಇರುವ ತಿಥಿಯನ್ನು ಇತರ ಕಾರ್ಯಗಳಿಗೆ ಉಪಯೋಗಿಸುವುದನ್ನು ನಾವು ಕಾಣಬಹುದು.

**ಒಟ್ಟು ೩೦ ತಿಥಿಗಳು :-** ಶುಕ್ಲಪಕ್ಷದಲ್ಲಿ-೧೫: ಕೃಷ್ಣಪಕ್ಷದಲ್ಲಿ-೧೫. ಶುಕ್ಲಪಕ್ಷವು ‘ಪೂರ್ಣಿಮಾ’ತಿಥಿಯೊಂದಿಗೆ ಕೊನೆಯಾಗುತ್ತದೆ. ಕೃಷ್ಣಪಕ್ಷವು ‘ಅಮಾವಾಸ್ಯೆ’ ತಿಥಿಯೊಂದಿಗೆ ಕೊನೆಯಾಗುತ್ತದೆ.ಉಳಿದ ೧೪ ತಿಥಿಗಳು ಎರಡೂ ಪಕ್ಷಗಳಲ್ಲಿ ಒಂದೆ ಆಗಿರುತ್ತದೆ. ೧೪. ತಿಥಿಗಳು ಈ ರೀತಿಯಿರುತ್ತದೆ. 1.ಪಾಡ್ಯ, ೨.ಬಿದಿಗೆ, ೩.ತದಿಗೆ, ೪. ಚತುರ್ಥೀ, ೫. ಪಂಚಮೀ , ೬.ಷಷ್ಠೀ ೭. ಸಪ್ತಮೀ, ೮. ಅಷ್ಟಮೀ, ೯. ನವಮೀ ೧೦. ದಶಮೀ, ೧೧. ಏಕಾದಶೀ, ೧2. ದ್ವಾದಶೀ, ೧೩, ತ್ರಯೋದಶೀ, ಮತ್ತು ೧೪. ಚತುರ್ದಶೀ.

ಒಂದೊಂದುಸಾರಿ ಒಂದೇ ತಿಥಿಯು ಎರಡು ಅಥವಾ ಮೂರುದಿನವಿರುವ ಸಾಧ್ಯತೆ ಇರುತ್ತದೆ. ಆದೇರೀತಿ, ಒಂದು ತಿಥಿಯೂ ಪೂರ್ಣದಿನವಿರುವುದಿಲ್ಲ.ಚಾಂದ್ರಮಾನರೀತ್ಯ, ವರ್ಷದ ದಿನಗಳ ಸಮತೋಲನೆಯನ್ನು ಕಾಪಾಡಲು ವೈಜ್ಞಾನಿಕ ರೀತಿಯಲ್ಲಿ ಪಂಚಾಂಗಕರ್ತರು “ಅಧಿಕ ಮಾಸ” ಮತ್ತು “ಕ್ಷಯಮಾಸ” ಲೆಕ್ಕಚಾರ ಮಾಡುತ್ತಾರೆ. ಈ ಗಣಿತ ಶಾಸ್ತ್ರದರೀತಿ, ಒಂದು ಸಂವತ್ಸರದಲ್ಲಿ ಒಂದು ಮಾಸ (ಅಧಿಕ) ಹೆಚ್ಚಾಗಿರುತ್ತದೆ. (೧೩ ತಿಂಗಳು), ಅದೇರೀತಿ ಒಂದು ಮಾಸ ಕಮ್ಮಿಯಿರುತ್ತದೆ (ಕ್ಷಯ).ಈ ವ್ಯತ್ಯಾಸಗಳು ಅನೇಕ ವರ್ಷಗಳಿಗೊಮ್ಮೆ ಬರುತ್ತದೆ.ಸೌರಮಾನ್ಯರೀತಿ ಈ ವ್ಯತ್ಯಾಸವಿರುವುದಿಲ್ಲ.

ಮುಹೂರ್ತಗಳನ್ನು (ಉಪನಯನ, ಗೃಹಪ್ರವೇಷ ವಿವಾಹ ಇತ್ಯಾದಿ) ನಿಶ್ಚಯಿಸಲು ತಿಥಿಯ ಪರಿಗಣನೆ ಬಹಳ ಮುಖ್ಯವಾದದ್ದು. ಕೆಲವು ತಿಥಿಗಳು ಶುಭಮುಹೂರ್ತಗಳಿಗೆ ಮತ್ತು ಇತರ ಕೆಲಸಗಳಿಗೆ ಯೋಗ್ಯವಾಗಿರುವುದಿಲ್ಲ. ಆದರಿಂದ ಕಾರ್ಯಕ್ರಮಗಳು ಸುಗಮವಾಗಿ ಮತ್ತು ಸರಾಗವಾಗಿ ಸಾಗಲು ಒಳ್ಳೆಯ ಮುಹೂರ್ತಗಳು ಬೇಕೇಬೇಕು. ತಿಥಿಗಳಿಗೂ ಕೂಡ ಅಧಿದೇವತೆಗಳು ಇರುತ್ತಾರೆ. ಉದಾಹರಣೆಗೆ-



ಪಾಡ್ಯ : ಬ್ರಹ್ಮ: ಅಮಾವಾಸ್ಯೆ: ಪಿತೃ: ಪೂರ್ಣಿಮಾ: ವಿಶ್ವೇದೇವ, ಇತ್ಯಾದಿ.

೨. ವಾರ - ಪಂಚಾಂಗದ ಎರಡನೆಯ ಅಂಗವೇ 'ವಾರ',(ಸೌರದಿನಗಳು).ಒಟ್ಟು ಏಳು ವಾರಗಳು. ಒಂದೊಂದು ವಾರವು ಒಂದೊಂದು ಗ್ರಹವನ್ನು ಸೂಚಿಸುತ್ತದೆ.

೧. ಭಾನುವಾರ - ಸೂರ್ಯ ; ೨. ಸೋಮವಾರ - ಚಂದ್ರ; ೩. ಮಂಗಳವಾರ - ಕುಜ; ೪. ಬುಧವಾರ - ಬುಧ; ೫. ಗುರುವಾರ - ಬೃಹಸ್ಪತಿ; ೬. ಶುಕ್ರವಾರ - ಶುಕ್ರ; ೭. ಶನಿವಾರ - ಶನೈಶ್ಚರ. ರಾಹು ಮತ್ತು ಕೇತು ಗ್ರಹಗಳು ಛಾಯಗ್ರಹಗಳು. ವಾರಗಳಿಗೂ ಕೂಡ ಅಧಿದೇವತೆಗಳಿರುತ್ತಾರೆ.ಭಾನುವಾರ-ರುದ್ರ;ಮಂಗಳವಾರ-ಸ್ಕಂದ,ಇತ್ಯಾದಿ,ವೈಜ್ಞಾನಿಕ ರೀತಿಯ ಗ್ರಹಚಲನೆಯಿಂದ ಈ ವಾರಗಳು ಆಗುವುದು. ಒಂದು ದಿವಸವೆಂದರೆ ಅಹೋರಾತ್ರಿಗಳು ಸೇರಿದ ದಿವಸಕ್ಕೆ ೨೪ ಕಾಲ ಹೋರೆಗಳಾಗುತ್ತದೆ. ಈ ಹೋರಾ ಶಾಸ್ತ್ರದಿಂದಲೇ, ಆಂಗ್ಲಭಾಷೆಯ "ಅವರ್" ಬಂದಿದೆ.ವಾರದಗಣನೆ ಸೂರ್ಯೋದಯದಿಂದ ಪುನಹ ಸೂರ್ಯೋದಯದವರೆಗೆ ಒಂದು ದಿನ.

## ೩. ನಕ್ಷತ್ರ - ೨೭ ನಕ್ಷತ್ರಗಳು

೧.ಅಶ್ವಿನಿ ೨. ಭರಣಿ ೩. ಕೃತ್ತಿಕಾ ೪. ರೋಹಿಣಿ ೫. ಮೃಗಶಿರೆ ೬. ಆರಿದ್ರ ೭. ಪುನರ್ವಸು ೮.ಪುಷ್ಯ ೯.ಆಶ್ಲೇಷ ೧೦. ಮಖೆ ೧೧. ಪುಬ್ಬೆ ೧೨. ಉತ್ತರೆ ೧೩, ಹಸ್ತ ೧೪.ಚಿತ್ತೆ ೧೫. ಸ್ವಾತಿ ೧೬. ವಿಶಾಖ ೧೭. ಅನುರಾಧ ೧೮. ಜ್ಯೇಷ್ಠ ೧೯. ಮೂಲ ೨೦. ಪೂರ್ವಾಷಾಢ ೨೧. ಉತ್ತರಾಷಾಢ ೨೨. ಶ್ರವಣ ೨೩. ಧನಿಷ್ಠೆ ೨೪. ಶತಭಿಷ ೨೫. ಪೂರ್ವಾಭಾದ್ರೆ ೨೬. ಉತ್ತರಾಭಾದ್ರೆ ೨೭.ರೇವತಿ.

ಇಲ್ಲಿಯೂ ಕೂಡ, ನಕ್ಷತ್ರಗಳಿಗೆ ಅಧಿದೇವತೆಗಳು ಇರುತ್ತಾರೆ. "ಅಶ್ವಿನಿ ನಕ್ಷತ್ರ" - ಅಶ್ವಿನಿ ದೇವತೆಗಳು; "ಅರ್ದ್ರೆ ನಕ್ಷತ್ರ' - ರುದ್ರ; 'ಪುಷ್ಯ ನಕ್ಷತ್ರ' - ಗುರು; "ಆಶ್ಲೇಷ ನಕ್ಷತ್ರ"- ಸರ್ಪ ಇತ್ಯಾದಿ. ನಕ್ಷತ್ರಗಳು ಆಕಾರವನ್ನು ಹೊಂದಿರುತ್ತದೆ ಮತ್ತು ಗುಂಪಿನಲ್ಲಿರುತ್ತದೆ (ಪುಂಜ). ಉದಾಹರಣೆಗೆ - ರೋಹಿಣಿ ನಕ್ಷತ್ರ - "ರಥಾಕಾರ' ೫ ನಕ್ಷತ್ರಗಳ ಪುಂಜ; ಕೃತ್ತಿಕೆ ನಕ್ಷತ್ರ-ಕತ್ತಿಯಾಕಾರ'- ೬ನಕ್ಷತ್ರಗಳ ಪುಂಜ; ಆಶ್ಲೇಷ ನಕ್ಷತ್ರ-'ಸರ್ಪಾಕಾರ'-೬ ನಕ್ಷತ್ರಗಳ ಪುಂಜ ; ಮೃಗಶಿರೆ ನಕ್ಷತ್ರ-'ಜಿಂಕೆಯಾಕಾರ" - ೩ ನಕ್ಷತ್ರಗಳ ಪುಂಜ.ಕೆಲವು ನಕ್ಷತ್ರಗಳನ್ನು ಗ್ರಹಗಳಂತೆ, ನಾವು ಆಕಾಶದಲ್ಲಿ ಕಾಣಬಹುದು. ಇಲ್ಲಿಯ ಶುಭ ನಕ್ಷತ್ರ ಮತ್ತು ಅಶುಭ ನಕ್ಷತ್ರಗಳಿವೆ. ಇದು ಮುಹೂರ್ತ ಭಾಗದಲ್ಲಿ ಉಪಯೋಗವಾಗುತ್ತದೆ.ನಕ್ಷತ್ರಗಳಿಗೆ ಗಣಗಳಿವೆ (ದೇವ,ರಾಕ್ಷಸ, ಮನುಷ್ಯ) ಲಿಂಗಗಳಿವೆ (ಪುರುಷ, ಸ್ತ್ರೀ, ನಪುಂಸಕ)ಮತ್ತು ಗುಣಗಳಿವೆ (ಸಾತ್ವಿಕ, ರಾಜಸ, ತಾಮಸ). ಮದುವೆಯ ನಿಶ್ಚಿತಕಾಲದಲ್ಲಿ, ಈ ಗಣಗಳ ಪರಿಶೀಲನೆ ಬಹಳ ಮುಖ್ಯ. ಆದರಿಂದ ಹುಡುಗ ಮತ್ತು ಹುಡುಗಿಯೂ ಜಾತಕ ಪರಿಶೀಲನೆಯಲ್ಲಿ, ನಕ್ಷತ್ರಗಳ ಪ್ರಭಾವ ಬಹಳವಿದೆ.ಜಾತಕ ಅಥವಾ ನಕ್ಷತ್ರ ತಿಳಿಯದಿದ್ದರೆ,ಹೆಸರಿನ ಮೇಲೂ ಈ ಲೆಕ್ಕಾಚಾರ ಮಾಡುವ ಪದ್ಧತಿ ಇದೆ. ಮಳೆಯ ನಕ್ಷತ್ರಗಳ ಆಧಾರದ ಮೇಲೆ ರೈತರು ಬೆಳೆ,ಕೊಯಿಲು,ಇತ್ಯಾದಿ ಸಂಬಂಧಪಟ್ಟ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಒಂದು ನಕ್ಷತ್ರಕ್ಕೆ ೪ ಪಾದಗಳಿರುತ್ತವೆ. ೯ ಪಾದಗಳಿಗೆ ಒಂದು ರಾಶಿಯಿರುತ್ತದೆ. ಒಟ್ಟು ೧೨ ರಾಶಿಗಳು. ಆದ್ದರಿಂದ ಒಟ್ಟು ೧೦೮ ಪಾದಗಳು. ಒಂದೊಂದು ರಾಶಿಗೂ ಹೆಸರಿದೆ-

ಮೇಷ, ವೃಷಭ,ಮಿಥುನ,ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ, ಮೀನ ಈ ರೀತಿ ೧೨ ರಾಶಿಗಳಿವೆ. ಇವು ಹೆಸರಿನಂತೆ ಆಕಾರವನ್ನು ಹೊಂದಿರುತ್ತದೆ. ಈ ರಾಶಿಗಳ ಆಕಾರದಂತೆ ಚಿಹ್ನೆಗಳಿವೆ (ಆಂಗ್ಲ ಭಾಷೆಯಲ್ಲಿ ಏರಿಸ್‌ನಿಂದ ಪಿಸೀಸ್.) ಒಂದೊಂದು ಪಾದವು ೩.೨೦ (೩ಡಿಗ್ರೀ ೨೦ ನಿಮಿಷ). ಆದ್ದರಿಂದ ಒಂದು ನಕ್ಷತ್ರಕ್ಕೆ ೧೩.೨೦ ಮಿತಿಯಿರುತ್ತದೆ. (೪ ಪಾದ ೧೩.೨೦) ಒಟ್ಟು ರಾಶಿಯ ಪರಿಮಾಣ ೩೦.೦೦'.ಆದ್ದರಿಂದ ೧೨ ರಾಶಿಚಕ್ರವು ೩೬೦ ಡಿಗ್ರಿಗೆ ಸೀಮಿತವಾಗಿರುತ್ತದೆ.

ಅಶ್ವಿನಿ, (೪ ಪಾದ), ಭರಣಿ (೪ಪಾದ) ಮತ್ತು ಕೃತ್ತಿಕೆ (೧ ಪಾದ) = ೯ ಪಾದ, ಮೇಷ ರಾಶಿಯಾಗುತ್ತದೆ. ಇದೇ ರೀತಿ,ಕೃತ್ತಿಕೆ ನಕ್ಷತ್ರದ ಉಳಿದ ೩ ಪಾದ, ರೋಹಿಣಿ ನಕ್ಷತ್ರದ ೪ ಪಾದಗಳು ಮತ್ತು ಮೃಗಶಿರೆ ನಕ್ಷತ್ರದ ೨ ಪಾದಗಳು ವೃಷಭ ರಾಶಿಯಾಗಿರುತ್ತದೆ. ಈ ಗಣನೆಯಿಂದ, ಪೂರ್ಣ, ಏಕಪಾದ, ದ್ವಿಪಾದ ಮತ್ತು ತ್ರಿಪಾದ ನಕ್ಷತ್ರಗಳ ಗಣನೆಯಾಗುತ್ತದೆ. ಈ ರಾಶಿ ಚಕ್ರದ ಒಂದೊಂದು ರಾಶಿಯು,ಮಾನವನ ದೇಹದ ಅಂಗಾಂಗಗಳನ್ನು ಸೂಚಿಸುತ್ತದೆ.ಈ ಆಧಾರದ ಮೇಲೆ, ಜಾತಕವನ್ನು ಪರಿಶೀಲಿಸುವ ಪದ್ಧತಿಯಿದೆ. ಸೌರಮಾನ ರೀತಿ ಯಲ್ಲಿ, ಈ ರಾಶಿಗಳ ಹೆಸರುಗುಳನ್ನೇ, ಆಯಾ ಮಾಸಕ್ಕೆ ಕೊಡ ಲಾಗಿದೆ. (ಮೇಷ ಮಾಸದಿಂದ ಮೀನ ಮಾಸ).

ಚಾಂದ್ರಮಾನ ರೀತ್ಯಾ - ಸಾಮಾನ್ಯವಾಗಿ, ಪೂರ್ಣಿಮಾ ಅಥವಾ ಹಿಂದೆ/ಮುಂದೆ ದಿನ ಇರುವ ನಕ್ಷತ್ರವೇ, ಆಯಾ ಮಾಸದ ಹೆಸರಾಗಿರುತ್ತದೆ.

ಉದಾಹರಣೆಗೆ: ಚೈತ್ರ ಶುದ್ಧಪೂರ್ಣಿಮಾ - ಚಿತ್ತಾ ನಕ್ಷತ್ರವಿದ್ದರೆ - ಚೈತ್ರಮಾಸ

ಕಾರ್ತಿಕ ಶುದ್ಧ ಪೂರ್ಣಿಮಾ - ಕೃತ್ತಿಕಾ ನಕ್ಷತ್ರವಿದ್ದರೆ- ಕಾರ್ತಿಕ ಮಾಸ

ಇದೇ ರೀತಿಯಲ್ಲಿ ಮಿಕ್ಕ ಮಾಸಗಳ ಹೊಂದಾಣಿಕೆ ಮಾಡಬಹುದು.

೪) ಯೋಗ - ಪಂಚಾಂಗದ ನಾಲ್ಕನೆಯ ಅಂಗ "ಯೋಗ". ಯೋಗವೆಂದರೆ ಒಂದಕ್ಕೆ ಒಂದು ಸೇರುವುದು-

ವಾರ + ತಿಥಿ; ರಾಶಿ +ತಿಥಿ; ತಿಥಿ + ನಕ್ಷತ್ರ ಇತ್ಯಾದಿ ನಕ್ಷತ್ರಗಳಂತೆ ಒಟ್ಟು ೨೭ ನಿತ್ಯ ಯೋಗಗಳಿವೆ. ಇದನ್ನು ವೈಜ್ಞಾನಿಕವಾಗಿ ಲೆಕ್ಕಚಾರ ಮಾಡಿರುತ್ತಾರೆ. ವಿಷ್ಕಂಭ ಯೋಗ, ಸೌಭಾಗ್ಯಯೋಗ, ಗಂಡಯೋಗ, ಇತ್ಯಾದಿ ಒಟ್ಟು ೨೭ ಯೋಗ ಗಳು. ಇವುಗಳಲ್ಲಿಯೂ ಅಶುಭ ಮತ್ತು ಶುಭ ಯೋಗಗಳಿವೆ.

೫) ಐದನೆಯ ಅಂಗ - ಕರಣ. ಕರಣಗಳು ಒಟ್ಟು ಹನ್ನೊಂದು ೧. ಬವ, ೨.ಬಾಲವ, ೩. ಕೌಲವ, ೪. ತೈತಲೆ, ೫. ಗರಜೆ, ೬. ವಣಿಕ್, ೭. ಭದ್ರೆ, ೮. ಶಕುನಿ, ೯. ಚತುಷ್ಪಾತ್, ೧೦. ನಾಗವಾನ್ , ೧೧. ಕಿಂಸ್ತುಘ್ನ, ಇಲ್ಲಿ, ಸ್ಥಿರ ಮತ್ತು ಚರ ಕರಣಗಳಿವೆ.

ಈ ಮೇಲಿನ ಎಲ್ಲಾ ಅಂಗಗಳನ್ನು ,ಸಾಮಾನ್ಯವಾಗಿ ಎಲ್ಲರೂ ಮತ್ತು ಜ್ಯೋತಿಷ್ಯರು ಉಪಯೋಗಿಸುತ್ತಾರೆ.

ಇತರ ವಿಷಯಗಳು -

ಯುಗದ ಕಾಲಪರಿಮಾಣ -

ಕೃತಯುಗ - ೧೭,೨೮,೦೦೦ ವರ್ಷಗಳು

ತ್ರೇತಾಯುಗ - ೧೨,೯೬,೦೦೦ ವರ್ಷಗಳು

ದ್ವಾಪರಯುಗ - ೮,೬೪,೦೦೦ ವರ್ಷಗಳು

ಕಲಿಯುಗ - ೪,೩೨,೦೦೦ ವರ್ಷಗಳು

ಒಟ್ಟು - ೪೩, ೨೦,೦೦೦ ವರ್ಷಗಳು

ಮೇಲಿನ ವರ್ಷಗಳನ್ನು ಗಮನಿಸಿದರೆ,ಒಂದು ಯುಗಕ್ಕೂ,ಮತ್ತೊಂದು ಯುಗಕ್ಕೂ ವ್ಯತ್ಯಾಸಗಳನ್ನು ಕಾಣ ಬಹುದು. ಕಲಿಯುಗದಲ್ಲಿ ೫೧೨೦ ವರ್ಷಗಳು ಮಾತ್ರ ಕಳೆದಿದೆ. ೫೧೨೦ - ೨೦೧೯ = ೩೧೦೧ ವರ್ಷಗಳ ಹಿಂದೆ ಕಲಿಯುಗ ಪ್ರಾರಂಭವಾಯಿತು.ಈ ಮೇಲಿನ ಒಟ್ಟು ೪೩,೨೦,೦೦೦ ವರ್ಷ ಗಳನ್ನು ಮಹಾಯುಗವೆಂದು ಕರೆಯುತ್ತಾರೆ. ೪ ಮಹಾಯುಗ- ಒಂದು ಕಲ್ಪ; ೪ ಕಲ್ಪ - ಒಂದು ಚತುರ್ಯುಗ, ೭೧ ಚತು ರ್ಯುಗ ಒಂದು ಮನ್ವಂತರಂ. ೧೪ ಮನ್ವಂತರ = ಬ್ರಹ್ಮನಿಗೆ ಒಂದು ದಿನ. ಈ ರೀತಿಯಾಗಿ ನಮಗೆ ಈ ಜ್ಯೋತಿ ಶಾಸ್ತ್ರವನ್ನು ನಮ್ಮ ಋಷಿಗಳು ಸಹಸ್ರಾರು ವರ್ಷಗಳ ಹಿಂದೆ ತಾವು ನೋಡಿದ ಜ್ಯೋತಿಯನ್ನು ಪರಿಗಣಿಸಿ, ವೈಜ್ಞಾನಿಕ ರೀತಿಯಲ್ಲಿ ನಮಗೆ ದಯಪಾಲಿಸಿದ್ದಾರೆ. ಎಲ್ಲರಿಂದಲೂ ಈ ನಮ್ಮ ಪೂರ್ವಜರು ವಂದನಾರ್ಹರು. ಅವರಲ್ಲಿ ಪ್ರಸಿದ್ಧರಾದವರು ೧೮ ಪ್ರವ ರ್ತಕರು.ಎಲ್ಲರೂ ಇವರನ್ನು ಈ ರೀತಿಯಾಗಿ ಸ್ಮರಿಸಿ ನಮ ಸ್ಕರಿಸುತ್ತಾರೆ. ಸಾಮಾನ್ಯವಾಗಿ ಹೇಳುವುದುಂಟು. ಜ್ಯೋತಿಷ ಸುಳ್ಳಲ್ಲ ಆದರೆ ಜ್ಯೋತಿಷಿ ಲೆಕ್ಕಚಾರದ ಅಭಾವದಿಂದ ತಪ್ಪು ಹೇಳಬಹುದು.

ಸೂರ್ಯಃ ಪಿತಾಮಹೋ ವ್ಯಾಸೋ ವಸಿಷ್ಠೋತ್ರಿ ಪರಾಶರಃ।
ಕಶ್ಯಪೋ ನಾರದೋ ಗರ್ಗೋ ಮರೀಚಿರ್ಮನುರಂಗಿರಾಃ॥
ಲೋಮಶಃ ಪೌಲಷಶ್ಚೈವ ಚ್ಯವನೋಯವನೋ ಭೃಗುಃ।
ಶೌನಕೋಷ್ಟಾದಷಪ್ಯೇತೇ ಜ್ಯೋತಿಶ್ಯಾಸ್ತ್ರ ಪ್ರವರ್ತಕಾಃ॥
ನಮೋ ನಮೋಷ್ಟಾದಶ ಜ್ಯೋತಿಶ್ಯಾಸ್ತ್ರ ಪ್ರವರ್ತಕೇಭ್ಯಃ

ಆದರಿಂದಲೆ ಈ ಜ್ಯೋತಿ ಶಾಸ್ತ್ರವು"ವೈಜ್ಞಾನಿಕ" ವಾದದ್ದು ಎಂದು ಎಲ್ಲರೂ ಎಲ್ಲ ಕಾಲದಲ್ಲಿಯೂ ಒಪ್ಪುವಂತಹ ವಿಜ್ಞಾನ.ಈ ಒಂದು ಆಧಾರದ ಮೇಲೆ, ವಿವಿಧ ಗಣಿತ ಶಾಸ್ತ್ರ ಪಂಡಿತರು ಲೆಕ್ಕಚಾರ ಮಾಡಿ ತಮ್ಮ ಬುದ್ಧಿಶಕ್ತಿಯಿಂದ (ಕಂಪ್ಯೂ ಟರ್ ಇಲ್ಲದ ಕಾಲ ) ಎಲ್ಲ ಕಾಲದ ಚಲನ- ವಲನಗಳನ್ನು, ಚಂದ್ರ ಮತ್ತು ಸೂರ್ಯ ಗ್ರಹಣಗಳ ಸಂಭವಿಕೆಯನ್ನು ಕರಾರು ವಾಕ್ಕಾಗಿ ಕೊಟ್ಟಿದ್ದಾರೆ.

ವರ್ಷ ಅಥವಾ ಸಂವತ್ಸರ ೬೦. ಅದು 'ಪ್ರಭವ' ದಿಂದ 'ಅಕ್ಷಯ". ಇದರಲ್ಲೂ, ಉತ್ತಮ, ಮಧ್ಯಮ, ಮತ್ತು ಅಧಮ ಸಂವತ್ಸರಗಳಿವೆ. ಒಂದೊಂದು ಸಂವತ್ಸರಕ್ಕೂ, ಒಂದೊಂದು ಅಭಿಮಾನಿ ದೇವತೆಯಿದೆ. ಪ್ರಭವ - ಬ್ರಹ್ಮ; ವಿಕೃತಿ - ರವಿ; ಅಕ್ಷಯ - ಲಕ್ಷ್ಮೀ ಇತ್ಯಾದಿ. ಈಗಿನ ಸಂವತ್ಸರ - ವಿಕಾರಿ. ೧೨ ಮಾಸಗಳಿಗೆ ಒಂದು ಸಂವತ್ಸರ. ೨ ಮಾಸಗಳಿಗೆ ಒಂದು ಋತು. ಈ ಋತುಗಳು ವಿವಿಧ ಕಾಲವನ್ನು ಸೂಚಿಸುತ್ತವೆ.

**ಚಾಂದ್ರಮಾಸ (ಸೌರಮಾಸ)**

ಚೈತ್ರ - ವೈಶಾಖ (ಮೀನ - ಮೇಷ) - ವಸಂತ ಋತು - ವಸಂತಕಾಲ

ಜ್ಯೇಷ್ಠ - ಆಷಾಢ (ವೃಷಭ - ಮಿಥುನ) - ಗ್ರೀಷ್ಮ ಋತು- ಬೇಸಿಗೆ ಕಾಲ

ಶ್ರಾವಣ - ಭಾದ್ರಪದ (ಕಟಕ - ಸಿಂಹ ) - ವರ್ಷಋತು-ಮಳೆಗಾಲ

ಆಶ್ವಯುಜ - ಕಾರ್ತಿಕ (ಕನ್ಯಾ - ತುಲಾ) - ಶರದೃತು-ಶರತ್ಕಾಲ

ಮಾರ್ಗಶಿರ-ಪುಷ್ಯ (ವೃಶ್ಚಿಕ-ಧನಸ್ಸು)- ಹಿಮಂತಋತು-ಮಂಜುಬೀಳುವಕಾಲ

ಮಾಘ - ಫಾಲ್ಗುಣ (ಮಕರ - ಕುಂಭ) - ಶಿಶಿರ ಋತು- ಮರಗಳು ಚಿಗುರುವ ಕಾಲ.

ಈ ಪ್ರಕೃತಿಯ ರೀತಿಯನ್ನು ಪರಮಾತ್ಮನ ವಿನಹ ಯಾರಿಂದಲೂ ಸೃಷ್ಟಿಸಲು ಸಾಧ್ಯವಿಲ್ಲ.

ಆಯಣ-ಒಂದು ಸಂವತ್ಸರದಲ್ಲಿ ಎರಡು ಆಯಣಗಳು. ಉತ್ತರಾಯಣ ಮತ್ತು ದಕ್ಷಿಣಾಯಣ. ಇದು ಸೂರ್ಯನ ಚಲನೆಯಿಂದ ಆಗುತ್ತದೆ. ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗಲು ಒಂದು ತಿಂಗಳು ಬೇಕು. ಸಾಮಾನ್ಯವಾಗಿ ೧೪ ನೇ ದಿನಾಂಕ ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವುದು (ಸಂಕ್ರಮಣ). ಮೇಷ ಸಂಕ್ರಮಣ,ತುಲಾ ಸಂಕ್ರಮಣ ಇತ್ಯಾದಿ. ಸೂರ್ಯನು ಮಕರರಾಶಿಗೆ ಬಂದಾಗ (ಜನವರಿ ೧೪ ನೇ ದಿನಾಂಕ), ಮಕರಸಂಕ್ರಮಣ ಇಲ್ಲಿಂದ ಉತ್ತರಾಯಣ ಆರಂಭ. ಸೂರ್ಯನು ತನ್ನ ಚಲನೆಯಿಂದ ಕಟಕ ರಾಶಿಗೆ ಬಂದಾಗ "ಕಟಕ ಸಂಕ್ರಮಣ"ಉತ್ತರಾಯಣ ಕೊನೆಗೊಂಡು ದಕ್ಷಿಣಾಯಣ ಆರಂಭ. ಈ ರೀತಿ ಆಯಣ ಚಕ್ರ ಮುಂದುವರಿಯುತ್ತದೆ.ದಕ್ಷಿಣಾಯಣ ಪಿತೃ ಕಾರ್ಯಗಳಿಗೆ ಶ್ರೇಷ್ಠ. ಉತ್ತರಾಯಣ ಶುಭಕಾರ್ಯಗಳಿಗೆ ಶ್ರೇಷ್ಠ.ಉತ್ತರಾಯಣದಲ್ಲಿ ಸ್ವರ್ಗದ ಬಾಗಿಲು ತೆರೆಯುತ್ತದೆ ಮತ್ತು ಆಗ ದೇಹ ತ್ಯಾಗ ಮಾಡಿದವರ ಆತ್ಮ ಸ್ವರ್ಗಕ್ಕೆ ಹೋಗುವುದು ಎಂಬ ನಂಬಿಕೆ. ತಂದೆಯಿಂದ ವರ ಪಡೆದು,ಇಚ್ಛಾಮರಣಿಯಾದ'ಭೀಷ್ಮಾಚಾರ್ಯರು" ಉತ್ತರಾಯಣದಲ್ಲಿ ದೇಹತ್ಯಾಗ ಮಾಡಿದರು ಎಂಬುದನ್ನು ನಾವು ಕೇಳಿದ್ದೇವೆ.

ಗ್ರಹಗಳು - ಒಟ್ಟು ೯ ಗ್ರಹಗಳು - ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನೈಶ್ಚರ, ರಾಹು ಮತ್ತು ಕೇತು. ಈ ಗ್ರಹಗಳನ್ನು ಮೂರು ವಿಧವಾಗಿ ವಿಂಗಡಿಸಲಾಗಿದೆ.

೧. ಸ್ವಪ್ರಕಾಶ ಗ್ರಹಗಳು - ಸೂರ್ಯ ಮತ್ತು ಚಂದ್ರ.

೨. ಅಪ್ರಕಾಶ ಗ್ರಹಗಳು - ಮಂಗಳ, ಶುಕ್ರ, ಬುಧ, ಗುರು, ಶನಿ.

೩. ಛಾಯಾ ಗ್ರಹಗಳು - ರಾಹು ಮತ್ತು ಕೇತು.

ರಾಹುಗ್ರಹವನ್ನು 'ಸರ್ಪ' ಮತ್ತು ಕೇತು ಗ್ರಹವನ್ನು 'ಶಿಖಿ' ಎಂದು ಕರೆಯುತ್ತಾರೆ. ಇದಕ್ಕೆ ಅಮೃತಮಥನಕಾಲದ ನಡೆದ ಘಟನೆಯೇ ಕಾರಣ.

ಎಲ್ಲ ಗ್ರಹಗಳಿಗೂ, ಚಿನ್ಹೆಗಳಿವೆ, ಅಂಗ, ಗುಣ, ದಿಕ್ಕು, ಕಾರಕತ್ವ, ಸ್ವಭಾವ ಮಿತ್ರ, ಪರಮಮಿತ್ರ, ಶತ್ರು, ಪರಮ ಶತ್ರು ಇತ್ಯಾದಿಗಳಿವೆ. ಶುಭ ಮತ್ತು ಅಶುಭಗ್ರಹಗಳಿವೆ. ೩ ನಕ್ಷತ್ರಕ್ಕೆ ಒಂದು ಗ್ರಹ ಅಧಿಪತಿಯಾಗಿರುತ್ತದೆ. ಹಾಗೆಯೇ ೭ ಗ್ರಹಗಳು ರಾಶ್ಯಾಧಿಪತಿಗಳಾಗಿರುತ್ತಾರೆ.ಇನ್ನೆರಡು ಛಾಯಗ್ರಹಗಳಾದ ರಾಹು ಮತ್ತು ಕೇತುಗಳಿಗೆ ರಾಶ್ಯಾಧಿಪತಿ ಸ್ಥಾನವಿಲ್ಲ. ಗ್ರಹಾಧಿಪತ್ಯದಲ್ಲಿ, ೭ ಗ್ರಹಗಳಿಗೆ ವಿಶಿಷ್ಟವಾದ ಸ್ಥಾನಗಳಿವೆ.ಸೂರ್ಯ - ರಾಜ; ಚಂದ್ರ - ರಾಣಿ, ಬುಧ - ಯುವರಾಜ. ಈ ರೀತಿಯಾಗಿ, ಇತರ ಗ್ರಹಗಳಿಗೂ ಅಧಿಪತ್ಯವಿರುತ್ತದೆ.

| ಗ್ರಹ | ನಕ್ಷತ್ರ | ರಾಶಿ |
|---|---|---|
| ಸೂರ್ಯ | ಕೃತ್ತಿಕೆ, ಉತ್ತರೆ,ಉತ್ತರಾಷಾಢ | ಸಿಂಹ |
| ಚಂದ್ರ | ರೋಹಿಣಿ, ಹಸ್ತ,ಶ್ರವಣ | ಕಟಕ |
| ಕುಜ | ಮೃಗಶಿರ, ಚಿತ್ತೆ, ಧನಿಷ್ಠ | ಮೇಷ ಮತ್ತು ವೃಶ್ಚಿಕ |
| ಬುಧ | ಆಶ್ಲೇಷ, ಜ್ಯೇಷ್ಠ, ರೇವತಿ | ಮಿಥುನ ಮತ್ತು ಕನ್ಯಾ |
| ಗುರು | ಪುನರ್ವಸು,ವಿಶಾಖ, ಪೂರ್ವಾಭಾದ್ರೆ | ಧನಸ್ಸು ಮತ್ತು ಮೀನ |
| ಶುಕ್ರ | ಭರಣಿ, ಪುಬ್ಬೆ, ಪೂರ್ವಾಷಾಢ | ವೃಷಭ ಮತ್ತು ತುಲಾ |
| ಶನೈಶ್ಚರ | ಪುಷ್ಯ, ಅನೂರಾಧ, ಉತ್ತರಭಾದ್ರ | ಮಕರ ಮತ್ತು ಕುಂಭ |
| ರಾಹು | ಆರಿದ್ರೆ, ಸ್ವಾತಿ, ಶತಭಿಷೆ | ಇಲ್ಲ |
| ಕೇತು | ಅಶ್ವಿನಿ, ಮಖೆ, ಮೂಲ | ಇಲ್ಲ |

ನವಗ್ರಹಗಳ ಪಾತ್ರ, ವ್ಯಕ್ತಿ ಮತ್ತು ಸಮಷ್ಟಿಯಲ್ಲಿ ಬಹಳ ಮುಖ್ಯವಾದದ್ದು. ವ್ಯಕ್ತಿಯಲ್ಲಿ , ಸೂರ್ಯ - ಆರೋಗ್ಯ; ಚಂದ್ರ- ಯಶಸ್ಸು; ಕುಜ - ಅಧಿಕಾರ; ಬುಧ - ಬುದ್ಧಿ; ಗುರು - ಗೌರವ; ಶುಕ್ರ - ವಾಕ್ಚಾತುರ್ಯ; ಶನೈಶ್ಚರ - ಸಂತೋಷ; ರಾಹು - ಭುಜಬಲ, ಕೇತು - ವಂಶಾಭಿವೃದ್ಧಿ. ಈ ರೀತಿಯಾಗಿ ನವಗ್ರಹ ಪ್ರಾರ್ಥನಾ ಶ್ಲೋಕವಿದೆ.

ಆರೋಗ್ಯಂ ಪ್ರದದಾತು ನೋ ದಿನಕರಃ ಚಂದ್ರೋ ಯಶೋ ನಿರ್ಮಲಂ ।
ಭೂತಿಂ ಭೂಮಿಸುತಃ ಸುಧಾಂಶುತ ನಯಃ ಪ್ರಜ್ಞಾಂ ಗುರುರ್ಗೌರವಂ ॥

ಕಾನ್ಯಃ (ಕಾವ್ಯಃ) ಕೋಮಲವಾಗ್ವಿಲಾಸಮತುಲಂ ಮಂದೋ ಮುದಮ್ ಸರ್ವದಾ ।
ರಾಹುರ್ಬಾಹುಬಲಂ ವಿರೋಧಶಮನಂ ಕೇತುಃ ಕುಲಸ್ಯೋನ್ನತಿಮ್ ॥

ಇದೇ ರೀತಿ, ವ್ಯಾಸರು ರಚಿಸಿದ "ನವಗ್ರಹಸ್ತೋತ್ರ" ದಲ್ಲಿಯೂ,ಮಕ್ಕಳಿಗೆ ಮತ್ತು ನಮಗೆ ಗ್ರಹಗಳ ವಿಷಯವಾಗಿ ಬಹಳಷ್ಟು ತಿಳಿಯುತ್ತದೆ.

ಜಪಾಕುಸುಮಸಂಕಾಶಂ ಕಾಶ್ಯಪೇಯಂ ಮಹಾದ್ಯುತಿಮ್ ।
ತಮೋಽರಿಂ ಸರ್ವಪಾಪಘ್ನಂ ಪ್ರಣತೋಽಸ್ಮಿ ದಿವಾಕರಮ್ ॥

ಪಲಾಶಪುಷ್ಪಸಂಕಾಶಂ ತಾರಕಾಗ್ರಹಮಸ್ತಕಮ್ ।
ರೌದ್ರಂ ರೌದ್ರಾತ್ಮಕಂ ಘೋರಂ ತಂ ಕೇತುಂ ಪ್ರಣಮಾಮ್ಯಹಮ್ ॥

ಆಯಾಯ ಗ್ರಹಗಳಿಗೆ, ದಿಕ್ಕು, ದಾನ್ಯ, ಬಣ್ಣ, ಮಂಡಲ, ಆದಿದೇವತೆ, ಇತ್ಯಾದಿ ಇವೆ. ನವಗ್ರಹ ಹೋಮ ಮಾಡುವಾಗ, ಆಯಾಯ ಸಮಿತ್ತುಗಳನ್ನು ಉಪಯೋಗಿಸುವುದನ್ನು ನಾವು ಕಾಣುತ್ತೇವೆ.

ಇನ್ನು ಸಮಷ್ಟಿಯಾಗಿ ನೋಡಿದರೆ - ನೂತನ ವರ್ಷದಲ್ಲಿ ಯಾರು ಯಾರು ಅಧಿಪತಿಗಳಾಗಿರುತ್ತಾರೆ ಎಂಬುದನ್ನು ನಾವು ಸುಲಭವಾಗಿ ಕಂಡುಕೊಳ್ಳಬಹುದು.

ರಾಜ - ಚೈತ್ರಶುದ್ಧ ಪ್ರತಿಪದ (ಚಾಂದ್ರಮಾನ ಯುಗಾದಿ) ಯಾವ ವಾರವಿರುತ್ತದೆಯೊ, ಆ ವಾರಾಧಿಪತಿಯೇ ರಾಜ, ಈ ವರ್ಷದ ರಾಜ - ಶನಿ;

ಮಂತ್ರಿ-ಮೇಷ ಸಂಕ್ರಾಂತಿ ಯಾವ ವಾರದಲ್ಲಿ ದೆಯೋ, ಆ ವಾರಾಧಿಪತಿಯೇ-ಮಂತ್ರಿ. ಈ ವರ್ಷ "ಸೂರ್ಯ' ಮಂತ್ರಿ.

ಸೇನಾಧಿಪ - ಸಿಂಹ ಸಂಕ್ರಾಂತಿಯ ವಾರಾಧಿಪತಿ ಆ ವರ್ಷದ - ಸೇನಾಧಿಪ, ಈವರ್ಷ "ಶನಿ" ಸೇನಾಧಿಪತಿ.

ಸಸ್ಯಾಧಿಪ - ಕರ್ಕ ಸಂಕ್ರಾಂತಿ ವಾರಾಧಿಪತಿ - ಸಸ್ಯಗಳ ಅಧಿಪತಿಯಾಗಿರುತ್ತಾನೆ. ಈ ವರ್ಷ "ಬುಧ" ಸಸ್ಯಾಧಿಪತಿ.

ಧಾನ್ಯಾಧಿಪ - ಧನುಸಂಕ್ರಾಂತಿ ವಾರಾಧಿಪತಿ - ಧಾನ್ಯಾಧಿಪ. "ವಿಕಾರಿ" ಸಂವತ್ಸರದಲ್ಲಿ ಚಂದ್ರ ಧಾನ್ಯಾಧಿಪ. ಹೇಗೆ ರಾಜ್ಯ ಅಥವಾ ದೇಶದ ಅಭಿವೃದ್ಧಿ, ಸುಭಿಕ್ಷತೆ ಆಳುವ ಮಂತ್ರಿ ಮಂಡಲ (ಕ್ಯಾಬಿನೆಟ್) ಮತ್ತು ಅಧಿಕಾರಿಗಳ ಆಡ ಳಿತದ ಮೇಲೆ ಅವಲಂಬಿಸಿರುತ್ತದೆಯೋ, ಹಾಗೆ ಗ್ರಹಗಳ ಗುಣ, ಸ್ವಭಾವ ಮತ್ತು ಕಾರಕತ್ವದ ಮೇಲೆ, ಫಲಗಳನ್ನು ಕಾಣ ಬಹುದು.

ಹೀಗೆ, ವೈಜ್ಞಾನಿಕವಾಗಿ ಗಣಿತ ಶಾಸ್ತ್ರದ ಆಧಾರದ ಮೇಲೆ, ನಮ್ಮ ಋಷಿಪರಂಪರೆ ಕೊಟ್ಟ ಈ ವಿಜ್ಞಾನವನ್ನು, ಪಂಚಾಂಗ ಕರ್ತರು "ಪಂಚಾಂಗ" ದ ರೂಪದಲ್ಲಿ ಹಿಂದಿ ನಿಂದಲೂ ಎಲ್ಲರ ಅನುಕೂಲಕ್ಕಾಗಿ ಕೊಟ್ಟಿದ್ದಾರೆ. ಆ ಪರಂಪರೆಗೇ ನಮಸ್ಕಾರಪೂರ್ವಕವಾದ ಅನಂತಾನಂತ ವಂದನೆಗಳು.

ಹಾಗೆಯೇ, ಗ್ರಹಗಳು, ಒಂದೊಂದು ರಾಶಿಯಿಂದ ಇನ್ನೊಂದು ರಾಶಿಗೆ ಸಂಚಲಿಸುತ್ತದೆ. ಇದಕ್ಕೆ 'ಗ್ರಹ ಗೋಚಲಿ" ಇತ್ಯಾದಿ ಕರೆಯುತ್ತಾರೆ. ಕಾಲಕ್ರಮೇಣ. ಇದು 'ಗ್ರಹಚಾರ", ಮತ್ತು "ಗಾಚಾರ" ಇತ್ಯಾದಿ ಆಡುಭಾಷೆಯಾಗಿಬಿಟ್ಟಿದೆ. ಒಂಬತ್ತು ಗ್ರಹಗಳು ೧೨ ರಾಶಿಚಕ್ರವನ್ನು ಸುತ್ತುತ್ತದೆ. ಗ್ರಹಗಳ ದೂರದ ಆಧಾರದಮೇಲೆ, ಆಯಾಯ ಗ್ರಹಗಳು ಕಮ್ಮಿಕಾಲ ಅಥವಾ ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗಲು ಗ್ರಹ ಸಾಮಾನ್ಯವಾಗಿ ಈ ಸಮಯವನ್ನು ತೆಗೆದುಕೊಳ್ಳುತ್ತದೆ.

ಚಂದ್ರ - ೨.೨೫ ದಿನ

ಸೂರ್ಯ, ಬುಧ, ಶುಕ್ರ - ಒಂದು ತಿಂಗಳು

ಕುಜ - ೪೫ ದಿನಗಳು

ಗುರು - ಒಂದು ವರ್ಷ

ಶನಿ - ೨.೫೦ ವರ್ಷಗಳು

ರಾಹು ಮತ್ತು ಕೇತು - ೫೬.೫ ದಿವಸಗಳು. ಈ ಗ್ರಹಗಳು ಎದುರುಬದುರು ಇರುತ್ತದೆ.

ಆಯಾಯ ಗ್ರಹಗಳ ಚಾರದಲ್ಲಿ, ವ್ಯಕ್ತಿ ಮತ್ತು ಸಾಮೂಹಿಕವಾಗಿ ಬದಲಾವಣೆ ಕಾಣಬಹುದು. ಜಾತಕದ ಆಧಾರದ ಮೇಲೆ ಗ್ರಹಗಳ ಪರಿಣಾಮ ಮತ್ತು ಇತರ ವಿಷಯ ಗಳನ್ನು ಪರಿಣಿತರು (ದೈವಜ್ಞ) ತಿಳಿಸುತ್ತಾರೆ. ಜಾತಕ ಬರೆ ಯಲು, ಮುಖ್ಯವಾಗಿ ಸರಿಯಾದ ಹುಟ್ಟಿದ ದಿನಾಂಕ, ಕಾಲ, ಮತ್ತು ಸ್ಥಳ ಬೇಕು. ಇದರಿಂದ ಆ ಪ್ರದೇಶದ "ಅಕ್ಷಾಂಶ' , ರೇಖಾಂಶ' ಮತ್ತು ಸೂರ್ಯೋದಯದ ಆಧಾರದಮೇಲೆ ಸರಿಯಾದ ಲಗ್ನ, ಮತ್ತು ಇತರ ಗ್ರಹಗಳ ಸ್ಥಾನವನ್ನು ಜಾತಕ ದಲ್ಲಿ ಅಳವಡಿಸಲು ಸಾಧ್ಯ. ಜಾತಕ ಸರಿಯಾಗಿಲ್ಲದ್ದಿದ್ದರೆ, ಎಲ್ಲವೂ ತಪ್ಪಾಗಿ ಸರಿಯಾದ ಪರಿಶೀಲನೆ ಸಾಧ್ಯವಾಗು ವುದಿಲ್ಲ.ಇದೇ ರೀತಿ ವಿವಿಧ ಪ್ರದೇಶದ ಸೂರ್ಯೋದಯದ ಆಧಾರದ ಮೇಲೆ ಇತರ ಕಾಲಗಳು ರಾಹುಕಾಲ, ಇತ್ಯಾದಿ ಬದಲಾವಣೆ ಆಗುತ್ತದೆ.

ಚಾಂದ್ರಾಮಾನ ಯುಗಾದಿ (ಚೈತ್ರ ಶುದ್ಧ ಪಾಡ್ಯಮಿ) ೦೬.೦೪.೨೦೧೯ - ಶನಿವಾರ. ಮುಂಬರುವ "ವಿಕಾರಿ" ನಾಮ ಸಂವತ್ಸರವು ಸರ್ವರಿಗೂ ಆರೋಗ್ಯ, ಶುಭ, ಸಂತೋಷ, ಶಾಂತಿ ಮತ್ತು ನೆಮ್ಮದಿ ತರಲಿ ಎಂದು ಪ್ರಾರ್ಥಿಸಿ ಎಲ್ಲರೂ ಬೇವು ಬೆಲ್ಲದ ಸವಿಯನ್ನು ಪಡೆಯೋಣ.

ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ ।
ಸರ್ವಾರಿಷ್ಟವಿನಾಶಾಯ ನಿಂಬಕಂದಳ ಭಕ್ಷಣಂ ॥



# ಒಂಟಿಮಿಟ್ಟದಲ್ಲಿ ಕೋದಂಡರಾಮನು



- ತೆಲುಗು ಮೂಲ. ಕೆ. ನರಸಿಂಹಲು

- ಅನುವಾದ ಶ್ರೀಮತಿ. ಆರ್. ಕೃಷ್ಣವೇಣಿ

ಸೀತಾರಾಮಲಕ್ಷ್ಮಣರು ಒಂದೇ ಶಿಲೆಯಲ್ಲಿ ಕೆತ್ತಲ್ಪಟ್ಟಿದ್ದಾರೆಂದು, ಒಂದೇ ಪೀಠದ ಮೇಲೆ ನೆಲೆಸಿದ್ದಾರೆಂದು, ರಾಮನು ಒಂದೇ ಮಾತು,ಒಂದೇ ಬಾಣ,ಒಂದೇ ಸತಿ ಎಂದು ಪ್ರಕಟಿಸಿದ್ದನೆಂದು ಒಂದೇ ಒಂದು ಬಾಣದಿಂದಲೇ ದಾಹ ತೀರಲು ಒಂದು ತೀರ್ಥವನ್ನು ಸೃಷ್ಟಿಸಿದನೆಂದು,ಬೆಟ್ಟದ ಮೇಲೆ ದೇವಾಲಯವನ್ನು ನಿರ್ಮಿಸಲಾಗಿದೆಯೆಂದು,ಈ ಸ್ಥಳದಲ್ಲಿ ಮೃಕಂಡು ಮುನಿ ಯಜ್ಞಯಾಗಾದಿಗಳನ್ನು ಭಗ್ನ ಮಾಡುವ ರಾಕ್ಷಸರೆಲ್ಲರನ್ನೂ ಒಂದೇ ಒಂದು ಬಾಣದಿಂದ ಸಂಹರಿಸಿದ್ದಾನೆಂದು, ಹೀಗೆ ಅನೇಕ ಕಥನಗಳಿಂದ ವಿವರಿಸ ಲಾಗಿರುವುದರಿಂದ ಇದಕ್ಕೆ ಒಂಟಿಮಿಟ್ಟ ಎಂಬ ಹೆಸರು ಸಾರ್ಥಕವಾಗಿದೆಯೆಂದು ಊರಿನ ಜನ ಹೇಳುತ್ತಾರೆ.

ತ್ರೇತಾಯುಗದಲ್ಲಿ ದಂಡಕಾರಣ್ಯಕ್ಕೆ ಬಂದ ಸೀತಾರಾಮ ಲಕ್ಷ್ಮಣರು, ಅಲ್ಲಿನ ಸಂತ ಋಷಿಮುನಿಗಳ ಪ್ರಾರ್ಥನೆಯಂತೆ ದುಷ್ಟಮೃಗಗಳನ್ನೂ, ನರಹಂತಕ ರಾಕ್ಷಸರನ್ನೂ ನಿರ್ನಾಮ ಮಾಡುತ್ತ ನಡೆದಿರಲು, ಒಂಟಿಮಿಟ್ಟ ಪ್ರದೇಶದಲ್ಲಿ ನೀರಿನ ಸೆಲೆಯೇ ಇಲ್ಲದಿರುವುದನ್ನು ಸೀತೆ ಗುರುತಿಸಿ ತೋರಿಸಿದಳು.ರಾಮಚಂದ್ರನ ಬಾಣ ಪ್ರಯೋಗದಿಂದ ರಾಮ ತೀರ್ಥವೂ, ಲಕ್ಷ್ಮಣನ ಬಾಣ ಪ್ರಯೋಗದಿಂದ ಲಕ್ಷ್ಮಣ ತೀರ್ಥವೂ ಉಂಟಾದವು.ಋಷಿಮುನಿಗಳಿಗೂ, ಸಾಧುಪ್ರಾಣಿ ಪಕ್ಷಿಗಳಿಗೂ ವಸತಿ ಯೋಗ್ಯಸ್ಥಳವುಂಟಾಯಿತು. ಆರಾಧಿಸಲು ಅನುಕೂಲವಾಗುವಂತೆ ಅಲ್ಲಿಯೇ ನಿಲ್ಲಲು ಅವರನ್ನು ಮುನಿಗಳು ಪ್ರಾರ್ಥಿಸಿದರು.

ಸೀತರಾಮಲಕ್ಷ್ಮಣರು ಮತ್ತೊಂದು ಕಡೆಗೆ ಹೊರಟರು. ಸೀತಾದೇವಿಯನ್ನು ರಾವಣನು ಅಪಹರಿಸಿದರು. ರಾಮ ಸುಗ್ರೀವರೊಂದಿಗೆ ಸ್ನೇಹ ಏರ್ಪಟ್ಟಿತು.ಅಂಜನೇಯನು ಜಾಂಬವಂತನು ಸೀತದೇವಿಯನ್ನು ಹುಡುಕುವ ಕೆಲಸದಲ್ಲಿದ್ದರು. ಜಾಂಬವಂತನು ತನಗೆ ಕೃತಯುಗದಲ್ಲಿ ರಾಮಚಂದ್ರನು ದರ್ಶನವಿತ್ತ ಸ್ಥಳಕ್ಕೆ ಬಂದನು.ಆ ರಾತ್ರಿ ಅಲ್ಲಿಯೇ ವಿಶ್ರಾಂತಿ ತೆಗೆದುಕೊಂಡನು.ಬೆಳಗ್ಗೆ ಆ ಸ್ಥಳಕ್ಕೆ ನಮಸ್ಕರಿಸಿ ಸೀತಾದೇವಿಯನ್ನು ಹುಡಕಲು ಹೊರಟು ಹೋದನು. ಕಲಿಯುಗದಲ್ಲಿ ಇಲ್ಲಿ ಆಲಯ ನಿರ್ಮಾಣವಾಯಿತು. ಆಲಯದಲ್ಲಿ ವನವಾಸಮಾಡುತ್ತಿರುವ ಅಂದಿನ ಸೀತಾರಾಮ ಲಕ್ಷ್ಮಣರು ಇಲ್ಲಿಯೇ ನೆಲಸಿದ್ದಾರೆ. ಆದ್ದರಿಂದಲೇ ಪ್ರಜೆಗಳು ಒಂಟಿಮಿಟ್ಟ ಆಲಯವನ್ನು 2ನೇ ಅಯೋಧ್ಯವಾಗಿ ಕರೆಯುತ್ತಾರೆ.

ಕಲಿಯುಗ ಕ್ರಿ.ಶ. 14 ಶತಮಾನದಲ್ಲಿ ವಿದ್ಯಾರಣ್ಯ ಮಹರ್ಷಿಯವರ ಆಶೀರ್ವಾದದಿಂದ ಅಕ್ಕರಾಯರು ಬುಕ್ಕರಾಯರು ವಿಜಯನಗರ ಸಾಮಾಜ್ಯವನ್ನು ಸ್ಥಾಪಿಸಿದರು. ದಕ್ಷಿಣ ಭಾರತದೇಶದಲ್ಲಿ ವಿದೇಶಿಯರಿಂದ ರಕ್ಷಿಸಲು ಹಿಂದೂ ಧರ್ಮವನ್ನು ಕಾಪಾಡುವುದೇ ಅವರ ಲಕ್ಷ್ಯವಾಗಿತ್ತು. ವಿಜಯನಗರ ಸಾಮ್ರಾಜ್ಯವು ದಿನೇದಿನೇ ಅಭಿವೃದ್ಧಿಯಾಯಿತು. ಉದಯಗಿರಿ ಕೇಂದ್ರವಾಗಿ ಬುಕ್ಕರಾಯನ ಸೋದರನು ಕಂಪರಾಯರು ಪೂರ್ವ ಪ್ರಾಂತ್ಯವನ್ನು ಪರಿಪಾಲಿಸಿದರು. ಒಂಟೋಡು ಮಿಟ್ಟೋಡು ಎಂಬ ಇಬ್ಬರು ಚೋರರು ಪ್ರಸಿದ್ಧರಾಗಿದ್ದರು. ಅವರು ತಾವು ಕಳ್ಳತನ ಮಾಡಿದ ಚಿನ್ನಬೆಳ್ಳಿ ವಸ್ತುಗಳನ್ನು ಸೀತಾರಾಮ ಲಕ್ಷ್ಮಣರಿದ್ದ ಗುಹೆಯಲ್ಲಿ ಬಚ್ಚಿಡುತ್ತಿದ್ದರಂತೆ. ಅದರಂತೆ ಒಮ್ಮೆ ಕಳ್ಳಮಾಲು ಇಡಲು ಇಬ್ಬರೂ ಗುಹೆಯ ಒಳಗೆ ಬಂದಾಗ ರಾಮದೇವರು ಅವರಿಗೆ ಸನ್ಮಾರ್ಗದ ಬೋಧೆ ಮಾಡಿದರು.ದೇವರೇ ದೊಡ್ಡದಾರಿ ತೋರಿದ ಮೇಲೆ ಕಳ್ಳರು ಒಳ್ಳೆಯವರಾಗುವುದು ಪವಾಡವೇನಲ್ಲ. ಒಂಟೋಡು ಮಿಟ್ಟೋಡು ಇಬ್ಬರೂ ಸನ್ಮಾರ್ಗ ಹಿಡಿದರು, ಭಕ್ತರಾದರು.ತಮಗೆ ದಾರಿದೀಪವಾದ ಸೀತಾರಾಮ ಲಕ್ಷ್ಮಣರಿಗೆ ಗುಡಿ ಕಟ್ಟಿಸಿದರು.

ಕ್ರಿ.ಶ. 1356 ರಲ್ಲಿ ಬುಕ್ಕರಾಯರು ಚಕ್ರವರ್ತಿಯಾಗಿ ಕಾಶಿರಾಮೇಶ್ವರ ಯಾತ್ರೆ ಮಾಡಿದರು. ಯಾತ್ರೆಯ ಮಾರ್ಗದಲ್ಲಿ ಒಂಟಿಮಿಟ್ಟದಲ್ಲಿ ಸೀತಾ ರಾಮಲಕ್ಷ್ಮಣರ ಏಕಾಶಿಲಾ ವಿಗ್ರಹ

ವನ್ನು ಪ್ರತಿಷ್ಠಿಸಿದರು. ವಿದ್ಯಾರಣ್ಯ ಮಹರ್ಷಿಯರ ನೇತೃತ್ವದಲ್ಲಿ ಆಲಯ ಪ್ರತಿಷ್ಠೆ ನಡೆಯಿತು.

ಶ್ರೀರಾಮನು - ಕೃತಯುಗದಲ್ಲಿ ಜಾಂಬವಂತನಿಗೆ ವರವನ್ನು ನೀಡಲು ಇಲ್ಲಿಗೆ ಬಂದರು. ತ್ರೇತಾಯುಗದಲ್ಲಿ ಮುನಿಗಳಿಗೆ ಯಾಗ ರಕ್ಷಣೆಗಾಗಿ ದುಷ್ಟರ ಸಂಹಾರಕ್ಕಾಗಿ ಇಲ್ಲಿಗೆ ಬಂದರು.ಇನ್ನು ಕಲಿಯುಗದಲ್ಲಿ ಧರ್ಮವನ್ನು ನೆಲಸುವುದಕ್ಕಾಗಿ ಒಂಟಿಮಿಟ್ಟ ಆಲಯದಲ್ಲಿ ನೆಲಸಿದ್ದಾರೆ.

ಬುಕ್ಕರಾಯರ ಕಾಲಕ್ಕೆ ಒಂಟಿಮಿಟ್ಟ ಆಲಯ ಇಷ್ಟು ದೊಡ್ಡ ಆಲಯ ಇರಲಿಲ್ಲ. ಆಗ ಗರ್ಭಾಲಯ, ಅಂತರಾಲಯ, ಮುಖಮಂಟಪ, ಗರ್ಭಾಲಯದ ಮೇಲೆ ಚಿಕ್ಕ ಗೋಪುರ ಮಾತ್ರವೇ ಇದ್ದಿತು.

ಕ್ರಿ.ಶ. 1600 ರಿಂದ ಆಲಯ ಅಭಿವೃದ್ಧಿಯಾಯಿತು. ಸಿದ್ಧವಟವನ್ನು ಪಾಲಿಸಿದ ಮಟ್ಲರಾಜು ಅನಂತರಾಜು ಅವರ ಮಗ ತಿರುವೆಂಗಳನಾಥನು,ಅವರ ಮಗ ಕುಮಾರ ಅನಂತ ರಾಜು ಮೂರು ಶತಮಾನಗಳ ಕಾಲ ಆಲಯವನ್ನು ವೈಭವೋಪೇತವಾಗಿ ಮಾರ್ಪಾಟು ಮಾಡಿದರು. ರಂಗಮಂಟಪ ವಿಶಾಲವಾದ ಪ್ರಾಂಗಣ ಕೋಟೆಗೋಟೆಯಂತಹ ಮಹಾ ಪ್ರಕಾರವು ಮೂರು ಗಾಳಿ ಗೋಪುರಗಳು ಇವರ ಕಾಲದಲ್ಲಿಯೇ ನಿರ್ಮಾಣಗೊಂಡವು.

ಆಲಯಕ್ಕೆ ದಕ್ಷಿಣವಾಗಿ ಕೆರೆಯ ಬಳಿ ರಾಮತೀರ್ಥವು ಭಕ್ತರನ್ನು ಪರವಶಗೊಳಿಸುತ್ತದೆ. ಅಲ್ಲಿ ಸ್ನಾನವನ್ನು ಮಾಡಿ ಭಕ್ತರು ಸ್ವಾಮಿಯ ದರ್ಶನಕ್ಕಾಗಿ ಬರುತ್ತಾರೆ. ಬ್ರಹ್ಮೋತ್ಸವ ಸಮಯದಲ್ಲಿ ಚಕ್ರಸ್ನಾನವು ಇಲ್ಲಿಯೇ ನಡೆಯುತ್ತದೆ.

ಆಲಯದಲ್ಲಿ ನಿತ್ಯಕೈಂಕರ್ಯಗಳು, ವರ್ಷಪೂರ್ತಿ ಉತ್ಸವಗಳು ನಡೆಯುತ್ತಿರುತ್ತದೆ. ಬ್ರಹ್ಮೋತ್ಸವಗಳು ಚೈತ್ರಶುದ್ಧ ನವಮಿಯಿಂದ 10 ದಿನಗಳ ಕಾಲ ನಡೆಯುತ್ತದೆ. ನವಮಿಯಂದು ರಾಮಜಯಂತಿಯೊಂದಿಗೆ ಪೋತನ ಜಯಂತಿ ನಿರ್ವಹಿಸುತ್ತಾರೆ. ಚರ್ತುದರ್ಶಿಯಂದು ಶ್ರೀ ರಾಮ ಕಲ್ಯಾಣೋತ್ಸವ ನಡೆಯುತ್ತದೆ. ಮಾರನೇಯ ದಿನ ರಥೋತ್ಸವ ಇರುತ್ತದೆ.ಒಂಟಿಮಿಟ್ಟ ಆಲಯದಲ್ಲಿ ಚೈತ್ರಶುದ್ಧ ಚರ್ತುದರ್ಶಿಯಂದು ರಾತ್ರಿ ಕಲ್ಯಾಣ ನಡೆಯುವುದು ವಿಶೇಷ. ಸೀತಾದೇವಿ ಉತ್ತರಫಲ್ಗುಣಿ ನಕ್ಷತ್ರದಲ್ಲಿ ಜನಿಸಿದರು.ಆಕೆಯ ನಕ್ಷತ್ರದಂದೂ ಸೀತಾರಾಮರ ವಿವಾಹ ನಿಶ್ಚಯವಾಯಿತು.ಆ ತ್ರೇತಾಯುಗದಿಂದ ಸಂಪ್ರದಾಯ ಪ್ರಕಾರವೇ ಒಂಟಿಮಿಟ್ಟ ಆಲಯದಲ್ಲಿ ವಿದ್ಯಾರಣ್ಯ ಸ್ವಾಮಿ ಬ್ರಹ್ಮೋತ್ಸವಗಳ ಏರ್ಪಾಟನ್ನು ನಿರ್ಣಯಿಸಿದರು.

20 ನೇ ಶತಮಾನದಲ್ಲಿ ಸ್ವಾಮಿಯ ಸೇವೆ ಮಾಡಿದ ಮಹಾತಪಸ್ವಿಗಳಲ್ಲಿ ವಾಸುದಾಸನಾಗಿ ಪ್ರಖ್ಯಾತಿ ಹೊಂದಿದ ಆಂಧ್ರವಾಲ್ಮೀಕಿ 'ಶ್ರೀ ವಾವಿಲಿಕೋಲನು ಸುಬ್ಬಾರಾವು' ಒಬ್ಬರು.ಈತನು ಆಂಧ್ರಪ್ರದೇಶವೆಲ್ಲಾ ಸಂಚಾರ ಮಾಡಿ ಸಾವಿರಾರು ರೂಪಾಯಿಗಳನ್ನು ಸಂಗ್ರಹಿಸಿ ಈ ಆಲಯದ



ಜೀರ್ಣೋದ್ಧಾರ ಮಾಡಿದ ಧನ್ಯ ಪುರುಷನು. ಈತನು ಒಂಟಿಮಿಟ್ಟ ರಾಮಾಲಯದ ಪುನರುದ್ಧಾರಕ್ಕಾಗಿ ಶ್ರೀ ಮುದಿಪಿರಿ ವೇಂಕಟಸುಬ್ಬರಾಯ ಎನ್ನುವ ವ್ಯಕ್ತಿಯು ಕಮಂಡಲಾಕೃತಿಯಲ್ಲಿ ಕೆತ್ತಿಸಿ ನೀಡಿದ ಕೊಬ್ಬರಿ ಚಿಪ್ಪನ್ನು ಹಿಡಿದು ಆಂಧ್ರ ಪ್ರದೇಶವೆಲ್ಲಾ ಬರಿಗಾಲಿನಲ್ಲಿ ತಿರುಗಿ ಭಿಕ್ಷೆಯನ್ನು ಶೇಖರಿಸಿದ ಧನದಿಂದ ದೇವಾಲಯದ ಪುನರುದ್ಧಾರ ಮಾಡಿದನು ಹಾಗೆಯೇ ರಥ, ರಥಶಾಲೆ, ಸ್ವಾಮಿ ಉತ್ಸವವಾಹನಗಳು, ಆಭರಣಗಳು ಮೊದಲಾದ ಕೈಂಕರ್ಯಗಳನ್ನು ಕೂಡಾ ಮಾಡಿಸಿದ್ದಾನೆ.

## ಆಲಯದಲ್ಲಿ ಸರ್ವೋರ್ತೋಮುಖ ಅಭಿವೃದ್ಧಿ

ತಿರುಮಲೆ ತಿರುಪತಿ ದೇವಸ್ಥಾನವು 100 ಕೋಟಿಯನ್ನು ವೆಚ್ಚಮಾಡಿ ಸೀತಾರಾಮಕಲ್ಯಾಣಕ್ಕಾಗಿ ಕಡಪಕ್ಕೆ ಹೋಗುವ ದಾರಿಯಲ್ಲಿ ವಿಶಾಲವಾದ ಮೈದಾನದಲ್ಲಿ ಕಲ್ಯಾಣ ವೇದಿಕೆಯನ್ನು ನಿರ್ಮಿಸಿ ಅದರಲ್ಲಿ ವಸತಿ ಗೃಹ ಸಮುದಾಯವನ್ನು ತಾತ್ಕಾಲಿಕವಾಗಿ ಏರ್ಪಡಿಸಿದರು. 2016 ರಿಂದ ಲಕ್ಷಗಟ್ಟಲೆ ಭಕ್ತರು ಬಂದು ಕಲ್ಯಾಣ ವೈಭೋಗವನ್ನು ವೀಕ್ಷಿಸುತ್ತಿದ್ದಾರೆ.

## ಆಲಯಸುತ್ತೂ ಇರುವ ಸೊಬಗು

ಆಲಯಕ್ಕೆ ದಕ್ಷಿಣವಾಗಿ ಇರುವ ಕೆರೆಯನ್ನು ಮುಚ್ಚಿಸಿ, ಅಲ್ಲಿ ಒಂದು ಉದ್ಯಾನವನ್ನು ನಿರ್ಮಿಸಿದರು. ಆಲಯದ ಸುತ್ತು ತಿರುಮಾಢ ಬೀದಿಗಳನ್ನು ನಿರ್ಮಿಸಿದರು. ಆಲಯದ ಪೂರ್ವಕ್ಕೆ ಪುಷ್ಕರಣಿಯನ್ನು ನಿರ್ಮಿಸಿದರು. ಆಲಯದಲ್ಲಿ ಅಲಂಕರಣೆ, ಪೂಜೆ,ವೇದಪಠಣ,ಭಕ್ತರಿಗೆ ಪ್ರಸಾದವನ್ನು ಕಲ್ಪಿಸುತ್ತಿದ್ದಾರೆ. ಸಂಜೀವರಾಯಸ್ವಾಮಿ ಆಲಯವನ್ನು ಆಧುನಿಕರಿಸಿದ್ದರು.

ಪ್ರತಿತಿಂಗಳು ಶ್ರವಣ ನಕ್ಷತ್ರದಂದು ನಡೆಯುವ ಸೀತಾರಾಮಕಲ್ಯಾಣೋತ್ಸವದಲ್ಲಿ,ಪ್ರತಿ ಶನಿವಾರ ನಡೆಯುವ ಅಭಿಷೇಕ ಉತ್ಸವಗಳಲ್ಲಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಪ್ರತಿ ಶನಿವಾರ ತಿರುಮಲೆಯಿಂದ ಲಡ್ಡು ಪ್ರಸಾದವು ಬರುತ್ತದೆ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ



# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ (ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿ ನಲ್ಲಿ ಬರಿಯಿರಿ. ಪಿನ್ ಕೋಡ್ ಜೊತೆಗೆ ದೂರವಾಣಿ ಸಂಖ್ಯೆ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ) ☐☐☐☐☐☐

( ದೂರವಾಣಿ ಸಂಖ್ಯೆಯನ್ನು ನಮೂದಿಸಿ) ☐☐☐☐☐☐☐☐☐☐

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಒ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

*ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".*

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ-ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


*Edited and Published on behalf of T.T.Devasthanams by **Dr. K. Radha Ramana**, M.A., M.Phil., Phd., Chief Editor, T.T.D. and Printed at T.T.D. Press by **Sri R.V. Vijaya Kumar,** B.A., B.Ed., Dy. E.O. (Publications & Press), T.T.D. Press, Tirupati - 517 507.*



ತಿರುಮಲ ತಿರುಪತಿ ದೇವಸ್ಥಾನಗಳು

'ಸಪ್ತಗಿರಿ' ಆಧ್ಯಾತ್ಮಿಕ ಮಾಸಪತ್ರಿಕೆ (ಕನ್ನಡ, ತೆಲುಗು, ತಮಿಳು, ಇಂಗ್ಲೀಷ್, ಹಿಂದಿ, ಸಂಸ್ಕೃತ)

ಮನೆಮನೆಗೂ 'ಸಪ್ತಗಿರಿ'! ಇದು ಸ್ವಾಮಿಯ ಅಕ್ಷರಸಿರಿ !

**ಕಲಿಯುಗ ಪ್ರತ್ಯಕ್ಷ ದೈವನಾದ ಶ್ರೀವೇಂಕಟೇಶ್ವರನ ದಿವ್ಯ ವೈಭವ**

**ಪ್ರತಿತಿಂಗಳು ... 'ಸಪ್ತಗಿರಿ' ಪತ್ರಿಕೆಯಲ್ಲಿ ನೋಡಿರಿ...ಓದಿರಿ...**

ಭಗವಂತನನ್ನು ಸಂದರ್ಶಿಸಲು,
ದೇವದೇವನನ್ನು ಸೇರುವುದಕ್ಕೆ ಅನಂತ ಮಾರ್ಗಗಳು,
ಪದ್ಧತಿಗಳು.
ಅನಾಥರಕ್ಷಕನು, ಅಪದ್ರಕ್ಷಕನಾದ ಆ ಸಪ್ತಗಿರೀಶನನ್ನು
ಕೆಲವರು ಅಕ್ಷರಪುಷ್ಪಗಳಿಂದ ಆರಾಧಿಸುತ್ತಾರೆ.

ಸ್ವಾಮಿಯ ಅಕ್ಷರ ಪ್ರಸಾದವಾದ 'ಸಪ್ತಗಿರಿ'ಯನ್ನು
ಓದುವುದು, ಓದಿಸುವುದು ಕೂಡಾ ಅವನಿಗೆ ಮಾಡುವ ಉತ್ತಮ ಸೇವೆಯೇ.

ಪ್ರತಿ ತಿಂಗಳು......... "ಸಪ್ತಗಿರಿ" ಓದಿರಿ... ನಿಮ್ಮ ಆತ್ಮೀಯರಿಂದ ಓದಿಸಿರಿ!
ಪ್ರತಿ ತಿಂಗಳು ಸ್ವಾಮಿಯನ್ನು ಈ ಮೂಲಕ ದರ್ಶಿಸಿ... ತಿರುಮಲೆಯ ವಿಶೇಷಗಳನ್ನು ತಿಳಿದುಕೊಳ್ಳಿ.

ಸಪ್ತಗಿರಿ ಅಭಿವೃದ್ಧಿಗೆ ಆಕಾಂಕ್ಷಿಸಿ
ಸಪ್ತಗಿರಿ ಮಾಸಪತ್ರಿಕೆಗೆ ಚಂದಾವನ್ನು ಕಟ್ಟಿ ಕಟ್ಟಿಸಿರಿ.

**ಚಂದಾ ವಿವರಗಳು**

| | | |
|---|---|---|
| ಬಿಡಿ ಪ್ರತಿ.... | ರೂ. | 5-00 |
| ವಾರ್ಷಿಕ ಚಂದಾ.... | ರೂ. | 60-00 |
| ಅಜೀವ ಚಂದಾ.... | ರೂ. | 500-00 |
| ವಿದೇಶಿ ವಾರ್ಷಿಕ ಚಂದಾ... | ರೂ. | 850-00 |

ಗಮನಿಸಿ - ಸಂಸ್ಕೃತ ಭಾಷೆಗೆ ಅಜೀವ ಚಂದಾ ಇಲ್ಲ.

ಕಾರ್ಯಾಲಯದ ಕೆಲಸದ ದಿನಗಳಲ್ಲಿ
'ಸಪ್ತಗಿರಿ' ಮಾಸಪತ್ರಿಕೆಗೆ ಸಂಬಂಧಿಸಿದ
ಪೂರ್ತಿ ವಿವರಗಳಿಗೆ
ಸಂಪ್ರದಿಸಬೇಕಾದ ದೂರವಾಣಿ ಸಂಖ್ಯೆಗಳು:
ಕಾರ್ಯಾಲಯ : 0877 - 2264543
ಸಿ.ಓ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

ನಮ್ಮ ವಿಳಾಸ
ಪ್ರಧಾನ ಸಂಪಾದಕರು,
'ಸಪ್ತಗಿರಿ' ಮಾಸಪತ್ರಿಕೆ ಕಾರ್ಯಾಲಯ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ.ರಸ್ತೆ, ತಿರುಪತಿ - 517 507.

ಸಲಹೆ/ಸೂಚನೆಗಳು/ದೂರುಗಳಿಗಾಗಿ ಸಂಪ್ರದಿಸಿ

**sapthagiri_helpdesk@tirumala.org**

SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams 25-03-2019
Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

ರಾಮನು ರಾಘವನು ರವಿಕುಲತಿಲಕನೀತನೇ
ಭೂಮಿತನುಜೆಗೆ ಪತಿಯಾದ ಪುರುಷ ಪರೇಶನು
ಹಿಂದೆ ಪುತ್ರಕಾಮೇಷ್ಟಿಯ ಪರಮಾನ್ನದಿಂದ
ವರವಾಗಿ ಜನಿಸಿದ ಪರಬ್ರಹ್ಮನು

- ಅನ್ನಮಯ್ಯ

